ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ನವೆಂಬರ್ 7 ಗುರುವಾರ 2024

ಸಂಪುಟ: 45 | ಸಂಚಿಕೆ: 200 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಲೋಕಾಯುಕ್ತ ವಿಚಾರಣೆಗೆ ಸಿದ್ದರಾಮಯ್ಯ ಹಾಜರು

ತನಿಖಾಧಿಕಾರಿಯಿಂದ ಎರಡು ಗಂಟೆಗಳ ಕಾಲ ಸುದೀರ್ಘ ಪ್ರಶ್ನೆಗಳ ಸುರಿಮಳೆ

- ಖಾಸಗಿ ಕಾರು ಬಳಕೆ, ಎಸ್ಕಾರ್ಟ್ ಬಿಟ್ಟು ಹಿಂಬಾಲಕರ ವಾಹನಗಳಿಗೆ ಕೊಕ್
- ಸಿದ್ದರಾಮಯ್ಯಗೆ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಸಾಥ್







ಮೈಸೂರಿನ ಲೋಕಾಯುಕ್ತ ಕಚೇರಿಗೆ ವಿಚಾರಣೆಗಾಗಿ ಬುಧವಾರ ಕಾರಿನಲ್ಲಿ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ (ಎಡಚಿತ್ರ) ಲೋಕಾಯುಕ್ತ ಕಚೇರಿ ಪ್ರವೇಶಿಸುತ್ತಿರುವ ಸಿದ್ದರಾಮಯ್ಯ (ಮಧ್ಯಚಿತ್ರ), ವಿಚಾರಣೆ ಮುಗಿಸಿ ಸಿದ್ದರಾಮಯ್ಯ ಹೊರಗೆ ಬರುತ್ತಿರುವುದನ್ನು (ಕೊನೆಚಿತ್ರ) ಕಾಣಬಹುದು.

ಮೈಸೂರು, ನ.6(ಬಿಎಲ್‌ಯು)– ನಾಲ್ಕು ದಶಕದ ರಾಜಕೀಯ ಜೀವನ ಕಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಂದು ಅಗ್ನಿಪರೀಕ್ಷೆಯಾಗಿತ್ತು. **ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಶೇ.50:50 ಅನುಪಾತದ ಅಕ್ರಮ ನಿವೇಶನ ಮಂಜೂರಾತಿ ಪ್ರಕರಣದ ಬಗ್ಗೆ ಸಿದ್ದರಾಮಯ್ಯ ಇಂದು ಲೋಕಾಯುಕ್ತ ಪೊಲೀಸರ ವಿಚಾರಣೆಗೆ ಹಾಜರಾದರು. ಸುಮಾರು ಎರಡು ಗಂಟೆಗಳ ಕಾಲ ನಡೆದ ವಿಚಾರಣೆಯಲ್ಲಿ ಲೋಕಾಯುಕ್ತ ತನಿಖಾಧಿಕಾರಿಗಳು ಕೇಳಿದ ಪ್ರಶ್ನೆಗಳಿಗೆ ಸಿದ್ದರಾಮಯ್ಯ ಸಮರ್ಪಕ ಉತ್ತರ ನೀಡಿದರು.**

ಶಾಸಕರಾಗಿ, ಮಂತ್ರಿಯಾಗಿ, ವಿರೋಧ ಪಕ್ಷದ ನಾಯಕರಾಗಿ ಹಾಗೂ ಮುಖ್ಯಮಂತ್ರಿಯಾಗಿ 40 ವರ್ಷಗಳ ರಾಜಕೀಯ ಜೀವನದ ಅನುಭವ ಇರುವ ಸಿದ್ದರಾಮಯ್ಯ ಅವರಿಗೆ ಇಂದು ಕಹಿ ಅನುಭವದ ದಿನವಾಗಿತ್ತು. ಈ ತನಕ ಪೊಲೀಸರ ಒಂದೇ ಒಂದು ವಿಚಾರಣೆಯಲ್ಲಿ ಭಾಗಿಯಾಗದ ಸಿದ್ದರಾಮಯ್ಯ ಅವರಿಗೆ ಇಂದು ಮೊದಲ ಬಾರಿಗೆ ಲೋಕಾಯುಕ್ತರ ವಿಚಾರಣೆಯಲ್ಲಿ ಅನಿವಾರ್ಯವಾಗಿ ಹಾಜರಾಗುವ ಪರಿಸ್ಥಿತಿ ಎದುರಾಗಿತ್ತು.

ಇಂದು ಬೆಳಿಗ್ಗೆ 7.30 ಗಂಟೆಗೆ ಖಾಸಗಿ ಕಾರಿನಲ್ಲಿ ಬೆಂಗಳೂರಿನಿಂದ ರಸ್ತೆ ಮೂಲಕ ಹೊರಟ ಸಿದ್ದರಾಮಯ್ಯ 9.30 ಗಂಟೆಗೆ ಮೈಸೂರಿನ ಸರ್ಕಾರಿ ಅತಿಥಿ ಗೃಹಕ್ಕೆ ಆಗಮಿಸಿದರು. ಈ ವೇಳೆ ಶಿಷ್ಟಾಚಾರದಂತೆ ಸಿದ್ದರಾಮಯ್ಯ ಅವರಿಗೆ ಪೊಲೀಸರು ಗೌರವ ವಂದನೆ ಸಲ್ಲಿಸಿದರು. ತರುವಾಯ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಹಾಗೂ ವಿರಾಜಪೇಟೆ ಶಾಸಕರೂ ಆದ

■ 6ನೇ ಪುಟಕ್ಕೆ

ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ಹಾಲಿ ಸಿಎಂಗೆ ಲೋಕಾಯುಕ್ತರ ವಿಚಾರಣೆ

ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ಹಾಲಿ ಮುಖ್ಯಮಂತ್ರಿಯೊಬ್ಬರು ಲೋಕಾಯುಕ್ತ ಪೊಲೀಸರ ವಿಚಾರಣೆಗೆ ಹಾಜರಾಗಿದ್ದಾರೆ. ಈ ತನಕ ಅಧಿಕಾರ ನಡೆಸಿದ ಬಹಳಷ್ಟು ಮುಖ್ಯಮಂತ್ರಿಗಳ ವಿರುದ್ಧ ಆರೋಪಗಳು ಕೇಳಿ ಬಂದಿವೆ. ಆದರೆ ಯಾರೂ ಕೂಡ ಮುಖ್ಯಮಂತ್ರಿ ಸ್ಥಾನದಲ್ಲಿರುವ ವೇಳೆ ಲೋಕಾಯುಕ್ತ ಪೊಲೀಸರ ವಿಚಾರಣೆಗೆ ಒಳಪಟ್ಟಿಲ್ಲ. ರಾಮಕೃಷ್ಣ ಹೆಗಡೆ, ಯಡಿಯೂರಪ್ಪ ಸೇರಿದಂತೆ ಬಹಳಷ್ಟು ರಾಜಕಾರಣಿಗಳು ಕೂಡ ಪೊಲೀಸರ ವಿಚಾರಣೆಯಲ್ಲಿ ಭಾಗಿಯಾಗಿದ್ದರೂ ಯಾರೂ ಕೂಡ ಆ ವೇಳೆ ಮುಖ್ಯಮಂತ್ರಿ ಹುದ್ದೆಯಲ್ಲಿ ಇರಲಿಲ್ಲ.

ವಿಚಾರಣೆಯಲ್ಲಿ ಸುಳ್ಳು ಆರೋಪಕ್ಕೆ ಸತ್ಯ ಹೇಳಿದ್ದೇನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

- ವಿಚಾರಣೆಯಿಂದ ಮುಜುಗರವಾಗಿಲ್ಲ
- ನನ್ನಲ್ಲಿ ದಾಖಲಾತಿ ಇಲ್ಲ, ಅವರು ಕೇಳಿಲ್ಲ
- ಬಿಜೆಪಿಗೆ ಕಾನೂನು ಮೇಲೆ ಗೌರವವಿಲ್ಲ

ಮೈಸೂರು, ನ.6(ಬಿಎಲ್‌ಯು)–ತಮ್ಮ ವಿರುದ್ಧ ದಾಖಲಾಗಿರುವ ಮುಡಾ ಪ್ರಕರಣ ಸಂಬಂಧ ಲೋಕಾಯುಕ್ತರ ವಿಚಾರಣೆಯಲ್ಲಿ ನನ್ನ ಮೇಲಿನ ಸುಳ್ಳು ಆರೋಪಕ್ಕೆ ಸತ್ಯ ಹೇಳಿದ್ದು, ಈ ವಿಚಾರಣೆಯಿಂದ ನನಗೆ ಯಾವುದೇ ರೀತಿಯಲ್ಲೂ ಮುಜುಗರವಾಗಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನಲ್ಲಿ ಇಂದು ಲೋಕಾಯುಕ್ತ ವಿಚಾರಣೆಯಲ್ಲಿ ಭಾಗವಹಿಸಿದ ನಂತರ ಸರ್ಕಾರಿ ಅತಿಥಿ ಗೃಹದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಲೋಕಾಯುಕ್ತರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ವಾದ ಉತ್ತರ ನೀಡಿದ್ದೇನೆ. ಲೋಕಾಯುಕ್ತರು ನನ್ನ ವಿಚಾರಣೆಯನ್ನು ರೆಕಾರ್ಡ್ ಮಾಡಿಕೊಂಡಿದ್ದಾರೆ ಎಂದರು.

ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ನಾನು ನನ್ನ ಮೇಲಿನ ಆರೋಪಕ್ಕೆ ಸತ್ಯ ತಿಳಿಸಿದ್ದೇನೆ. ಇದರಿಂದ ನನಗೇಕೆ ಮುಜುಗರವಾಗುತ್ತದೆ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಇದರಲ್ಲಿ ಮುಜುಗರ ಪಡುವ ಸಂಗತಿ ಏನಿದೆ ಎಂದು ಮರು ಪ್ರಶ್ನಿಸಿದರು. ಮುಡಾ ಪ್ರಕರಣ ಸಂಬಂಧ ನನ್ನ ಬಳಿ ಯಾವುದೇ ದಾಖಲಾತಿ ಇಲ್ಲ. ಅಲ್ಲದೆ ಲೋಕಾಯುಕ್ತರು ನನ್ನಿಂದ ಯಾವುದೇ ದಾಖಲಾತಿ ಕೇಳಿಲ್ಲ. ಮತ್ತೆ ವಿಚಾರಣೆಗೆ ಬರುವಂತೆ ಕೂಡ ಹೇಳಿಲ್ಲ ಎಂದು ತಿಳಿಸಿದರು. ಲೋಕಾಯುಕ್ತ ವಿಚಾರಣೆಯಲ್ಲಿ ಭಾಗವಹಿಸುತ್ತಿರುವ ಹಿನ್ನೆಲೆ ಬಿಜೆಪಿ ಹಮ್ಮಿಕೊಂಡಿರುವ 'ಗೋ ಬ್ಯಾಕ್ ಸಿಎಂ' ಪ್ರತಿಭಟನೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ದೂರುದಾರ ಸ್ನೇಹಮಯಿ ಕೃಷ್ಣ ಕೋರಿಕೆಯಂತೆ ರಾಜ್ಯಪಾಲರ ಆದೇಶದಂತೆ ಲೋಕಾಯುಕ್ತ ವಿಚಾರಣೆ ನಡೆಯುತ್ತಿದೆ.

■ 6ನೇ ಪುಟಕ್ಕೆ

ಇದು ನನ್ನ ರಾಜಕೀಯ ಜೀವನಕ್ಕೆ ಕಪ್ಪು ಮಸಿ ಅಲ್ಲ

ಮುಡಾ ಪ್ರಕರಣದ ಹಿನ್ನೆಲೆ ಲೋಕಾಯುಕ್ತ ವಿಚಾರಣೆಯಲ್ಲಿ ಭಾಗವಹಿಸಿರುವುದು ನನ್ನ ರಾಜಕೀಯ ಜೀವನಕ್ಕೆ ಕಪ್ಪು ಮಸಿ ಅಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ನ್ಯಾಯಾಲಯದಲ್ಲಿ ಈ ಪ್ರಕರಣ ತೀರ್ಮಾನವಾಗುವವರೆಗೆ ಇದು ಆರೋಪವಷ್ಟೆ. ಇದು ನನ್ನ ರಾಜಕೀಯ ಜೀವನಕ್ಕೆ ಕಪ್ಪು ಮಸಿ ಆಗುವುದಿಲ್ಲ. ನನ್ನ ಮೇಲಿನ ಆರೋಪಕ್ಕೆ ನ್ಯಾಯಾಲಯದಲ್ಲಿ ತಕ್ಕ ಉತ್ತರ ನೀಡುತ್ತೇನೆ ಎಂದರು. ಇಂತಹ ಸವಾಲುಗಳನ್ನು ನಾನು ಸಮರ್ಥವಾಗಿ ಎದುರಿಸುತ್ತೇನೆ. ಕಾನೂನಾತ್ಮಕವಾದ ಹೋರಾಟದಲ್ಲಿ ನನ್ನ ವಕೀಲರು ನನ್ನ ವಿರುದ್ಧದ ಆರೋಪಗಳಿಗೆ ತಕ್ಕ ಉತ್ತರ ನೀಡುತ್ತಾರೆ ಎಂದು ತಿಳಿಸಿದರು.

ಬಿಜೆಪಿಯಿಂದ 'ಗೋ ಬ್ಯಾಕ್ ಮುಖ್ಯಮಂತ್ರಿ' ಪ್ರತಿಭಟನೆ

ಶಾಸಕ ಶ್ರೀವತ್ಸ ಸೇರಿ ಹಲವು ಕಾರ್ಯಕರ್ತರ ಬಂಧನ, ಬಿಡುಗಡೆ



ಮುಖ್ಯಮಂತ್ರಿ ರಾಜೀನಾಮೆಗೆ ಒತ್ತಾಯಿಸಿ, ರಾಮಸ್ವಾಮಿ ವೃತ್ತದಲ್ಲಿ 'ಗೋ ಬ್ಯಾಕ್ ಮುಖ್ಯಮಂತ್ರಿ' ಪ್ರತಿಭಟನೆ ಮಾಡಲು ಮುಂದಾದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

ಮೈಸೂರು, ನ.6(ಜಿಎ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಹಗರಣದಲ್ಲಿ ಲೋಕಾಯುಕ್ತ ಕಚೇರಿಯಲ್ಲಿ ತನಿಖೆ ಎದುರಿಸುತ್ತಿರುವ ಮುಖ್ಯಮಂತ್ರಿ ರಾಜೀನಾಮೆ ನೀಡಲಿ ಎಂದು ಒತ್ತಾಯಿಸಿ ರಾಮಸ್ವಾಮಿ ವೃತ್ತದಲ್ಲಿ 'ಗೋ ಬ್ಯಾಕ್ ಮುಖ್ಯಮಂತ್ರಿ' ಪ್ರತಿಭಟನೆ ಮಾಡಲು ಮುಂದಾದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಪೊಲೀಸರು ಮುನ್ನೆಚ್ಚರಿಕೆ ಕ್ರಮವಾಗಿ ಬಂಧಿಸಿ, ಬಿಡುಗಡೆ ಮಾಡಿದರು.

ನಗರದ ರಾಮಸ್ವಾಮಿ ವೃತ್ತದ ಜಯಲಕ್ಷ್ಮೀ ವಿಲಾಸ ರಸ್ತೆಯಲ್ಲಿ ಪ್ರತಿಭಟನಾಕಾರರು ಜಮಾಯಿಸುತ್ತಿದ್ದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ರಸ್ತೆಗೆ ಅಡ್ಡಲಾಗಿ ಕೆಎಸ್‌ಆರ್‌ಪಿ ವಾಹನ ನಿಲ್ಲಿಸಿದರು. ಆದರೆ, ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಬಂಧಿಸಲು ಮುಂದಾದರು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಮೇಯರ್

■ 6ನೇ ಪುಟಕ್ಕೆ

ಎಲೆಕ್ಟ್ರಾನಿಕ್ ಮೀಡಿಯಾಗಳಲ್ಲಿ ಬಿತ್ತರವಾಗುತ್ತಿರುವ ಪ್ರಶ್ನಾವಳಿ ನಮ್ಮದಲ್ಲ

ಮೈಸೂರು ಲೋಕಾಯುಕ್ತ ಎಸ್ಪಿ ಉದೇಶ್ ಸ್ಪಷ್ಟನೆ



ಉದೇಶ್

ಮೈಸೂರು, ನ.6– ಲೋಕಾಯುಕ್ತ ವಿಚಾರಣೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಲೋಕಾಯುಕ್ತ ಪೊಲೀಸರು ಕೇಳಿದ ರೆನ್ನಲಾದ ಪ್ರಶ್ನೆಗಳ ಬಗ್ಗೆ ಸುದ್ದಿ ಮಾಧ್ಯಮಗಳು ಪ್ರಸಾರ ಮಾಡಿದ್ದು, ಈ ಬಗ್ಗೆ ಸ್ಪಷ್ಟನೆ ನೀಡಿರುವ ಮೈಸೂರು ಲೋಕಾಯುಕ್ತ ಎಸ್ಪಿ ಉದೇಶ್ ಅವರು, ಎಲೆಕ್ಟ್ರಾನಿಕ್ ಮೀಡಿಯಾಗಳಲ್ಲಿ ಬಿತ್ತರವಾಗುತ್ತಿರುವ ಪ್ರಶ್ನಾವಳಿಗಳಿಗೂ ಲೋಕಾಯುಕ್ತಕ್ಕೂ ಸಂಬಂಧವಿಲ್ಲ. ಟಿವಿಗಳಲ್ಲಿ ಬರುತ್ತಿರುವ ಪ್ರಶ್ನೆಗಳು ನಮ್ಮದಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಬೆಳಗ್ಗೆ ಲೋಕಾಯುಕ್ತ ಕಚೇರಿಗೆ ಆಗಮಿಸಿ ವಿಚಾರಣೆ ಪೂರ್ಣಗೊಳಿಸಿ ಸ್ಥಳದಿಂದ ತೆರಳಿದ ಬಳಿಕ ಲೋಕಾಯುಕ್ತ ಎಸ್ಪಿ ಉದೇಶ್ ಮಾಧ್ಯಮಗಳ ಜತೆ ಔಪಚಾರಿಕವಾಗಿ ಮಾತನಾಡಿದರು.

ಈ ವೇಳೆ ಮಾಧ್ಯಮಗಳಲ್ಲಿ ಸಿಎಂ ಸಿದ್ದರಾಮಯ್ಯ ಅವರ ವಿಚಾರಣೆ ಸಂಬಂಧ ಪ್ರಸಾರವಾಗುತ್ತಿರುವ ಸುದ್ದಿಗಳು ಹಾಗೂ ಪ್ರಶ್ನಾವಳಿಗಳ ಬಗ್ಗೆ ಮುದ್ರಣ ಮಾಧ್ಯಮದ ಪತ್ರಕರ್ತರು ಪ್ರಶ್ನಿಸಿದರು. ಆಗ ಇದಕ್ಕೆ ಪ್ರತಿಕ್ರಿಯೆಯಾಗಿ ಇದು ನಮ್ಮ ಪ್ರಶ್ನೆಗಳಲ್ಲ. ಟಿವಿಯವರ ಪ್ರಶ್ನೆಗಳು ಎಂದು ಉತ್ತರಿಸಿದರು. ಸಿಎಂ ಸಿದ್ದರಾಮಯ್ಯ ಅವರ

■ 6ನೇ ಪುಟಕ್ಕೆ

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು

ಪಿಎಂ ವಿದ್ಯಾಲಕ್ಷ್ಮಿ ಯೋಜನೆಗೆ ಕೇಂದ್ರ ಸಂಪುಟದ ಅನುಮೋದನೆ



ನವದೆಹಲಿ, ನ.6– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು ಪಿಎಂ ವಿದ್ಯಾಲಕ್ಷ್ಮಿ ಯೋಜನೆಗೆ ಅನುಮೋದನೆ ನೀಡಿದೆ. ಇದು ಕೇಂದ್ರ ವಲಯದ ಹೊಸ ಯೋಜನೆಯಾಗಿದ್ದು, ಆರ್ಥಿಕ ನಿರ್ಬಂಧಗಳಿಂದಾಗಿ ಉನ್ನತ ಅಧ್ಯಯನದಿಂದ ವಂಚಿತರಾಗುವುದನ್ನು ತಡೆಯಲು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯವನ್ನು ಒದಗಿಸುವ ಗುರಿಯನ್ನು ಹೊಂದಿದೆ.

ಪ್ರಧಾನಮಂತ್ರಿ ವಿದ್ಯಾಲಕ್ಷ್ಮಿಯು 2020ರ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಹೊರಹೊಮ್ಮುವ ಮತ್ತೊಂದು ಪ್ರಮುಖ ಉಪಕ್ರಮವಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯು ಸಾರ್ವಜನಿಕ ಮತ್ತು ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಕ್ರಮಗಳ ಮೂಲಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ಲಭ್ಯವಾಗುವಂತೆ ಮಾಡಲು ಶಿಫಾರಸು ಮಾಡಿದೆ. ಪ್ರಧಾನ ಮಂತ್ರಿ ವಿದ್ಯಾಲಕ್ಷ್ಮಿ ಯೋಜನೆಯಡಿಯಲ್ಲಿ, ಗುಣಮಟ್ಟದ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ

■ 6ನೇ ಪುಟಕ್ಕೆ

ಅಮೆರಿಕ ಅಧ್ಯಕ್ಷೀಯ ಚುನಾವಣೆ

ಟ್ರಂಪ್‌ಗೆ ಐತಿಹಾಸಿಕ ಗೆಲುವು



ನ್ಯೂಯಾರ್ಕ್: ಭಾರಿ ಕುತೂಹಲ ಮೂಡಿಸಿದ್ದ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಐತಿಹಾಸಿಕ ಗೆಲುವು ದಾಖಲಿಸಿದ್ದಾರೆ. ಅಮೆರಿಕದ 47ನೇ ಅಧ್ಯಕ್ಷರಾಗಲು ಸಜ್ಜಾಗಿರುವ ಟ್ರಂಪ್, ವಿಶ್ವದ ದೊಡ್ಡಣ್ಣ ರಾಷ್ಟ್ರದಲ್ಲಿ 2ನೇ ಬಾರಿಗೆ ಚುಕ್ಕಾಣಿ ಹಿಡಿದು ಇತಿಹಾಸ ಸೃಷ್ಟಿಸಲಿದ್ದಾರೆ.

ಈ ಚುನಾವಣೆಯಲ್ಲಿ ವಿಜೇತರನ್ನು ನಿರ್ಧರಿಸುವ ಎಲೆಕ್ಟೋರಲ್ ಕಾಲೇಜ್ (ಚುನಾಯಿತರ ಕೂಟ) ಸಂಖ್ಯೆಗಳಿಗೆ ಸಂಬಂಧಿಸಿದಂತೆ, ಟ್ರಂಪ್ 267 ಮತಗಳೊಂದಿಗೆ ಗೆಲುವು ಸಾಧಿಸಿದರೆ, ಡೆಮಾಕ್ರಟಿಕ್ ಅಧ್ಯಕ್ಷೀಯ ಅಭ್ಯರ್ಥಿ ಕಮಲಾ ಹ್ಯಾರಿಸ್ 214 ಮತಗಳೊಂದಿಗೆ ಹಿನ್ನಡೆ ಅನುಭವಿಸಿದ್ದಾರೆ. ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ನಿರ್ಣಾಯಕವೇ ಆಗಿರುವ 7 ಸ್ವಿಂಗ್ ರಾಜ್ಯಗಳ ಪೈಕಿ ನಾಲ್ಕರಲ್ಲಿ ಟ್ರಂಪ್ ಜಯಭೇರಿ ಬಾರಿಸಿದ್ದಾರೆ. ರಿಪಬ್ಲಿಕನ್ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಪೆನ್ಸಿಲ್ವೇನಿಯಾ, ಜಾರ್ಜಿಯಾ, ನಾರ್ತ್ ಕೆರೊಲಿನಾ, ಟೆಕ್ಸಾಸ್, ಫ್ಲೋರಿಡಾ, ಇಂಡಿಯಾನಾ, ಕೆಂಟುಕಿ ಒಳಗೊಂಡಂತೆ 30 ಕ್ಕೂ ಹೆಚ್ಚು ರಾಜ್ಯಗಳಲ್ಲಿ ಗೆಲುವು ದಾಖಲಿಸಿದ್ದರೆ, ಡೆಮಾಕ್ರಟಿಕ್ ಅಭ್ಯರ್ಥಿ ಕಮಲಾ ಹ್ಯಾರಿಸ್ ಕೇವಲ 20 ರಾಜ್ಯಗಳಲ್ಲಿ ಜಯಗಳಿಸಿದ್ದಾರೆ. ರಿಪಬ್ಲಿಕನ್ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಭರ್ಜರಿ ಗೆಲುವು ದಾಖಲಿಸಿದ್ದಾರೆ. ಈ ಬೆನ್ನಲ್ಲೆ ಮಾತನಾಡಿರುವ ಟ್ರಂಪ್, ನಾವು ನಮ್ಮ ದೇಶವನ್ನು ಸರಿಪಡಿಸುತ್ತೇವೆ ಎಂದು ಪ್ರತಿಜ್ಞೆ ಮಾಡಿದ್ದಾರೆ. ಡೊನಾಲ್ಡ್ ಟ್ರಂಪ್ ತಮ್ಮ ಗೆಲುವಿನ ಸಂಭ್ರಮಾಚರಣೆಗೆ ಮುಂದಾದರು. ಫ್ಲೋರಿಡಾದಲ್ಲಿನ ಅವರ ಪ್ರಚಾರ ಪ್ರಧಾನ ಕಚೇರಿಯಲ್ಲಿ ಪತ್ನಿ ಮೆಲಾನಿಯಾ

■ 11ನೇ ಪುಟಕ್ಕೆ

ಮೈಸೂರು ಮಿತ್ರ ಗುರುವಾರ 7 ನವೆಂಬರ್ 2024

ಚನ್ನಪಟ್ಟಣದಲ್ಲಿ ಯೋಗೇಶ್ವರ್ ಪರ ಡಾ.ಯತೀಂದ್ರ, ಸುಬ್ರಹ್ಮಣ್ಯ ಪ್ರಚಾರ



ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಕ್ಷೇತ್ರದ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ, ಮತಯಾಚನೆ ಮಾಡಿದರು.

ಚನ್ನಪಟ್ಟಣ, ನ.6– ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಪರ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯನವರು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ, ಮತಯಾಚನೆ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಯೋಗೇಶ್ವರ್ ಅವರು ಕ್ಷೇತ್ರದ ಕೆರೆಗಳಿಗೆ ನೀರು ತುಂಬಿಸಲು ತಮ್ಮ ಶಕ್ತಿ ಮೀರಿ ಕೆಲಸ ಮಾಡಿದ್ದಾರೆ. ಇಂಥವರಿಗೆ ನೀವು ಮತ ನೀಡಿದರೆ ಇನ್ನೂ ಹೆಚ್ಚು ಅಭಿವೃದ್ಧಿ ಕಾಣಲು ಸಾಧ್ಯವಾಗುತ್ತದೆ. ಜನತೆಯ ಆಶೀರ್ವಾದದಿಂದ 136 ಶಾಸಕರ ಬಲದೊಂದಿಗೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಸರ್ಕಾರದ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ, ಜನರಿಗೆ ತಪ್ಪು ಸಂದೇಶ ನೀಡುತ್ತಿರುವ ಬಿಜೆಪಿ, ಜೆಡಿಎಸ್ ಪಕ್ಷವನ್ನು ಈ ಚುನಾವಣೆಯಲ್ಲಿ ಸೋಲಿಸುವ ಮುಖಾಂತರ ತಕ್ಕ ಉತ್ತರ ನೀಡಬೇಕಾಗುತ್ತದೆ ಎಂದು ಮತದಾರರಲ್ಲಿ ಮನವಿ ಮಾಡಿದರು.

ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿ, ಚನ್ನಪಟ್ಟಣ ಕ್ಷೇತ್ರದ ಅಭಿವೃದ್ಧಿಗೆ ಕಟಿಬದ್ಧರಾಗಿರುವ ಸಿ.ಪಿ.ಯೋಗೇಶ್ವರ್ ಅವರನ್ನು ಗೆಲ್ಲಿಸುವ ಮೂಲಕ ಸಿಎಂ ಸಿದ್ದರಾಮಯ್ಯ ಹಾಗೂ ರಾಮನಗರ ಜಿಲ್ಲೆಯ ಮಗನಾದ ಡಿಸಿಎಂ ಡಿ.ಕೆ.ಶಿವಕುಮಾರ್ ಕೈ ಬಲಪಡಿಸಬೇಕು. ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳು ಮತ್ತಷ್ಟು ಹೆಚ್ಚಾಗುವಂತೆ ನೋಡಿಕೊಳ್ಳಬೇಕು ಎಂದು ಕೋರಿದರು.

ಮಂಡ್ಯ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್, ಚನ್ನಪಟ್ಟಣ ತಾಲೂಕು ಕುರುಬರ ಸಂಘದ ಅಧ್ಯಕ್ಷ ನಾಗಣ್ಣ, ಮುಖಂಡರಾದ ಬಿಬಿಎಂಪಿ ಮಾಜಿ ಸದಸ್ಯರಾದ ಕೃಷ್ಣಮೂರ್ತಿ, ರಾಜೇಶ್, ನಾಗೇಂದ್ರ, ನವಿಲೇಷ, ಬಸವರಾಜು ಸೇರಿದಂತೆ ಅನೇಕ ಸ್ಥಳೀಯ ಮುಖಂಡರು ಹಾಜರಿದ್ದರು.

ಸಿದ್ದರಾಮಯ್ಯ ಪರ ಕದಸಂಸ ಅರೆಬೆತ್ತಲೆ ಮೆರವಣಿಗೆ



ಮುಡಾ ಪ್ರಕರಣವನ್ನು ನೆಪವಾಗಿಟ್ಟುಕೊಂಡು ಸಿದ್ದರಾಮಯ್ಯನವರ ಸರ್ಕಾರ ದುರ್ಬಲಗೊಳಿಸುವ ಬಿಜೆಪಿ ಮತ್ತು ಜೆಡಿಎಸ್ ಷಡ್ಯಂತ್ರ ಖಂಡಿಸಿ, ಮೈಸೂರಲ್ಲಿ ರಾಜ್ಯ ದಲಿತ ಸಂಘರ್ಷ ಸಮಿತಿ (ಜಿಲ್ಲಾ ಶಾಖೆ)ಯವರು ಅರೆಬೆತ್ತಲೆ ಮೆರವಣಿಗೆ ಮಾಡಿದರು.

ಮೈಸೂರು, ನ.6(ಜಿಎ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಪ್ರಕರಣವನ್ನು ನೆಪವಾಗಿಟ್ಟುಕೊಂಡು ಚುನಾಯಿತ ಸರ್ಕಾರ ಪತನಗೊಳಿಸಿ, ಸಿದ್ದರಾಮಯ್ಯನವರ ಸರ್ಕಾರ ದುರ್ಬಲಗೊಳಿಸಲು ಬಿಜೆಪಿ ಮತ್ತು ಜೆಡಿಎಸ್ ಷಡ್ಯಂತ್ರ ನಡೆಸುತ್ತಿವೆ ಎಂದು ಆಪಾದಿಸಿ ಮೈಸೂರಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಜಿಲ್ಲಾ ಶಾಖೆ)ಯವರು ಅರೆಬೆತ್ತಲೆ ಮೆರವಣಿಗೆ ಮಾಡಿದರು.

ನಗರದ ಚಾಮುಂಡಿ ವಿಹಾರ್ ಕ್ರೀಡಾಂಗಣದ ಮುಂಭಾಗ ಜಮಾವಣೆಗೊಂಡ ಪ್ರತಿಭಟನಾಕಾರರು ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಜನರು ಆಯ್ಕೆ ಮಾಡಿರುವ ಸರ್ಕಾರವನ್ನು ಪತನಗೊಳಿಸಿ, ಹಿಂದುಳಿದ ವರ್ಗಗಳ ನಾಯಕ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ದುರ್ಬಲಗೊಳಿಸಲು ಷಡ್ಯಂತ್ರ ನಡೆಸುತ್ತಿವೆ ಎಂದು ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಜಿಲ್ಲಾ ಸಂಚಾಲಕ ಮಲ್ಲೇಶ್ ಚುಂಚನಹಳ್ಳಿ ಮಾತನಾಡಿ, ಸಂವಿಧಾನ ಪ್ರಜಾಪ್ರಭುತ್ವ ವಾದಿಗಳನ್ನು, ಮನುವಾದವನ್ನು ಪ್ರತಿಪಾದಿಸುವ ಕೇಂದ್ರ ಬಿಜೆಪಿ ಸರ್ಕಾರ ಸಂವಿಧಾನಿಕ ಸಂಸ್ಥೆಗಳಾದ ಇಡಿ, ಐಟಿ, ಸಿಬಿಐ, ರಾಜಭವನದ ಮೂಲಕವೇ ಮಟ್ಟ ಹಾಕುವ ಬಾಯಿ ಮುಚ್ಚಿಸುವ ಫ್ಯೂಡಲ್ ರಾಜಕಾರಣದ ಮಾದರಿಯೊಂದು ದೇಶದಲ್ಲಿ ಸದ್ಯ ಚಾಲ್ತಿಯಲ್ಲಿದ್ದು, ಇದರ ಭಾಗವಾಗಿಯೇ ಸಿದ್ದರಾಮಯ್ಯ ಅವರ ವಿರುದ್ಧ ಮುಡಾ ಪ್ರಕರಣವನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಲೋಕಾಯುಕ್ತ ಪೊಲೀಸರು ಮುಖ್ಯಮಂತ್ರಿಗಳ ವಿರುದ್ಧ ಎಫ್ಐಆರ್ ದಾಖಲಿಸಿರುವ ಹಿನ್ನೆಲೆಯಲ್ಲಿ ಅವರು ರಾಜೀನಾಮೆ ಕೊಡಬೇಕು ಎಂದು ಬಿಜೆಪಿ ನಾಯಕರು ಹೋರಾಟ ಪ್ರಾರಂಭಿಸಿದ್ದಾರೆ. ಹೋರಾಟದ ತಾರ್ಕಿಕ ಅಂತ್ಯ ಯಾರ್ ಯಾರ ಮನೆ ಬಾಗಿಲು ತಟ್ಟಬಹುದು ಎಂಬ ಕನಿಷ್ಠ ಸಾಮಾನ್ಯ ಜ್ಞಾನವಾದರೂ ಆ ನಾಯಕರಿಗಿದೆಯೇ ಎಂದರು.

ಎಫ್ಐಆರ್ ಆಗಿರುವ ಕಾರಣಕ್ಕೆ ರಾಜೀನಾಮೆ ನೀಡಬೇಕೆಂದು ಮಾನದಂಡವನ್ನು ನಿಗದಿಪಡಿಸಿದರೆ ಸಿದ್ದರಾಮಯ್ಯ ಅವರು ಮಾತ್ರವಲ್ಲ. ಪ್ರಧಾನ ಮಂತ್ರಿ ಮೋದಿಯವರ ಸಂಪುಟದ ಕನಿಷ್ಠ 24 ಸಚಿವರು ರಾಜೀನಾಮೆ ನೀಡಬೇಕಾಗುತ್ತದೆ. ಉನ್ನತ ಅಧಿಕಾರದಲ್ಲಿದ್ದು ರಾಜಧರ್ಮವನ್ನು ಮರೆತು ಜಾತಿ ಧರ್ಮದ ಹೆಸರಿನಲ್ಲಿ ಜನಾಂಗೀಯ ಹತ್ಯೆಗಳನ್ನು ತಡೆಯಲು ವಿಫಲರಾದರು. ವಿಶ್ವ ಗುರು ವಿನಂತೆಯೂ ಯುದ್ಧ ನಿರತ ಜಾಗತಿಕ ರಾಷ್ಟ್ರಗಳ ನಡುವಿನ ಸಂಧಾನದ ಶಾಂತಿದೂತರಂತೆಯೂ ಮುಖವಾಡ ಧರಿಸಿರುವುದನ್ನು ನೋಡುವಂತಾಗಿದೆ ಎಂದು ಅವರು ಕಟುವಾಗಿ ಟೀಕಿಸಿದರು.

ಧರ್ಮ, ಧರ್ಮಗಳ ನಡುವೆ ಸೌಹಾರ್ದತೆಗೆ ದುಡಿಯುವ ಬಡ ಬಗ್ಗರಿಗೆ, ಅಸಹಾಯಕರಿಗೆ, ದಲಿತರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಶಕ್ತಿ ತುಂಬುವ ಐದು ಗ್ಯಾರಂಟಿಗಳನ್ನು ಕೊಟ್ಟ ಸಿದ್ದರಾಮಯ್ಯ ಅವರ ನೈತಿಕತೆಯನ್ನು ಪ್ರಶ್ನಿಸುವುದು ವಿಪರ್ಯಾಸ ಅಲ್ಲವೇ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದರು.

ಚಾಮುಂಡಿ ವಿಹಾರ ಕ್ರೀಡಾಂಗಣದಿಂದ ಆರಂಭವಾದ ಅರೆಬೆತ್ತಲೆ ಮೆರವಣಿಗೆಯು ಮಲೆಮಹದೇಶ್ವರ ರಸ್ತೆ ಮೂಲಕ ಸಿದ್ದಾರ್ಥ ಬಡಾವಣೆಯಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ತಲುಪಿ, ಮನವಿ ಸಲ್ಲಿಸಿದರು. ಈ ವೇಳೆ ಸಂಚಾಲಕರಾದ ಇಟ್ನ ರಾಜಣ್ಣ, ಕೃಷ್ಣ ಕೊಳಗಟ್ಟ, ಹನುಮಂತರಾಜು, ಸುರೇಶ್, ರಂಗನಾಥ್, ಶ್ರೀನಿವಾಸ್, ಮಹದೇವ್, ರಾಜು ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಪೊಲೀಸ್ ಅಕಾಡೆಮಿ ಗೌರವ ಸಲಹೆಗಾರರಿಗೆ ಅಭಿನಂದನೆ



ಪೊಲೀಸ್ ಅಕಾಡೆಮಿಯಲ್ಲಿ ಗೌರವ ಸಲಹೆಗಾರ ಹಾಗೂ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದ ಜಯಪ್ರಕಾಶ್‌ರಾವ್ ಅವರನ್ನು ನಗರ ಪೊಲೀಸ್ ಆಯುಕ್ತೆ ಶ್ರೀಮತಿ ಸೀಮಾ ಲಾಟ್ಕರ್ ಹಾಗೂ ಉಪ ಆಯುಕ್ತ ಮುತ್ತುರಾಜ್ ಅಭಿನಂದಿಸಿದರು.

ಸಂಹಿತ್ ಕಶ್ಯಪ್‌ಗೆ ಐಬಿಆರ್ ಅಚೀವರ್ ಪ್ರಶಸ್ತಿ



ಮೈಸೂರು,ನ.6–ಮೈಸೂರಿನ ಜಯನಗರ ನಿವಾಸಿ ಎಂ.ಎಸ್. ಸಂದೀಪ್ ಮತ್ತು ಎನ್.ನಮ್ರತಾ ದಂಪತಿ ಪುತ್ರ 5 ವರ್ಷ 1 ತಿಂಗಳ ವಯಸ್ಸಿನ ಸಂಹಿತ್ ಕಶ್ಯಪ್ ಎಂ.ಎಸ್. ಅಸಾಧಾರಣ ಸಾಧನೆ ಮಾಡಿದ್ದಾನೆ. ಸಂಹಿತ್ 150 ಕಾರು, 53 ವಾಹನಗಳು, 50 ಕಾರು ಲೋಗೋ, 45 ದೇವತೆಗಳು, 32 ದೇಹದ ಅಂಗಗಳು, 25 ಆಕಾರ, 25 ಸೆಲೆಬ್ರಿಟಿ, 44 ಪ್ರಾಣಿಗಳು, 22 ಪಕ್ಷಿಗಳು, 23 ಹಣ್ಣುಗಳು, 22 ಹೂವುಗಳು, 22 ಆಹಾರ ಪದಾರ್ಥಗಳು, 22 ಜಂಕ್ ಫುಡ್ ಐಟಂ, 22 ಆಟಿಕೆಗಳು, 11 ಸೂಪರ್ ಹೀರೋಗಳು, 11 ಬಣ್ಣಗಳು, 11 ವಿರುದ್ಧ ಪದಗಳು, 22 ಮಗುವಿನ ವಸ್ತುಗಳನ್ನು ಗುರುತಿಸಿ ಸಾಧನೆ ಮಾಡಿದ್ದಾನೆ. ಜೊತೆಗೆ 25 ಶ್ಲೋಕಗಳ ಪಠನೆ, 17 ಜಿಕೆ ಪ್ರಶ್ನೆಗಳಿಗೆ ಉತ್ತರಿಸಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ವತಿಯಿಂದ ಐಬಿಆರ್ ಅಚೀವರ್ ಪ್ರಶಸ್ತಿ ಪಡೆದುಕೊಂಡಿದ್ದಾನೆ.

ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕೃತ ವೈದ್ಯೆಗೆ ಅಭಿನಂದನೆ



ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕೃತರಾದ ಮೂಳೆ ವೈದ್ಯೆ ಹೆಚ್.ಪಿ. ಶೋಭಾ ಅವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಎಸ್‌ಟಿ ವಿಭಾಗದ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಹಾಯಕ ಪ್ರಾಧ್ಯಾಪಕ ಡಾ.ನಂಜುಂಡಸ್ವಾಮಿ, ಟೆನ್ನಿಸ್ ಗೋಪಿ, ನಿಂಗರಾಜು ಅಭಿನಂದಿಸಿದರು.

ಕಿಸಾನ್ ಮಾಲ್ ಸ್ಥಾಪನೆಗೆ ಅರ್ಜಿ ಆಹ್ವಾನ

ಮೈಸೂರು, ನ.6–2024–25ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಕರ್ಜನ್ ಪಾರ್ಕ್‌ನ ತೋಟಗಾರಿಕೆ ಇಲಾಖೆಯ ಆವರಣದಲ್ಲಿ ಕಿಸಾನ್ ಮಾಲ್ ಸ್ಥಾಪಿಸಲು ಅರ್ಹ ರೈತ ಉತ್ಪಾದಕರ ಸಂಸ್ಥೆಯಿಂದ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ನವೆಂಬರ್ 25 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂ.ಸಂ: 0821–2422255 ಅನ್ನು ಸಂಪರ್ಕಿಸಬಹುದು ಎಂದು ತೋಟಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ಉಜ್ರಾ ಫಾರೂಕ್

ಮೈಸೂರು, ನ.6–ನಗರದ ಗಾಯತ್ರಿಪುರಂನ ಅಜೀಜ್ ಸೇಠ್ ಜೋಡಿರಸ್ತೆ ನಿವಾಸಿ ಕುಸ್ತಿಪಟು ಇಕ್ಬಾಲ್‌ಖಾನ್ ಅವರ ಪತ್ನಿ ಉಜ್ರಾ ಫಾರೂಕ್ (59) ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಪತಿ, ಎಂಟು ಹೆಣ್ಣು ಮಕ್ಕಳು, ಸತ್ಯನಗರದ ಖತೀಬ್ ಮಸೀದಿ ಮೌಲಾ ಹುಸೇನ್‌ನ ಹಜರತ್ ಮೌಲಾನಾ ಮುಫ್ತಿ ರೌಮಾನ್ ರಿಜ್ವಿ ಮತ್ತು ಉದಯಗಿರಿಯ ಖತೀಬ್ ಓ ಇಮಾಮ್ ಮಸೀದಿಯ ಮುಸ್ತಾಫಾದ ಹಫೀಜ್ ಅಬ್ದುಲ್ ಮುಸ್ತಾಫಾ ರಿಜ್ವಿ ಸೇರಿದಂತೆ ಆರು ಗಂಡು ಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ವೃತ್ತದಲ್ಲಿರುವ ಮುಸ್ಲಿಂ ಸ್ಮಶಾನದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ವಕೀಲರ ಸಂಘದಿಂದ ಅಭಿನಂದನೆ...



ಮೈಸೂರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ 'ಲಾ ಗೈಡ್' ಕನ್ನಡ ಕಾನೂನು ಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಅವರನ್ನು ಮೈಸೂರು ವಕೀಲರ ಸಂಘದಿಂದ ಸನ್ಮಾನಿಸಿ, ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಸುಧೀರ್, ಹಿರಿಯ ವಕೀಲರಾದ ಅನಂತರಾಜು, ಜಿ.ವಿ.ರಾಮಮೂರ್ತಿ, ಎಂ.ಡಿ.ಹರೀಶ್ ಹೆಗಡೆ, ಕಾರ್ತಿಕ್, ಲೋಕೇಶ್, ಲೋಕೇಶ್‌ಗೌಡ ಇನ್ನಿತರರಿದ್ದರು.


ನ.15ಕ್ಕೆ ರಾಜ್ಯಾದ್ಯಂತ ತಾರಕೇಶ್ವರ ಚಿತ್ರ ಬಿಡುಗಡೆ

ಮೈಸೂರು,ನ.6(ಎಂಟಿವೈ)– ಪೌರಾಣಿಕ ಕಥಾಹಂದರವುಳ್ಳ 'ತಾರಕೇಶ್ವರ' ಕನ್ನಡ ಚಲನಚಿತ್ರ ನ.15ರಂದು ರಾಜ್ಯಾದ್ಯಂತ ಬಿಡುಗಡೆ ಆಗಲಿದೆ ಎಂದು ನಾಯಕ ನಟ ಮತ್ತು ನಿರ್ಮಾಪಕ ಗಣೇಶ್ ರಾವ್ ಕೇಸರ್ಕರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿ.ಆರ್.ಫಿಲಂಸ್ ಲಾಂಛನದಲ್ಲಿ ತಾರಕೇಶ್ವರ ಕನ್ನಡ ಚಲನಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಪೌರಾಣಿಕ ಕಥೆಯಿರುವ ಹಿನ್ನೆಲೆಯಲ್ಲಿ ಚಿತ್ರದಲ್ಲಿ ಆಂಗ್ಲ ಪದ ಬಳಸಿಲ್ಲ. ಶುದ್ಧ ಕನ್ನಡವನ್ನೇ ಬಳಸಲಾಗಿದೆ. ಈ ಚಿತ್ರ ನಾನು ಅಭಿನಯಿಸುತ್ತಿರುವ 333ನೇ ಚಿತ್ರವಾಗಿದೆ. ನಟ ದರ್ಶನ್ ಅಭಿನಯದ ಕುರುಕ್ಷೇತ್ರದ ಸಿನಿಮಾದ ಪ್ರೇರಣೆಯಿಂದ ಈ ಸಿನಿಮಾ ನಿರ್ಮಿಸಲಾಗಿದೆ ಎಂದು ತಿಳಿಸಿದರು.

ನಿರ್ದೇಶಕ ಬಿ.ಎ.ಪುರುಷೋತ್ತಮ್ ಓಂಕಾರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ತೆರೆ ಕಾಣುತ್ತಿರುವ ಚಿತ್ರಗಳು ಹಿಂಸೆಯನ್ನೇ ಬಿಂಬಿಸುವ ಕಥೆಯನ್ನೇ ಹೊಂದಿರುತ್ತವೆ. ಅಲ್ಲದೆ, ಚಿತ್ರಗಳಲ್ಲಿ ಹಿಂಸಾತ್ಮಕವಾದ ದೃಶ್ಯಗಳೇ ಇರುವುದರಿಂದ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಸ್ಕಂದ ಪುರಾಣದಿಂದ ಆಯ್ದ ಕಥೆಯನ್ನು ಆಧರಿಸಿ ತಾರಕೇಶ್ವರ ಸಿನಿಮಾ ಚಿತ್ರೀಕರಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಚಿತ್ರದ ನಾಯಕ ನಟಿ ರೂಪಾಲಿ, ಬಾಲನಟಿ ಋತು ಸ್ಪರ್ಶ್, ಕರ್ನಾಟಕ ಸೇನೆ ರಾಜ್ಯಾಧ್ಯಕ್ಷ ಬಸವರಾಜ ಪಡುಕೋಟೆ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಇನ್ನಿತರರು ಉಪಸ್ಥಿತರಿದ್ದರು.

ನ.9ಕ್ಕೆ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುಣ್ಯಸ್ಮರಣೆ




ಮೈಸೂರು,ನ.6(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ನ.9ರಂದು ಸಂಜೆ 5.30ಕ್ಕೆ ಆದಿಚುಂಚನಗಿರಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುಣ್ಯಸ್ಮರಣೆ ಹಾಗೂ ರಾಷ್ಟ್ರಕವಿ ಕುವೆಂಪು ಜಯಂತ್ಯುತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕಲಿಗ ಯುವ ಬ್ರಿಗೇಡ್‌ನ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಸಾನ್ನಿಧ್ಯವನ್ನು ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ವಹಿಸಲಿದ್ದು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ವಹಿಸಲಿದ್ದಾರೆ. ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ರೇಷ್ಮೆ ಹಾಗೂ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವತ್ಥ ನಾರಾಯಣ, ಶಾಸಕರಾದ ಡಾ.ಮಂಥರ್‌ಗೌಡ, ಕೆ.ಹರೀಶ್ ಗೌಡ, ರಾಜಸ್ಥಾನದ ಐಜಿಪಿ ರಾಘವೇಂದ್ರ ಸುಹಾಸ್, ರಾಜ್ಯ ಕಾರ್ಮಿಕ ಆಯುಕ್ತ ಡಾ.ಹೆಚ್.ಎನ್.ಗೋಪಾಲಕೃಷ್ಣ, ದಕ್ಷಿಣ ಪ್ರಾಂತ ಸಿಬ್ಬಂದಿ ನೇಮಕಾತಿ ಆಯೋಗದ ಪ್ರಾದೇಶಿಕ ನಿರ್ದೇಶಕ ಕೆ.ನಾಗರಾಜ್, ಆಂತರಿಕ ಭದ್ರತಾ ವಿಭಾಗದ ಎಸ್‌ಪಿ ಡಾ. ಪ್ರಕಾಶ್‌ಗೌಡ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಇದೇ ವೇಳೆ ಐಎಎಸ್ ಅಧಿಕಾರಿ ಡಾ.ನಾಗಾರ್ಜುನ್ ಬಿ.ಗೌಡ, ಐಆರ್‌ಎಸ್ ಅಧಿಕಾರಿ ಪಿ.ವಿ.ಭೈರಪ್ಪ, ಎಫ್‌ಎಚ್‌ಕ್ಯೂ ಅಧಿಕಾರಿ ಭವ್ಯಶ್ರೀ ಅವರನ್ನು ಸನ್ಮಾನಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಪುತ್ರಿ ತಾರಿಣಿ ಹಾಗೂ ಅಳಿಯ ಡಾ.ಚಿದಾನಂದಗೌಡ ಅವರನ್ನು ಅಭಿನಂದಿಸಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಒಕ್ಕಲಿಗ ಯುವ ಬ್ರಿಗೇಡ್ ಪದಾಧಿಕಾರಿಗಳಾದ ರಾಮು, ರಾಮಕೃಷ್ಣೇಗೌಡ, ಅಣ್ಣೇಗೌಡ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.11.2024 ಗುರುವಾರ, ಮಳೆ ನಕ್ಷತ್ರ: ವಿಶಾಖ, 06.11.2024 ರಿಂದ 18.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪ್ಯಾರಲಿಸಿಸ್ ಮತ್ತು ಮಧುಮೇಹದ ಗಾಯಗಳ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಅಮೃತಾಂಶು ಟ್ರಸ್ಟ್, ಆರೋಗ್ಯ ಭಾರತಿ :** ಧನ್ವಂತರಿ ಪ್ರಯುಕ್ತ ಸಾಮೂಹಿಕ ಧನ್ವಂತರಿ ಯಾಗ, ಸ್ಥಳ: 2767ರ ನಿವಾಸ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ)** : ಆಗಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಶ್ರೀ ಕ್ಷೇತ್ರ, ಮೈಸೂರು ಜಿಲ್ಲೆ, ಬೆಳಗ್ಗೆಯಿಂದ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** 47ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, 26ನೇ ವರ್ಷದ ಮಹಾಕುಂಭಾಭಿಷೇಕ, 10ನೇ ವರ್ಷದ ಹಾಲರವಿ ಸೇವೆ, ಶಿವರಾಂಪೇಟೆ ಶ್ರೀ ಮಹತಿ ಭಜನಾ ಮಂಡಳಿಯಿಂದ ಭಜನೆ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ನ್ಯಾಷನಲ್ ಆಂಟಿ ಡುಪ್ಲಿಕೇಷನ್ ಬ್ಯೂರೋ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ :** ಆರ್ಟ್ ಅಂಡ್ ಮೈಂಡ್ ಫೆಸ್ಟ್ 2ಕೆ24, ಉದ್ಘಾಟನೆ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಉಪಸ್ಥಿತರು: ಪ್ರಿನ್ಸಿಪಾಲ್ ಡಾ.ಕೆ.ಅಪರ್ಣಾರಾವ್, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ.ನಾಗರಾಜ್ ವಿ.ಭೈರಿ, ಕರಾಮುವಿವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಡೀನ್ ಡಾ.ಎನ್.ಲಕ್ಷ್ಮಿ, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10ಕ್ಕೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10ರಿಂದ.

■ **ಸಂತ ಫಿಲೋಮಿನಾ ಕಾಲೇಜು:** ಕನ್ನಡ ರಾಜ್ಯೋತ್ಸವ, ಮುಖ್ಯ ಅತಿಥಿಗಳು: ಸಂಸ್ಕೃತಿ ಚಿಂತಕ ಪ್ರೊ.ಎಂ.ಕೃಷ್ಣೇಗೌಡ, ಅಭಿನಂದನೆ: ರಂಗಕರ್ಮಿ ಹಾಗೂ ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್, ಅಧ್ಯಕ್ಷತೆ: ಸಂತ ಫಿಲೋಮಿನಾ ವಿದ್ಯಾಸಂಸ್ಥೆ ರೆಕ್ಟರ್ ಲೂರ್ದ್ ಪ್ರಸಾದ್ ಜೋಸೆಫ್, ಉಪಸ್ಥಿತರು: ಪ್ರಾಂಶುಪಾಲರಾದ ಡಾ.ರವಿ ಜೆ.ಡಿ. ಸಲ್ಡಾನ್ಹಾ, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಎ.ಟಿ.ಸದೆಬೋಸ್, ಸ್ಥಳ: ಕಾಲೇಜು ಒಳಾಂಗಣ ಕ್ರೀಡಾಂಗಣ, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ.ಜಿ. ಶ್ರೀಧರ್ ಹಾಗೂ ಸಂಗಡಿಗರು – ನಾಗಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಭಾಗವಹಿಸುವವರು : ಮೈಸೂರಿನ ವನ್ಯಜೀವಿ ವಿಭಾಗದ ಉಪವಲಯ ಅರಣ್ಯಾಧಿಕಾರಿ ನವೀನ್ ರಾವತ್, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.30 ದೇವರನಾಮ, 12.45 ಚಿತ್ರಗೀತೆಗಳು, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯಾರಾಗ–ಲೈಬ್ರರಿ ಸೈನ್ಸ್ ಸಪ್ತಾಹದ ಸಂದರ್ಭದಲ್ಲಿ ಹಿರಿಯ ಲೈಬ್ರರಿಯನ್ ಆಗಿ ನಿವೃತ್ತರಾದ ಡಾ. ಬಿ.ಎ. ಶಾರದ ಅವರೊಂದಿಗೆ ಮಾತುಕತೆ, ಭಾಗವಹಿಸುತ್ತಾರೆ : ಜಿ. ಶಾಂತಕುಮಾರ್, 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಸಿರಿಧಾನ್ಯ ಹಾಗೂ ತೆಂಗಿನ ಬೇಸಾಯ ಹಾಗೂ ಮಾರಾಟ ಕುರಿತು ಸಂವಾದ. ಭಾಗವಹಿಸುತ್ತಾರೆ : ಕಲ್ಪಮಿತ್ರ ರೈತ ಉತ್ಪಾದಕ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಜಿ. ಪುಟ್ಟರಾಜು ಹಾಗೂ ದುರ್ಗದ ಮಿಲೆಟ್ಸ್ ರೈತರ ಉತ್ಪಾದಕ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ. ಜಿ. ಗಿರೀಶ್, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಯುವವಾಣಿ–ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ, ಪ್ರಸ್ತುತಪಡಿಸುತ್ತಾರೆ : ಮೈಸೂರಿನ ರಾಮಕೃಷ್ಣನಗರದ ಸವಿಗಾನ ಸಂಗೀತ ಶಾಲೆಯ ವಿದ್ಯಾರ್ಥಿಗಳು. ನಿರ್ದೇಶನ–ಗಾಯತ್ರಿ ಸತ್ಯನಾರಾಯಣ, 9.30 ಕನ್ನಡ ಭಾರತಿ, 10.00 ಪ್ರಾದೇಶಿಕ ಲಘು ಹಾಗೂ ಜನಪದ ಸಂಗೀತ ರಾಷ್ಟ್ರೀಯ ಕಾರ್ಯಕ್ರಮ, ಆರ್.ಡಿ. ಕೈಲೇ–ಲಘು ಸಂಗೀತ, ಋವೌಥೆಂ ಸುಂದರಿ ದೇವಿ– ಜನಪದ ಸಂಗೀತ, 10.30 ಸವಿನೆನಪು

■ **ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಲಯ :** ಸುವರ್ಣ ಕರ್ನಾಟಕ 50: ಸಂಭ್ರಮಾಚರಣೆ, ಐತಿಹಾಸಿಕ ದಾಖಲೆಗಳ, ಛಾಯಾಚಿತ್ರಗಳ ಪ್ರದರ್ಶನ ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ನಿರ್ದೇಶಕ ಡಾ. ಗವಿಸಿದ್ದಯ್ಯ, ಅಧ್ಯಕ್ಷತೆ : ಎಂಎಂಕೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಲಯ ಪ್ರಾಂಶುಪಾಲರಾದ ಪ್ರೊ. ಎನ್. ಭಾರತಿ, ಮುಖ್ಯ ಅತಿಥಿಗಳು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ. ಪ್ರೀತಿ ಶುಭಚಂದ್ರ, ವಿಭಾಗೀಯ ಪತ್ರಾಗಾರ ಕಚೇರಿ ಹಿರಿಯ ಸಹಾಯಕ ನಿರ್ದೇಶಕ ಹೆಚ್.ಎಲ್. ಮಂಜುನಾಥ, ಉಪಸ್ಥಿತರು : ಪ್ರಾಂಶುಪಾಲರಾದ ಶ್ರೀಮತಿ ನಯನಕುಮಾರಿ, ಪ್ರೊ. ಕೆ.ಎಸ್. ಸುಕೃತ, ಡಾ. ವಿನೋದ, ಸ್ಥಳ: ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಲಯ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30 ರಿಂದ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು, ಐಕ್ಯೂಎಸಿ ಹಾಗೂ ರಾಷ್ಟ್ರಭಾರತಿ ಚಾರಿಟೆಬಲ್ ಟ್ರಸ್ಟ್, ಮಹಿಳಾ ಸಮನ್ವಯ, ಮೈಸೂರು ವಿಭಾಗ :** ಲೋಕಮಾತೆ ಅಹಲ್ಯಾಬಾಯಿ ಹೋಳ್ಕರ್‌ರವರ ಜನ್ಮ ತ್ರಿಶತಾಬ್ಧಿ ಅಂಗವಾಗಿ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ, ನಿವೃತ್ತ ತಹಸೀಲ್ದಾರ್ ಡಾ. ವಿ. ರಂಗನಾಥ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಬಿ.ಆರ್. ಜಯಕುಮಾರಿ, ಉಪಸ್ಥಿತರು : ಮಹಿಳಾ ಸಮನ್ವಯ ಸಂಚಾಲಕರಾದ ಶ್ರೀಮತಿ ಲಾವಣ್ಯ, ಸ್ಥಳ: ಎವಿಸಿ–2, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** 69ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ, ಮುಖ್ಯ ಅತಿಥಿಗಳು : ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, 'ನಮ್ಮ ಕನ್ನಡವನ್ನು ವಿಶ್ವದರ್ಜೆಗೇರಿಸುವ ಸಾಧ್ಯತೆಗಳು' ಕುರಿತು ಉಪನ್ಯಾಸ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಕ್ರಾಫರ್ಡ್ ಭವನ, ಮೈಸೂರು ವಿಶ್ವವಿದ್ಯಾನಿಲಯ, ಬೆಳಗ್ಗೆ 11ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಸಂಜೆ 6 ರಿಂದ.

ಬನ್ನಿಮಂಟಪಕ್ಕೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಸ್ಥಳಾಂತರ

ಎಲ್ಲಾ ವರ್ಗದವರೊಂದಿಗೆ ಸಮಾಲೋಚಿಸಿ ನಿರ್ಧಾರ ಕೈಗೊಳ್ಳಬೇಕು

• ಎಂಜಿಪಿ ಸಭೆಯಲ್ಲಿ ಒತ್ತಾಯ • ವರ್ತಕರಿಂದ ಕೋರ್ಟ್ ಮೊರೆ ಹೋಗುವ ಎಚ್ಚರಿಕೆ

ಮೈಸೂರು, ನ.6(ಎಸ್‌ಪಿಎನ್)– ಮೈಸೂರು ಸಬರ್ಬನ್ ಬಸ್ ನಿಲ್ದಾಣ ಸ್ಥಳಾಂತರ ಸ್ವಾಗತಾರ್ಹ. ಆದರೆ, ಹೊಸ ಬಸ್ ನಿಲ್ದಾಣ ಸ್ಥಾಪಿಸುವ ಸಂದರ್ಭದಲ್ಲಿ ಎಲ್ಲಾ ವರ್ಗದವರೊಂದಿಗೆ ಕೆಎಸ್‌ಆರ್‌ಟಿಸಿ ಹಿರಿಯ ಅಧಿಕಾರಿಗಳು ಸಮಾಲೋಚನೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಬೇಕು ಎಂದು ಮೈಸೂರು ಗ್ರಾಹಕರ ಪರಿಷತ್(ಮೈಗ್ರಾಪ) ಕಚೇರಿ ಆವರಣದಲ್ಲಿ ಬುಧವಾರ ನಡೆದ ಸಾಮಾನ್ಯ ಸಭೆಯಲ್ಲಿ ಒತ್ತಾಯ ಕೇಳಿಬಂತು.

ಮೈಗ್ರಾಪ ಅಧ್ಯಕ್ಷ ಶ್ರೀಶೈಲ ರಾಮಣ್ಣವರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 'ಮೈಸೂರು ಸಬರ್ಬನ್ ಬಸ್ ನಿಲ್ದಾಣ ಸ್ಥಳಾಂತರ ಸಂಬಂಧ' ವಿವಿಧ ಕ್ಷೇತ್ರದ ತಜ್ಞರೊಂದಿಗೆ ಕೆಎಸ್‌ಆರ್‌ಟಿಸಿ ಮೈಸೂರು ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಸಂವಾದ ನಡೆಸಿ, ಹತ್ತು–ಹಲವು ಸಲಹೆಗಳನ್ನು ಸ್ವೀಕರಿಸಿ, ಸದಸ್ಯರ ಗೊಂದಲಗಳನ್ನು ಬಗೆಹರಿಸಲು ಯತ್ನಿಸಿದರು.

ಮೈಗ್ರಾಪ ಸದಸ್ಯ, ನಿವೃತ್ತ ಪ್ರಾಧ್ಯಾಪಕ ಯದುನಂದನ್ ಸಲಹೆ ನೀಡುತ್ತ ಮೈಸೂರು ಸಬರ್ಬನ್ ಬಸ್ ನಿಲ್ದಾಣ ಸ್ಥಳಾಂತರ ಸ್ವಾಗತಾರ್ಹ. ಆದರೆ, ಹೊಸ ಬಸ್ ನಿಲ್ದಾಣ ಸ್ಥಾಪನೆ ಮಾಡಲು ಉದ್ದೇಶಿಸಲಾಗಿರುವ ಈಗಿನ (ಬನ್ನಿಮಂಟಪ)ಸ್ಥಳ ಆಯ್ಕೆ ಸೂಕ್ತವೇ, ಈ ನಿರ್ಧಾರ ಎಲ್ಲರ ಒಪ್ಪಿತವೇ? ಎಂದು ಸಾರ್ವಜನಿಕರಲ್ಲಿರುವ ಗೊಂದಲ ಕುರಿತು ಸಭೆಗೆ ವಿವರಿಸಿದರು.

ಈಗಿನ ಬಸ್ ನಿಲ್ದಾಣವನ್ನು ಸ್ಥಳಾಂತರಿಸಿದರೆ, ಹೊಸ ಬಸ್ ನಿಲ್ದಾಣ ಮೈಸೂರಿನ ಜನರಿಗೆ ಅನುಕೂಲವಾಗುವ ಸ್ಥಳದಲ್ಲಿ ಸ್ಥಾಪಿಸಬೇಕು. ರೈಲ್ವೆ, ವಿಮಾನ ನಿಲ್ದಾಣ, ವ್ಯಾಪಾರ ವಹಿವಾಟಿಗೆ ಅನುಕೂಲವಾಗುವ ರಿಂಗ್ ರೋಡ್ ಸಮೀಪದಲ್ಲಿ ಅಥವಾ ಬೇರೆ ವಿಶಾಲವಾದ ಜಾಗದಲ್ಲಿ ಸ್ಥಾಪಿಸುವಂತೆ ಸಲಹೆ ನೀಡಿದರಲ್ಲದೆ, ಹೊಸ ಬಸ್ ನಿಲ್ದಾಣ ಸ್ಥಾಪನೆ ಮೈಸೂರಿನ ಅಭಿವೃದ್ಧಿಗೆ ಪೂರಕವಾಗಿ, ಟ್ರಾಫಿಕ್ ಸಮಸ್ಯೆಗೆ ಎಡೆಮಾಡಿಕೊಡದಂತೆ ಡಿಪಿಆರ್ ತಯಾರಿಸುವಂತೆ ಸಲಹೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶ್ರೀನಿವಾಸ್, ಮೈಸೂರಿನ ಯಾವುದೇ ಭಾಗದಲ್ಲಿ ಕೇಂದ್ರೀಯ ಬಸ್ ನಿಲ್ದಾಣ ಸ್ಥಾಪನೆಗೆ ಕೆಎಸ್‌ಆರ್‌ಟಿಸಿ ಬದ್ಧ. ಅದಕ್ಕೆ ಸ್ಥಳಾವಕಾಶದ ಸಮಸ್ಯೆ. ಆದರೆ, ಈಗಿನ ಸಬರ್ಬನ್ ಬಸ್ ನಿಲ್ದಾಣ ಸ್ಥಳಾಂತರವಾಗಲೇಬೇಕು. ಏಕೆಂದರೆ, ಕಳೆದ ಒಂದೂವರೆ ವರ್ಷದಲ್ಲಿ ನಿಲ್ದಾಣದೊಳಗೆ ಏಳು ಅಪಘಾತವಾಗಿದೆ. ಇದರಲ್ಲಿ ಇಬ್ಬರು ಪ್ರಯಾಣಿಕರು ಸಾವನ್ನಪಿದ್ದಾರೆ. ಅಲ್ಲದೆ, ದಿನನಿತ್ಯ ಟ್ರಾಫಿಕ್ ಸಮಸ್ಯೆ ಉಂಟಾಗಿ, ಒಂದು ಬಸ್ ಕಾರ್ಯಾಚರಣೆಗೊಳ್ಳಲು ಸುಮಾರು ಅರ್ಧ ತಾಸು ಬೇಕಾಗುತ್ತಿದೆ. ಇವೆಲ್ಲಾ ಸಮಸ್ಯೆಗಳನ್ನು ಪರಿಗಣಿಸಿ, ಈಗಿನ ಬಸ್ ನಿಲ್ದಾಣ ಮೇಲೆ ಒತ್ತಡ ಕಡಿಮೆ ಮಾಡಬೇಕಿದೆ. ಈಗಿನ ಬಸ್ ನಿಲ್ದಾಣಕ್ಕೆ ಬೆಳಗ್ಗೆ 7ರಿಂದ 10 ಹಾಗೂ ಸಂಜೆ 5ರಿಂದ ರಾತ್ರಿ 9ರವರೆಗೆ ಬಸ್ ನಿಲ್ದಾಣದಲ್ಲಿ ಸದಾ ಜನಸಂದಣಿ. ಈ ವೇಳೆ ಒಂದೇ ವೇಳೆ ವಿವಿಧ ಸ್ಥಳಗಳಿಂದ 270ಕ್ಕೂ ಹೆಚ್ಚು ಬಸ್‌ಗಳು ನಿಲ್ಲಲು ಸ್ಥಳಾವಕಾಶ ಮಾಡಿಕೊಡಬೇಕು. ಇದು ಸಾಧ್ಯವಾಗದೇ ನಿತ್ಯ ಟ್ರಾಫಿಕ್ ಸಮಸ್ಯೆ ಆಗುತ್ತಿದೆ ಎಂದು ಸಮಜಾಯಿಷಿ ನೀಡಿದರು.

ಹೊರ ವಲಯದಲ್ಲಿ ಜಾಗ ಹುಡುಕಿ: ಮೈಸೂರಿನ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್ ಮಾತನಾಡುತ್ತ, ಕಿಷ್ಕಿಂದೆ ಜಾಗದಲ್ಲಿ ಬಸ್ ನಿಲ್ದಾಣ ಕಾರ್ಯಾಚರಣೆ ಮಾಡುವ ಬದಲು ಹೊರವಲಯದಲ್ಲಿ ಎಲ್ಲರಿಗೂ ಅನುಕೂಲವಾಗುವಂತಹ ಜಾಗದಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಸ್ಥಾಪಿಸುವಂತೆ ಸಲಹೆ ನೀಡಿದರು.



ಮೈಗ್ರಾಪ ಅಧ್ಯಕ್ಷ ಶ್ರೀಶೈಲ ರಾಮಣ್ಣವರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 'ಮೈಸೂರು ಸಬರ್ಬನ್ ಬಸ್ ನಿಲ್ದಾಣ ಸ್ಥಳಾಂತರ ಸಂಬಂಧ' ವಿವಿಧ ಕ್ಷೇತ್ರದ ತಜ್ಞರೊಂದಿಗೆ ಕೆಎಸ್‌ಆರ್‌ಟಿಸಿ ಮೈಸೂರು ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಸಂವಾದ ನಡೆಸಿದರು.

ಹೊರ ವಲಯದಲ್ಲಿ ಬಸ್ ನಿಲ್ದಾಣ ಸ್ಥಾಪನೆ ಸೂಕ್ತವಲ್ಲ: ಇದಕ್ಕೆ ಕೆಎಸ್‌ಆರ್‌ಟಿಸಿ ಅಧಿಕಾರಿ ಶ್ರೀನಿವಾಸ್ ಪ್ರತಿಕ್ರಿಯಿಸಿ, ನಗರದ ಹೊರಭಾಗದಲ್ಲಿ ಹೊಸ ಬಸ್ ನಿಲ್ದಾಣ ಸ್ಥಾಪಿಸಿದರೆ, ಯಾವುದೇ ಪ್ರಯೋಜನವಿಲ್ಲ. ಹೊಸ ಹೊಸ ಜಿಲ್ಲಾ ಕೇಂದ್ರಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ಇಂತಹ ಆಲೋಚನೆ ಮಾಡಬಹುದು. ಈಗಾಗಲೇ ಅಭಿವೃದ್ಧಿಗೊಂಡಿರುವ ನಗರಗಳಲ್ಲಿ ಇಂತಹ ಆಲೋಚನೆ ಕಷ್ಟ ಎಂದ ಅವರು, ಹಾಗಾಗಿ ಈಗಿನ ಬಸ್ ನಿಲ್ದಾಣ ಏಕಕಾಲಕ್ಕೆ 25 ಬಸ್ ನಿಲ್ಲಿಸಿ, ಕಾರ್ಯಾಚರಣೆ ಮಾಡಬಹುದು. ಈ ಬಸ್ ನಿಲ್ದಾಣದಲ್ಲಿ ಹೊರರಾಜ್ಯ, ಜಿಲ್ಲೆ ಹಾಗೂ ಸ್ಥಳೀಯ ಬಸ್‌ಗಳ ಕಾರ್ಯಾಚರಣೆ ಸೇರಿದಂತೆ ಒಟ್ಟು 2,600 ಬಸ್‌ಗಳು ಪ್ರಸ್ತುತ ಕಾರ್ಯಾಚರಣೆಗೊಳ್ಳುತ್ತಿವೆ. ಈಗಿನ ಜಾಗ ಸಾಕಾಗುವುದಿಲ್ಲ. ಹಾಗಾಗಿ ನಗರ ಹೃದಯ ಭಾಗದ ಬನ್ನಿಮಂಟಪದಲ್ಲಿ 65 ಎಕರೆ ಕೆಎಸ್‌ಆರ್‌ಟಿಸಿಗೆ ಸಂಬಂಧಿಸಿದ ಜಾಗವಿದೆ. ಈ ಜಾಗದ 13 ಎಕರೆ ಜಾಗದಲ್ಲಿ ಹೊಸ ಬಸ್ ನಿಲ್ದಾಣ ಸ್ಥಾಪನೆಗೆ ಸರ್ಕಾರದಿಂದ ಅನುಮತಿ ಕೇಳಲಾಗಿದೆ ಎಂದು ಸದಸ್ಯರೊಬ್ಬರು ಪ್ರಶ್ನೆಗೆ ಉತ್ತರಿಸಿದರು.

ಪೂರ್ಣ ಪ್ರಮಾಣದಲ್ಲಿ ಸ್ಥಳಾಂತರವಿಲ್ಲ: ಮೈಸೂರು ಸಬರ್ಬನ್ ಬಸ್ ನಿಲ್ದಾಣವನ್ನು ಸಂಪೂರ್ಣವಾಗಿ ಬನ್ನಿಮಂಟಪಕ್ಕೆ ಸ್ಥಳಾಂತರಿಸುವುದಿಲ್ಲ. ಬದಲಾಗಿ ಮೈಸೂರು ಗ್ರಾಮಾಂತರ, ಮೈಸೂರು–ಮಂಡ್ಯ, ಮೈಸೂರು–ಹಾಸನ, ಮೈಸೂರು–ಕೊಡಗು, ಮೈಸೂರು ಚಾಮರಾಜನಗರ ಜಿಲ್ಲೆಗಳ ಬಸ್‌ಗಳ ಕಾರ್ಯಾಚರಣೆ ಈ ನಿಲ್ದಾಣದಿಂದಲೇ ಕಾರ್ಯಾಚರಣೆಗೊಳಿಸಲು ಚಿಂತನೆ ಇದೆ. ಆದರೆ, ಹೊರರಾಜ್ಯ, ಹೊರಜಿಲ್ಲೆಗಳಿಂದ ಬರುವ ಬಸ್‌ಗಳನ್ನು ಮಾತ್ರ ಬನ್ನಿಮಂಟಪದ ನಿಲ್ದಾಣದಿಂದ ಕಾರ್ಯಾಚರಣೆಗೊಳ್ಳುವಂತೆ ಕ್ರಮವಹಿಸಲಾಗುವುದು ಎಂದರು. ಈ ವೇಳೆ ಮಧ್ಯ ಪ್ರವೇಶಿಸಿದ ಎಂಜಿಪಿ ಸದಸ್ಯ ನಟರಾಜ್, ಸ್ಥಳಾಂತರ ಸ್ವಾಗತಾರ್ಹ, ಬಸ್ ನಿಲ್ದಾಣ ಸ್ಥಳಾಂತರಗೊಂಡ ನಂತರ ಮೈಸೂರಿನಲ್ಲಿ ಮುಂದಿನ ದಿನಗಳಲ್ಲಿ ಸಂಭವಿಸುವ ಟ್ರಾಫಿಕ್ ಸಮಸ್ಯೆ, ಹೊಸ ಬಸ್ ನಿಲ್ದಾಣಕ್ಕೆ ಬರುವ ಕಾರು, ದ್ವಿಚಕ್ರ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ಎಲ್ಲಾ ಆಯಾಮದಲ್ಲೂ ಯೋಚಿಸಿ ಡಿಪಿಆರ್‌ನಲ್ಲಿ ಉಲ್ಲೇಖಿಸಿ, ನಂತರ ಸಾರ್ವಜನಿಕರ ಅಭಿಪ್ರಾಯ ಆಲಿಸಬೇಕು ಎಂದು ಒತ್ತಾಯಿಸಿದರು.

ಪೀಪಲ್ಸ್ ಪಾರ್ಕ್ ಜಾಗ ವಶಕ್ಕೆ ಪಡೆಯಬೇಡಿ: ಮೈಸೂರು ಸಬರ್ಬನ್ ಬಸ್ ನಿಲ್ದಾಣ ಕಿಷ್ಕಿಂದೆಯಾಗಿರುವ ಹಿನ್ನೆಲೆ, ಯಾರದೂ ಒತ್ತಡಕ್ಕೆ ಮಣಿದು ಬಸ್ ನಿಲ್ದಾಣ ಮುಂಭಾಗದ ಪೀಪಲ್ಸ್ ಪಾರ್ಕ್ ಜಾಗದಲ್ಲಿ ಬಸ್ ಕಾರ್ಯಾಚರಣೆಗೊಳಿಸಲು ರಾಜ್ಯ ಸರ್ಕಾರದಿಂದ ಅನುಮತಿ ಪಡೆಯಲು ಕೆಎಸ್‌ಆರ್‌ಟಿಸಿ ಯತ್ನಿಸುತ್ತಿದೆ ಎಂಬ ಭಾಮಿ ವಿ.ಶೆಣೈ, ನಟರಾಜ್‌ರ ಪ್ರಶ್ನೆಗೆ ಉತ್ತರಿಸಿದ ಶ್ರೀನಿವಾಸ್, ಬಸ್ ನಿಲ್ದಾಣ ಮುಂಭಾಗದಲ್ಲಿ ಐದು ಎಕರೆ ಪಾರ್ಕ್ ಜಾಗವಿದೆ ಎಂದು ಇಲ್ಲಿನ ಸ್ಥಳೀಯರು ಮಾಹಿತಿ ನೀಡಿದ್ದಾರೆ. ಪಾರ್ಕ್ ಜಾಗ ನಮಗೆ ಕೊಟ್ಟರೆ, ಅಷ್ಟೇ ಜಾಗವನ್ನು ಬೇರೆ ಜಾಗದಲ್ಲಿ ಬಿಟ್ಟು ಕೊಡಲಾಗುವುದು ಎಂಬ ಪ್ರಸ್ತಾವನೆ ಮುಂದಿಟ್ಟರು. ಈ ಆಲೋಚನೆ ಬಿಟ್ಟುಬಿಡಿ ಎಂದು ಎಂಜಿಪಿ ಸದಸ್ಯರ ಆಕ್ಷೇಪಕ್ಕೆ ನಮಗೂ ಪಾರ್ಕ್ ಜಾಗ ಬೇಕೇಬೇಕು ಎನ್ನುವ ಒತ್ತಾಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಆತುರದ ನಿರ್ಧಾರ ಏಕೆ?: ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಮೈಸೂರು ದಿನೇ ದಿನೇ ಪ್ರವಾಸೋದ್ಯಮದಲ್ಲಿ ಅಭಿವೃದ್ಧಿಗೊಳ್ಳುತ್ತಿದೆ. ಆದರೆ, ವಿವಿಧ ರಾಜ್ಯ, ಜಿಲ್ಲೆಗಳ ಜನರು, ಮೈಸೂರಿಗೆ ಬಂದು ವಾಸಿಸಲು ಯೋಚನೆ ಮಾಡಿಲ್ಲ. ವಾರದ ರಜಾ ದಿನಗಳಲ್ಲಿ (ಅಂದರೆ ಶುಕ್ರವಾರದಿಂದ ಸೋಮವಾರದವರೆಗೆ) ಮಾತ್ರ ಪ್ರವಾಸಿಗರು ಇಲ್ಲಿನ ಪ್ರವಾಸಿ ಸ್ಥಳ ವೀಕ್ಷಣೆಗೆ ಬರುತ್ತಾರೆ. ಆ ಸಂದರ್ಭದಲ್ಲಿ ಮಾತ್ರ ಮೈಸೂರಲ್ಲಿ ಟ್ರಾಫಿಕ್ ಸಮಸ್ಯೆ ಎದುರಾಗಲಿದೆ. ಮಿಕ್ಕ ದಿನಗಳಲ್ಲಿ ಮೈಸೂರಿನ ಎಲ್ಲಾ ರಸ್ತೆಗಳು ಖಾಲಿಖಾಲಿ ಇರುತ್ತವೆ. ಹಾಗಾಗಿ ಮೈಸೂರು ಸಬರ್ಬನ್ ಬಸ್ ನಿಲ್ದಾಣ ಸ್ಥಳಾಂತರ ಯೋಚನೆಯನ್ನು ಮತ್ತೊಮ್ಮೆ ಯೋಚಿಸಿ, ಆತುರದ ನಿರ್ಧಾರ ಮಾಡಬೇಡಿ ಎಂದು ಸಲಹೆ ನೀಡಿದರು. ಇದಕ್ಕೆ ಮತ್ತೊಬ್ಬ ಉದ್ಯಮಿ ರವಿಶಾಸ್ತ್ರಿ ಕೂಡ ದನಿಗೂಡಿಸಿದರು. ಮೈಸೂರಿನಿಂದ ಬೆಂಗಳೂರಿನ ಸಿಲ್ಕ್ ಬೋರ್ಡ್‌ಗೆ ಬಸ್ ವ್ಯವಸ್ಥೆಗೆ ಮನವಿ ಸಲ್ಲಿಸಲಾಯಿತು.

ಸಭೆಯಲ್ಲಿ ಎಂಜಿಪಿ ಸದಸ್ಯರಾದ ಎಸ್.ಶೋಭನಾ, ಎಸ್.ವಿ.ಶೇಖರ್, ಭಾಮಿ ವಿ.ಶೆಣೈ, ರಾಮು ಅಗರ್‌ವಾಲ್, ಪ್ರೊಯದುನಂದನ್, ವಸಂತ್, ರಾಕೇಶ್, ಕೆ.ವಿ.ರಾಮನಾಥ್, ಅರುಣ್ ಕುಮಾರ್ ಶೆಟ್ಟಿ, ಡಿ.ವಿ.ದಯಾನಂದ್ ಸಾಗರ್, ಮಾಜಿ ಮೇಯರ್ ಪಿ.ವಿಶ್ವನಾಥ್, ಬಿ.ಶ್ರೀನಿವಾಸ್, ಜಿ.ಶ್ರೀಧರ್, ಎಸ್.ಯೋಗೇಂದ್ರ ಕೆವಿ.ಭಾನು ಪ್ರಶಾಂತ್, ಡಾ. ನಟರಾಜ್, ಸಿಎನ್. ಸುದೀಂದ್ರ ಎನ್‌.ಟಿ ರಾಜ್ ಸೇರಿದಂತೆ ಇತರರಿದ್ದರು.

> **ಕೋರ್ಟ್‌ಗೆ ಹೋಗುವ ಎಚ್ಚರಿಕೆ**
>
> ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಬಸ್ ನಿಲ್ದಾಣ ಸ್ಥಳಾಂತರ ಸಂಬಂಧ ಮನಬಂದಂತೆ ನಿರ್ಧಾರ ತೆಗೆದುಕೊಳ್ಳಬೇಡಿ, ಹತ್ತಾರು ವರ್ಷಗಳಿಂದ ಈ ಬಸ್ ನಿಲ್ದಾಣ ನಂಬಿಕೊಂಡು ಹಲವಾರು ಮಂದಿ ವರ್ತಕರು, ಬೀದಿ ಬದಿ ವ್ಯಾಪಾರಿಗಳು, ಆಟೋ ಚಾಲಕರು, ಪ್ರವಾಸಿ ಟ್ಯಾಕ್ಸಿ ಮಾಲೀಕರು, ಚಾಲಕರು ಜೀವನ ಕಟ್ಟಿಕೊಂಡಿದ್ದಾರೆ. ಹಾಗಾಗಿ ಸಬರ್ಬನ್ ಬಸ್ ನಿಲ್ದಾಣದ ಸುತ್ತಮುತ್ತ ಇರುವ ವರ್ತಕರ ಮನವಿ ಆಲಿಸದೆ, ಈಗಿನ ಬಸ್ ನಿಲ್ದಾಣ ಸ್ಥಳಾಂತರ ನಿರ್ಧಾರ ಮಾಡಿದರೆ, ಕೋರ್ಟ್ ಕಟಕಟೆ ಹತ್ತಬೇಕಾಗುತ್ತದೆ.
>
> -ರವಿಶಾಸ್ತ್ರಿ, ಹೋಟೆಲ್ ಉದ್ಯಮಿ

ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಪಿ.ಪಟ್ಟಣದಲ್ಲಿ ಪ್ರಗತಿ ಪರಿಶೀಲನಾ ಸಭೆ

ಗ್ರಾಪಂಗಳು ಎನ್‌ಆರ್‌ಎಲ್‌ಎಂ ಯೋಜನೆಗೆ ಹೆಚ್ಚು ಒತ್ತು ನೀಡಬೇಕು

ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಈ ಯೋಜನೆ ಸಹಕಾರಿ





ಪಿರಿಯಾಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು. ಮತ್ತೊಂದು ಚಿತ್ರದಲ್ಲಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿರುವ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಹಾಗೂ ಇತರ ಅಧಿಕಾರಿಗಳನ್ನು ಕಾಣಬಹುದು.

ಮೈಸೂರು, ನ.6(ಪಿಎಂ)– ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್‌ಆರ್‌ಎಲ್‌ಎಂ) ಯೋಜನೆ ಸಹಕಾರಿಯಾಗಿದ್ದು, ಗ್ರಾಮ ಪಂಚಾಯಿತಿಗಳು ಈ ಯೋಜನೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ತಿಳಿಸಿದರು.

ಪಿರಿಯಾಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನಡೆಸುವ ಮಾಸಿಕ ಸಂತೆಯಲ್ಲಿ ಎನ್‌ಆರ್‌ಎಲ್‌ಎಂ ಯೋಜನೆ ಮೂಲಕ ಸ್ಥಳೀಯ ಪದಾರ್ಥಗಳ ಮಾರುಕಟ್ಟೆಗೆ ಅವಕಾಶ ನೀಡಬೇಕು. ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದರೆ ಜಿಲ್ಲಾ ಮಟ್ಟದಲ್ಲಿ ವೇದಿಕೆ ಕಲ್ಪಿಸಿಕೊಡುವುದಾಗಿ ಭರವಸೆ ನೀಡಿದರು.

ಸ್ವ–ಸಹಾಯ ಸಂಘದ ಮಹಿಳೆಯರು ಬೆಟ್ಟದಪುರ ಗ್ರಾಪಂನಲ್ಲಿ ಈ ಯೋಜನೆಯಡಿ ಆರ್ಥಿಕ ನೆರವು ಪಡೆದು ಬಟ್ಟೆ ಬ್ಯಾಗ್‌ಗಳನ್ನು ಸಿದ್ಧಪಡಿಸುತ್ತಿದ್ದು, ಆರ್ಥಿಕವಾಗಿ ಲಾಭ ಗಳಿಸುತ್ತಿದ್ದಾರೆ. ಉಳಿದ ಗ್ರಾಪಂಗಳು ಈ ನಿಟ್ಟಿನಲ್ಲಿ ಗಮನ ನೀಡಬೇಕು. ಈ ಯೋಜನೆ ಅನುಷ್ಠಾನಕ್ಕೆ ಕೃಷಿ ಸಖಿ, ಪಶು ಸಖಿಯರನ್ನು ಬಳಸಿಕೊಳ್ಳಬೇಕು. ವಿವಿಧ ಯೋಜನೆಗಳ ಒಗ್ಗೂಡಿ ಸುವಿಕೆಯೊಂದಿಗೆ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಒತ್ತು ನೀಡಬೇಕೆಂದು ಪಿಡಿಓಗಳಿಗೆ ಸಲಹೆ ನೀಡಿದರು.

ನರೇಗಾ ಯೋಜನೆಯಡಿ ನಿಗದಿತ ಗುರಿ ಸಾಧಿಸದ ಗ್ರಾಪಂಗಳಲ್ಲಿ ಐಇಸಿ ಚಟುವಟಿಕೆಗಳನ್ನು ಹೆಚ್ಚಾಗಿ ನಡೆಸಿ ಜಾಗೃತಿ ಮೂಡಿಸುವ ಮೂಲಕ ಜನರು ಹೆಚ್ಚಾಗಿ ನರೇಗಾ ಕೆಲಸದಲ್ಲಿ ಭಾಗವಹಿಸುವಂತೆ ಮಾಡಬೇಕೆಂದು ತಿಳಿಸಿದರು.

ಈಗಾಗಲೇ ಸಂಜೀವಿನಿ ಶೆಡ್ ನಿರ್ಮಾಣಕ್ಕೆ ಜಾಗ ಗುರುತಿಸಲಾಗಿರುವ ಪಂಚಾಯಿತಿಗಳಲ್ಲಿ ಕೂಡಲೇ ಕಾಮಗಾರಿ ಆರಂಭಿಸಬೇಕು. ಅಲ್ಲದೆ, ಪ್ರಗತಿಯಲ್ಲಿರುವ ಶಾಲಾ ಶೌಚಾಲಯ, ಕಾಂಪೌಂಡ್, ಆಟದ ಮೈದಾನದ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕೆಂದು ಸೂಚಿಸಿದರು.

ಅಲ್ಲದೆ, ಘನತ್ಯಾಜ್ಯ ವಿಲೇವಾರಿ ಘಟಕ, ಜೆಜೆಎಂ, ತೆರಿಗೆ ವಸೂಲಿ ಸಮಸ್ಯೆಗಳನ್ನು ಆಲಿಸಿದ ಅವರು, ಗ್ರಾಪಂಗಳು ಸ್ಥಳೀಯ ಸರ್ಕಾರಗಳಾಗಿದ್ದು, ತಮ್ಮ ವ್ಯಾಪ್ತಿಯಲ್ಲಿ ಅಭಿವೃದ್ಧಿ ಸಾಧಿಸುವುದು ಪಿಡಿಓಗಳ ಕರ್ತವ್ಯ. ಕಾನೂನು ವ್ಯಾಪ್ತಿಯಲ್ಲಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆದ್ಯತೆಯ ಮೇರೆಗೆ ಕೆಲಸ ಮಾಡಬೇಕು. ಎಲ್ಲಾ ಯೋಜನೆಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಬೇಕೆಂದು ಸಲಹೆ ನೀಡಿದರು.

ಜಿಪಂ ಯೋಜನಾಧಿಕಾರಿ ಪ್ರಭುಸ್ವಾಮಿ ಮಾತನಾಡಿ, ಎನ್‌ಆರ್‌ಎಲ್‌ಎಂ ಯೋಜನೆಯು ಮಹಿಳೆಯರ ಸಬಲೀಕರಣಕ್ಕೆ ಸಹಕಾರಿಯಾಗಿದ್ದು, ಪಿಡಿಓಗಳು, ಎಂಬಿಕೆಗಳು, ಪಶುಸಖಿ, ಕೃಷಿಸಖಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಯೋಜನೆಯಲ್ಲಿ ಪ್ರಗತಿ ಸಾಧಿಸಲು ಶ್ರಮಿಸಬೇಕು ಎಂದರು.

ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಡಿ.ಬಿ.ಸುನಿಲ್ ಕುಮಾರ್, ಪಿಆರ್‌ಇಡಿ ಎಇಇ ಮಲ್ಲಿಕಾರ್ಜುನಸ್ವಾಮಿ, ಆರ್‌ಡಬ್ಲ್ಯೂಎಸ್ ಎಇಇ ಕೃಷ್ಣಮೂರ್ತಿ, ಸಹಾಯಕ ನಿರ್ದೇಶಕ (ಗ್ರಾ.ಉ) ಕರುಣಾಕರ್, ಲೆಕ್ಕಾಧಿಕಾರಿ ರಂಗನಾಥ್ ಹಾಗೂ 34 ಗ್ರಾಪಂಗಳ ಪಿಡಿಓಗಳು, ನರೇಗಾ ಹಾಗೂ ಎನ್‌ಆರ್‌ಎಲ್‌ಎಂ ಸಿಬ್ಬಂದಿ ಸಭೆಯಲ್ಲಿ ಪಾಲ್ಗೊಂಡಿದ್ದರು.

> **ಎನ್‌ಆರ್‌ಎಲ್‌ಎಂ ಯೋಜನೆಯಡಿ ಮಹಿಳೆಯರಿಗೆ 20 ಲಕ್ಷವರೆಗೆ ಸಾಲ**
>
> ಗ್ರಾಮೀಣ ಪ್ರದೇಶದ ಹಣ್ಣು, ಸೊಪ್ಪು, ಧಾನ್ಯ ಪದಾರ್ಥಗಳಿಗೆ ವಿಶೇಷ ಬೇಡಿಕೆ ಜೊತೆಗೆ ಉತ್ತಮ ಬೆಲೆ ಸಹ ಇದ್ದು, ಈ ಪದಾರ್ಥಗಳನ್ನು ಒದಗಿಸುವ ಕಾರ್ಯವಾಗಬೇಕಿದೆ. ಎನ್‌ಆರ್‌ಎಲ್‌ಎಂ ಯೋಜನೆಯಡಿ ಸ್ವ–ಸಹಾಯ ಸಂಘದ ಮಹಿಳೆಯರು 20 ಲಕ್ಷ ರೂ.ವರೆಗೆ ಸಾಲ ಪಡೆಯಲು ಅವಕಾಶವಿದ್ದು, ಮಹಿಳೆಯರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು.
>
> -ಪ್ರಭುಸ್ವಾಮಿ, ಯೋಜನಾಧಿಕಾರಿ, ಜಿಪಂ, ಮೈಸೂರು.

ಚನ್ನಪಟ್ಟಣ ಉಪ ಚುನಾವಣೆ: ಪ್ರಜ್ವಲ್ ಸೆಕ್ಸ್ ಸ್ಕ್ಯಾಂಡಲ್ ಪ್ರಸ್ತಾಪಿಸಿದ ಸಿಎಂ ಸಿದ್ದರಾಮಯ್ಯ



ಚನ್ನಪಟ್ಟಣ, ನ.6– ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಕುಡ್ಲೂರು ಗ್ರಾಮದಲ್ಲಿ ಉಪಚುನಾವಣೆ ಪ್ರಚಾರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಮೊಮ್ಮಕ್ಕಳಾದ ಪ್ರಜ್ವಲ್ ರೇವಣ್ಣ ಮತ್ತು ಸೂರಜ್ ರೇವಣ್ಣ ಅವರ ಸೆಕ್ಸ್ ಸ್ಕ್ಯಾಂಡಲ್ ಬಗ್ಗೆ ಪ್ರಸ್ತಾಪಿಸಿದರು.

ಕಟುಕರಿಗೆ ಕಣ್ಣೀರು ಬರಲ್ಲ ಎಂದು ಹೇಳಿದ ದೇವೇಗೌಡರೇ, ಹಾಸನದಲ್ಲಿ ನಿಮ್ಮ ಮೊಮ್ಮಕ್ಕಳ ದೌರ್ಜನ್ಯಕ್ಕೆ ಒಳಗಾದ ನೂರಾರು ಮಂದಿ ಕಣ್ಣೀರು ಹಾಕುತ್ತಿದ್ದಾರೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ನೂರಾರು ಹೆಣ್ಣುಮಕ್ಕಳು ಕಣ್ಣೀರು ಹಾಕ್ತಿದ್ದಾರೆ. ಅಲ್ಲಿ ಹೋಗಿ ಅಳಿ ಅದನ್ನು ಬಿಟ್ಟು ಇಲ್ಲಿ ಅತ್ತರೆ ಏನು ಪ್ರಯೋಜನ ಎಂದರು.

ಲೋಕಸಭಾ ಚುನಾವಣೆಯಲ್ಲಿ ಮಂಡ್ಯದಲ್ಲಿ ಸೋತಿದ್ದ, ನಂತರ ರಾಮನಗರದಲ್ಲಿ ಸೋತಿದ್ದ ನಿಖಿಲ್ ಅವರನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದಾರೆ. ಅಳು ನಮ್ಮ ಪರಂಪರೆ, ನೀನು ಅಳೋಕೆ ಶುರು ಮಾಡು ಎಂದು ನಿಖಿಲ್‌ಗೆ ಹೇಳಿಕೊಟ್ಟಿದ್ದಾರೆ. ಸೋಲಿನ ಭಯ ಕಾಡುತ್ತಿದೆ ಅದಕ್ಕೆ ಎಲ್ಲರೂ ಕಣ್ಣೀರು ಹಾಕುತ್ತಿದ್ದಾರೆ. ಯೋಗೇಶ್ವರ್ ಗೆಲ್ಲುವುದು ಶತಸಿದ್ಧ. ಮಾಜಿ ಪ್ರಧಾನಿ ದೇವೇಗೌಡರು ಮೂರ್ನಾಲ್ಕು ದಿನ ರಾಮನಗರದಲ್ಲಿ ಠಿಕಾಣಿ ಹೂಡಿದ್ದಾರೆ. ಏನಾದರೂ ಮಾಡಿ ಮೊಮ್ಮಗನನ್ನು ಗೆಲ್ಲಿಸಬೇಕೆಂದು ಹೊರಟಿದ್ದಾರೆ.

ನಾನು ಈಗಾಗಲೇ ಕ್ಷೇತ್ರಕ್ಕೆ ರೂ.500 ಕೋಟಿಗೂ ಹೆಚ್ಚು ಕೊಟ್ಟಿದ್ದೀನಿ. ಯೋಗೇಶ್ವರ್ ಗೆದ್ದ ಮೇಲೆ ಮತ್ತಷ್ಟು ಅನುದಾನ ಕೊಡ್ತೀನಿ. ಇನ್ನೂ ಮೂರುವರೆ ವರ್ಷ ನಮ್ಮ ಸರ್ಕಾರವೇ ಇರುತ್ತೆ. ಕುಮಾರಸ್ವಾಮಿ ಸರ್ಕಾರ ಬರಲ್ಲ. ಅನುದಾನ ಕೊಡೋದು ನಾನು, ಡಿ.ಕೆ. ಶಿವಕುಮಾರ್ ಎಂದು ಸಿದ್ದರಾಮಯ್ಯ ಹೇಳಿದರು.

'ಅಳುವ ಗಂಡಸನ್ನ ನಂಬಬಾರ್ದು' ಅಂತ ನಮ್ಮ ಕಡೆ ಒಂದು ಗಾದೆ ಇದೆ. ಈ ಕುಮಾರಸ್ವಾಮಿ ಅಳುವ ಗಂಡಸು, ಯಾವತ್ತೂ ನಂಬಬೇಡಿ. ಅತ್ತರೆ ಜನರ ಸಮಸ್ಯೆ ಬಗೆಹರಿಯುತ್ತಾ? ಕೆರೆ ನೀರು ತುಂಬುತ್ತಾ? ಜಮೀನಿಗೆ ನೀರು ಹರಿಯುತ್ತಾ? ಎಂದು ಪ್ರಶ್ನಿಸಿದ ಅವರು, ಯಾರೂ ನಮ್ಮನ್ನು ಇನ್ವಿಟೇಶನ್ ಕೊಟ್ಟು ರಾಜಕೀಯಕ್ಕೆ ಬನ್ನಿ ಅಂತ ಕರೆದಿಲ್ಲ. ಸೇವೆ ಮಾಡಬೇಕು ಅಂತ ಬಂದಿದೀವಿ. ಗ್ಯಾರಂಟಿ ಯೋಜನೆ ಮೂಲಕ 1.69 ಕೋಟಿ ಕುಟುಂಬಗಳಿಗೆ ನೆರವಾಗುತ್ತಿದ್ದೇವೆ. ಸರ್ಕಾರದ ಸಾಧನೆ ನೋಡಿ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಅವರ ಬರೆದ ಪತ್ರವನ್ನು ಇದೇ ವೇಳೆ ಮುಖ್ಯಮಂತ್ರಿಗಳು ಸ್ಮರಿಸಿದರು.

ಏನೇ ಕೆಲಸ ಇರಲಿ 13ನೇ ತಾರೀಖು ಮತಗಟ್ಟೆಗೆ ಹೋಗಿ ಯೋಗೇಶ್ವರ್ ಅವರಿಗೆ ಮತ ಹಾಕಿ. ನಿಮ್ಮ ಆಶೀರ್ವಾದ ಯೋಗೇಶ್ವರ್ ಅವರ ಮೇಲಿರಲಿ ಎಂದು ಸಿಎಂ ಮನವಿ ಮಾಡಿದರು.

ವೈದ್ಯಕೀಯ ಸೀಟು: ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದಿಂದ 25 ಲಕ್ಷ ನೆರವು

ಬೆಂಗಳೂರು, ನ.6– ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 95 ಮತ್ತು ಅದಕ್ಕಿಂತ ಹೆಚ್ಚಿನ ಅಂಕ ಪಡೆದು ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ಮೂಲಕ ಸರ್ಕಾರಿ ಕೋಟಾದಡಿ ಪ್ರವೇಶ ಸಿಗದೆ, ಆಡಳಿತ ಮಂಡಳಿಯ ಕೋಟಾದಡಿ ಎಂಬಿಬಿಎಸ್ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮೊದಲ ವರ್ಷದಲ್ಲಿ 25 ಲಕ್ಷ ಕಾಲೇಜು ಶುಲ್ಕ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಹೀಗೆ ಪ್ರವೇಶ ಪಡೆದ ವಿದ್ಯಾರ್ಥಿ ಎಂಬಿಬಿಎಸ್ ಮೊದಲ ವರ್ಷದಲ್ಲಿ ಶೇ 60ಕ್ಕೂ ಹೆಚ್ಚು ಅಂಕ ಪಡೆದರೆ ಮತ್ತೆ 25 ಲಕ್ಷ ಪ್ರೋತ್ಸಾಹಧನ ಸಿಗಲಿದೆ. ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಐಐಟಿ, ಐಐಎಂ, ಐಐಎಸ್‌ಸಿ, ಎನ್‌ಐಟಿ ಮುಂತಾದ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಒಂದು ಬಾರಿ ನೀಡಲಾಗುವ ಪ್ರೋತ್ಸಾಹಕ ಧನವನ್ನು 1 ಲಕ್ಷದಿಂದ 2 ಲಕ್ಷಕ್ಕೆ ಹೆಚ್ಚಿಸಿ 2018ರಲ್ಲಿಯೇ ಆದೇಶ ಹೊರಡಿಸಲಾಗಿತ್ತು. ಆಡಳಿತ ಮಂಡಳಿಯ ಕೋಟಾದಡಿ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಕಾಲೇಜು ಶುಲ್ಕ ಮತ್ತು ಪ್ರೋತ್ಸಾಹಧನ ನೀಡುವ ಅಂಶವನ್ನೂ ಸೇರಿಸಿ ಅ.24ರಂದು ಆದೇಶ ಹೊರಡಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಮೂಲಗಳು ತಿಳಿಸಿವೆ.

ಪಿಯುಸಿ ಪರೀಕ್ಷೆಯಲ್ಲಿ ಶೇ 95ಕ್ಕೂ ಹೆಚ್ಚು ಅಂಕ ಪಡೆದು, ನೀಟ್‌ನಲ್ಲಿ ಅರ್ಹತೆ ಪಡೆದರೂ ಆಡಳಿತ ಮಂಡಳಿಯ ಕೋಟಾದಡಿ ಕಾಲೇಜು ಶುಲ್ಕ ಕಟ್ಟಲು ಸಾಧ್ಯವಾಗದೆ ಕೆಲವು ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಈ ಬಗ್ಗೆ ಅಲವತ್ತುಕೊಂಡಿದ್ದ ವಿದ್ಯಾರ್ಥಿಗಳು, ಕಾಲೇಜು ಶುಲ್ಕ ಕಟ್ಟಲು ಹಣಕಾಸಿನ ನೆರವು ನೀಡುವಂತೆ ಸಮಾಜ ಕಲ್ಯಾಣ ಸಚಿವರು ಮತ್ತು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು.

ವೈದ್ಯರು ಆರೋಗ್ಯ ಶಿಕ್ಷಣಕ್ಕೆ ಆದ್ಯತೆ ನೀಡಬೇಕು

ಮನೋವೈದ್ಯ ಡಾ.ಸಿ.ಆರ್.ಚಂದ್ರಶೇಖರ್ ಸಲಹೆ

ಮೈಸೂರು, ನ.6(ಎಂಕೆ)– ವೈದ್ಯರು ಆರೋಗ್ಯ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ವೃತ್ತಿ ಜೀವನದ ಅನುಭವವನ್ನು ಕನ್ನಡದಲ್ಲಿ ಬರೆದು ಜನರಿಗೆ ವೈದ್ಯಕೀಯ ಮಾಹಿತಿ ನೀಡುವಂತೆ ಪದ್ಮಶ್ರೀ ಪುರಸ್ಕೃತ ವೈದ್ಯ ಸಾಹಿತಿ, ಮನೋವೈದ್ಯ ಡಾ.ಸಿ. ಆರ್.ಚಂದ್ರಶೇಖರ್ ಕರೆ ನೀಡಿದರು.

ನಗರದ ಜೆ.ಕೆ.ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ(ಎಂಎಂಸಿಆರ್‌ಐ) ವತಿಯಿಂದ ಅಮೃತ ಮಹೋತ್ಸವ ಸಭಾಂಗಣದಲ್ಲಿ ಬುಧವಾರ ನಡೆದ ಕನ್ನಡ ರಾಜ್ಯೋತ್ಸವ ಹಾಗೂ ಧಮನಿ–24 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೈದ್ಯ ವೃತ್ತಿಯಲ್ಲಿ ಚಿಕಿತ್ಸಾ ಕ್ರಮಗಳು ಅನುಸರಿಸುವುದು ಎಷ್ಟು ಮುಖ್ಯವೋ ಅದೇ ರೀತಿ ಜನರಿಗೆ ಆರೋಗ್ಯ ಶಿಕ್ಷಣ ನೀಡುವುದು ಮುಖ್ಯ ಎಂದರು.

ಕನ್ನಡದಲ್ಲಿ ಸ್ಪಷ್ಟವಾಗಿ ಮಾತಾಡುವುದನ್ನು ಕಲಿಯಿರಿ, ಗ್ರಾಮೀಣರ ಭಾಷೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ಎಲ್ಲರೊಂದಿಗೂ ಪ್ರೇಮದಿಂದ ವರ್ತಿಸಿ. ಕನ್ನಡ ಪ್ರೇಮವೂ ನಿಮ್ಮಲ್ಲಿ ಎಂದಿಗೂ ಬತ್ತದಿರಲಿ, ರೋಗಿಗಳನ್ನು ಪ್ರೀತಿಯಿಂದ ಕಾಣಿ ಎಂದು ಕಿವಿಮಾತು ಹೇಳಿದರು.

ಕನ್ನಡದ ವೈದ್ಯ ಸಾಹಿತ್ಯಕ್ಕೆ ಅನೇಕ ಮಹನೀಯರು ತಮ್ಮದೇ ಕೊಡುಗೆ ನೀಡಿದ್ದು, ಇಲ್ಲಿವರೆಗೂ ಸುಮಾರು 150 ಮಂದಿ ವೈದ್ಯ ಸಾಹಿತ್ಯವನ್ನು ರಚಿಸಿರಬಹುದು. ಅವರೆಲ್ಲರ ಬಗ್ಗೆ ಕಿರು ಮಾಹಿತಿಯನ್ನು ಕಲೆಹಾಕುವ ಮೂಲಕ ಇಲ್ಲಿನ ಕನ್ನಡ ಸಂಘವು ವೈದ್ಯ ಲೇಖಕರನ್ನು ಪರಿಚಯಿಸುವ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

ಡಾ.ಡಿ.ಎಸ್.ಶಿವಪ್ಪ ಅವರ 'ವೈದ್ಯಕೀಯ ಪದಕೋಶ', ಡಾ.ಪಿ.ಎಸ್.ಶಂಕರ್ ಅವರ 'ವೈದ್ಯಕೀಯ ವಿಶ್ವಕೋಶ', ಡಾ. ಅನುಪಮಾ ನಿರಂಜನ ಅವರ 'ತಾಯಿ ಮತ್ತು ಮಗು', ಡಾ.ಎಸ್.ಜೆ.ನಾಗಲೋಟಿಮಠ ಅವರ 'ಶ್ರೀಸಾಮಾನ್ಯ ಮತ್ತು ವೈದ್ಯ', ಡಾ.ಲೀಲಾವತಿ ದೇವದಾಸ್ ಅವರ 'ನಾನು ಗೌರಿಯ ಗರ್ಭಕೋಶ', ಹೆಚ್.ಡಿ.ಚಂದ್ರಪ್ಪ ಗೌಡ ಅವರ 'ವೈದ್ಯಾಧಿಕಾರಿಯ ಬದುಕು ಮತ್ತು ಬವಣೆ' ಹಾಗೆಯೇ ಡಾ.ಎಸ್.ಗಿರಿಜಮ್ಮ, ಡಾ.ಸಿ.ಅನ್ನಪೂರ್ಣಮ್ಮ, ಡಾ.ನಾ.ಸೋಮೇಶ್ವರ, ಡಾ. ಅಶೋಕ್ ಪೈ ಅವರ ವಿವಿಧ ಕೃತಿಗಳು ಸ್ಮರಣೀಯವಾಗಿವೆ ಎನ್ನುತ್ತಾ ಕೃತಿಗಳ ಪರಿಚಯವನ್ನು ಮಾಡಿಕೊಟ್ಟರು.

ಎರಡು ದಿನಗಳ ಕನ್ನಡ ಸಂಭ್ರಮ: ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ ಮಾತನಾಡಿ, ಶತಮಾನೋತ್ಸವದ ಸಂಭ್ರಮದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಿದ್ದೇವೆ. ಸಾಂಕೇತಿಕವಾಗಿ ಒಂದು ದಿನ ಮಾತ್ರ ನಡೆಯುತ್ತಿದ್ದ ಆಚರಣೆಯನ್ನು ಎರಡು ದಿನ ನಡೆಸುವ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯದಲ್ಲಿರುವ ಸುಮಾರು 70ಕ್ಕೂ ಹೆಚ್ಚು ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳು ಸೇರಿ ಪ್ರಸಕ್ತ ವರ್ಷದಿಂದ ಆರಂಭವಾಗಿರುವ ಕನ್ನಡ ಸಂಘದ ಅಧ್ಯಕ್ಷತೆಯನ್ನು ಮೈಸೂರು ಮೆಡಿಕಲ್ ಕಾಲೇಜು ಅಲಂಕರಿಸಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಮೈಸೂರು ಮೆಡಿಕಲ್ ಕಾಲೇಜು ಪ್ರಾಂಶುಪಾಲ ಪಿ.ಎಲ್.ಬಸವಣ್ಣ, ಕೆ.ಆರ್. ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ. ಶೋಭಾ, ಚೆಲುವಾಂಬ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ರಾಜೇಂದ್ರ ಕುಮಾರ್, ಪಿಕೆಟಿಬಿ ಆಸ್ಪತ್ರೆ ವೈದ್ಯಕೀಯ ಅಧಿಕ್ಷಕ ಡಾ.ಸಿ.ಪ್ರಶಾಂತ್, ಶಿಕ್ಷಕರ ಸಂಘದ ಅಧ್ಯಕ್ಷೆ ಆರ್.ಸುಧಾ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಎಸ್.ಚಂದ್ರಶೇಖರ್, ಕನ್ನಡ ಸಂಘದ ಅಧ್ಯಕ್ಷೆ ಶುಭಾ ಜಯರಾಂ, ಉಪಾಧ್ಯಕ್ಷ ಡಾ.ಆರ್.ಯೋಗೀಶ್, ಕಾರ್ಯದರ್ಶಿ ಲಿಖಿತ್ ಆರ್.ಶೇಖರ್, ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಐ.ಎಸ್.ಸಮೃದ್, ಚಿನ್ಮಯ್ ನಾಯಕ್, ಶರಣ್ ಮತ್ತಿತರರಿದ್ದರು.



ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಮೃತ ಮಹೋತ್ಸವ ಸಭಾಂಗಣದಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ವೈದ್ಯ ಸಾಹಿತಿ, ಮನೋವೈದ್ಯ ಡಾ.ಸಿ.ಆರ್.ಚಂದ್ರಶೇಖರ್ ಮಾತನಾಡಿದರು.

> **ರಥೋತ್ಸವ...**
>
> ಕಾರ್ಯಕ್ರಮಕ್ಕೂ ಮುನ್ನ ಮೈಸೂರು ಮೆಡಿಕಲ್ ಕಾಲೇಜು ಆವರಣದಿಂದ ಜೆ.ಕೆ.ಮೈದಾನದವರೆಗೆ ಭುವನೇಶ್ವರಿ ದೇವಿಯ ರಥೋತ್ಸವ ನಡೆಯಿತು. ಕಂಸಾಳೆ, ಡೊಳ್ಳು ಕುಣಿತ ಸೇರಿದಂತೆ ಹಲವು ಸಾಂಸ್ಕೃತಿಕ ಕಲಾತಂಡಗಳೊಂದಿಗೆ ನೂರಾರು ವೈದ್ಯಕೀಯ ವಿದ್ಯಾರ್ಥಿಗಳು ಸಾಗಿದರು. ವೇದಿಕೆ ಕಾರ್ಯಕ್ರಮದ ಬಳಿಕ ಕನ್ನಡೇತರ ವೈದ್ಯ ವಿದ್ಯಾರ್ಥಿಗಳು 'ಹಚ್ಚೇವು ಕನ್ನಡದ ದೀಪ' ಹಾಡನ್ನು ಸಮಧುರವಾಗಿ ಹಾಡುವ ಮೂಲಕ ಗಮನ ಸೆಳೆದರು.

ನಕ್ಕರೆ ಅದೇ ಸ್ವರ್ಗ

ಗುಂಡ : ತಳ್ಳು ಗಾಡಿಯಲ್ಲಿ ತರಕಾರೀ ಮಾರಿಕೊಂಡು ಬಂದವನ ಬಳಿ ಐದು ಕೆಜಿ ಟೊಮೆಟೋ ಕೊಡು ಅಂತ ಕೇಳಿದೆ. ಪಕ್ಕದಲ್ಲಿ ನಿಂತಿದ್ದ ಇಬ್ಬರು ಹೆಂಗಸರು ಗುಸುಗುಸು ಮಾತನಾಡಲು ಆರಂಭಿಸಿದರು.

ತಿಮ್ಮ : ಏನಂತ?

ಗುಂಡ : ಹುಡುಗ ತುಂಬಾ ಸಂಸ್ಕಾರಸ್ಥ ಎಂದನಿಸುತ್ತದೆ. ನಮ್ಮ ಮನೆ ಹುಡುಗಿಗೆ ಇವನೇ ಪರ್ಫೆಕ್ಟ್ ಜೋಡಿ.

ಮೈಸೂರು ಮಿತ್ರ
ಗುರುವಾರ, 7 ನವೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕಾಣದ ದಾರಿಯಲ್ಲಿ ನಿನ್ನವರನ್ನು ಹುಡುಕಬೇಡ, ನಿನ್ನ ದಾರಿಯಲ್ಲಿ ನಿನಗಾಗಿ ಬಂದವರನ್ನು ಕಳೆದುಕೊಳ್ಳಬೇಡ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚರ್ಮ ಹೋದರೂ ಪರವಾಗಿಲ್ಲ, ಕಾಸು ಹೋಗಬಾರದು ಎಂದಂತೆ.

ನಿಮ್ಮ ಪತ್ರಗಳು

ಮರೆಯಲಾಗದ ಶಂಕರ್‌ನಾಗ್



ಮಾನ್ಯರೆ,

ನ. 9 ರಂದು ದಿವಂಗತ ಕರಾಟೆ ಕಿಂಗ್ ಶಂಕರ್‌ನಾಗ್ ಅವರ 70ನೇ ವರ್ಷದ ಜನ್ಮದಿನ. ಒಂದಾನೊಂದು ಕಾಲದಲ್ಲಿ ಚಿತ್ರದ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ ಶಂಕರ್‌ನಾಗ್ ಬಹು ಬೇಗನೆ ಅಭಿಮಾನಿಗಳ ಹೃದಯ ಸಿಂಹಾಸನದಲ್ಲಿ ಆಸೀನರಾದರು.

ಚಿತ್ರರಂಗಕ್ಕೆ ಬಂದ ಕೆಲವೇ ವರ್ಷಗಳಲ್ಲಿ ಮೇರುನಟ ಡಾ.ರಾಜ್‌ಕುಮಾರ್ ಅವರಿಗೆ ಚಿತ್ರ ನಿರ್ದೇಶಿಸಿದ ಹೆಗ್ಗಳಿಕೆ ಶಂಕರ್‌ನಾಗ್‌ರವರದು. ಚಿತ್ರ ಒಂದು ಮುತ್ತಿನ ಕಥೆ, ಮೈಸೂರು ರತ್ನ ಡಾ.ರೆಬಲ್ ಸ್ಟಾರ್ ಅಂಬರೀಶ್ ಅಭಿನಯದ ಶಂಕರ್‌ನಾಗ್ ನಿರ್ದೇಶಿಸಿದ ಹೊಸ ತೀರ್ಪು ಚಿತ್ರವು ಶಂಕರ್‌ನಾಗ್ ಅವರ ವಿಭಿನ್ನ ವಿಶಿಷ್ಟ ಕಲ್ಪನೆಗೆ ಸಾಕ್ಷಿಯಾಗಿದೆ.

ಅವರ ನಿರ್ದೇಶನದ ಪ್ರತಿಯೊಂದು ಚಿತ್ರಗಳು ಒಂದಕ್ಕಿಂತ ಒಂದು ವಿಭಿನ್ನ, ವಿಶಿಷ್ಟ ಕಥೆಗಳನ್ನೊಳಗೊಂಡಿದ್ದಂತಹ ಚಿತ್ರಗಳು. ನಟನೆ, ನಿರ್ದೇಶನ ಎರಡರಲ್ಲೂ ಸೈ ಎನಿಸಿಕೊಂಡ ಭಲೇ ಚತುರ, ಸೀತಾರಾಮು, ಗೀತಾ, ಅಪೂರ್ವ ಸಂಗಮ, ಭರ್ಜರಿ ಬೇಟೆ, ಆಟೋರಾಜ, ಮಿಂಚಿನ ಓಟ, ಗೆದ್ದಮಗ, ನ್ಯಾಯ ಎಲ್ಲಿದೆ, ವಜ್ರಮುಷ್ಠಿ, ಆರದ ಗಾಯ, ಮುನಿಯನ ಮಾದರಿ, ಮೂಗನ ಸೇಡು, ಮಾನವ ದಾನವ, ಜಯಭೇರಿ, ಮಹೇಶ್ವರ, ಸಿಬಿಐ ಶಂಕರ್, ಸಾಂಗ್ಲಿಯಾನ, ಹೊಸಜೀವನ ಇನ್ನು ಹಲವಾರು ಚಿತ್ರಗಳಲ್ಲಿ ಮನೋಜ್ಞವಾಗಿ ಅಭಿನಯಿಸಿ, ಕನ್ನಡ ಚಿತ್ರ ಪ್ರೇಮಿಗಳ ಮನದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ.

ಆಟೋರಾಜ ಚಿತ್ರದ ಮೂಲಕ ಹೊಸ ಇತಿಹಾಸವನ್ನೇ ಸೃಷ್ಟಿಸಿ ಆಟೋಗಳಲ್ಲಿ ಮತ್ತು ಆಟೋ ಚಾಲಕರ ಮನೆಮನಗಳಲ್ಲಿ ಇಂದಿಗೂ ರಾರಾಜಿಸುತ್ತಿದ್ದಾರೆ. ತಾ. 30.9.1990 ರ ರಾತ್ರಿ ದಾವಣಗೆರೆ ಸಮೀಪ ಕಾರು ಅಪಘಾತದಲ್ಲಿ ಶಂಕರ್‌ನಾಗ್ ಅವರು ನಮ್ಮಿಂದ ದೂರವಾದರೂ ಕೂಡ ಅವರ ಅಭಿನಯದ ಚಿತ್ರಗಳ ಮೂಲಕ ನಮಗೆ ಇನ್ನು ಹೆಚ್ಚೆಚ್ಚು ಹತ್ತಿರವಾಗುತ್ತಿದ್ದಾರೆ. ಮರೆಯಲಾಗದ ಕರಾಟೆ ಕಿಂಗ್ ಶಂಕರನಾಗ್ ಅವರಿಗೆ 70ನೇ ವರ್ಷದ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು. ರಾಜ್ಯದ ಯಾವುದಾದರೂ ವಿಶ್ವವಿದ್ಯಾನಿಲಯ ಕರಾಟೆ ಕಿಂಗ್ ಶಂಕರ್‌ನಾಗ್ ಅವರಿಗೆ ಮರಣೋತ್ತರ ಗೌರವ ಡಾಕ್ಟರೇಟ್ ನೀಡಲಿ.

–ಅಹಲ್ಯ. ಸಿ.ನಾ.ಚಂದ್ರ, ಜನತಾ ನಗರ, ಮೈಸೂರು

ವಿಪರ್ಯಾಸ!

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಲೋಕಾಯುಕ್ತ ಎಸ್‌ಪಿ ಮುಂದೆ ವಿಚಾರಣೆಗೆ ಹಾಜರಾದರಂತೆ! ರಾಜನನ್ನು ಸೈನಿಕ ವಿಚಾರಿಸಿದಂತಾಯಿತು! ಲೋಕಾಯುಕ್ತ ಎಸ್‌ಪಿ ಅವರು ಸಿದ್ದರಾಮಯ್ಯನವರ ವಿಚಾರಣೆ ಮಾಡಿದರೋ ಅಥವಾ ಸಿದ್ದರಾಮಯ್ಯನವರೇ ಲೋಕಾಯುಕ್ತ ಎಸ್‌ಪಿ ಅವರನ್ನು ವಿಚಾರಿಸಿಕೊಂಡರೋ ದೇವನೇ ಬಲ್ಲ!

–ಪಿ.ಜೆ.ರಾಘವೇಂದ್ರ, ಮೈಸೂರು

ಚಿತ್ರಮಂದಿರಗಳ ಅವಸಾನ!

ಮಾನ್ಯರೆ,



ರಾಜ್ಯದ ಪ್ರಮುಖ ಚಿತ್ರಮಂದಿರವಾಗಿದ್ದ ಹಾಗೂ ಕಳೆದ ಕೆಲವು ತಿಂಗಳಿಂದ ಮುಚ್ಚಲ್ಪಟ್ಟಿದ್ದ ಮೈಸೂರಿನ ಸರಸ್ವತಿ ಚಿತ್ರಮಂದಿರವನ್ನು ಕೆಡವಲು ಪ್ರಾರಂಭಿಸಲಾಗಿದೆ. ಎರಡು ವರ್ಷಗಳಿಗೂ ಹಿಂದೆ ನಗರದ ಮತ್ತೊಂದು ಪ್ರತಿಷ್ಠಿತ ಚಿತ್ರಮಂದಿರವಾದ 'ಲಕ್ಷ್ಮಿ'ಯನ್ನು ಆರ್ಥಿಕ ಕಾರಣಗಳಿಂದಾಗಿ ಮುಚ್ಚಲ್ಪಟ್ಟಿತ್ತು. ಈಗ ಲಕ್ಷ್ಮಿಯನ್ನು ಸರಸ್ವತಿಯೂ ಹಿಂಬಾಲಿಸಿ ಹೋಗಿದ್ದಾಳೆ. ಅಂದ ಹಾಗೆ ಮೈಸೂರು ನಗರದಲ್ಲಿದ್ದ ಹಲವು ಪ್ರಮುಖ ಚಿತ್ರಮಂದಿರಗಳು ಈಗ ಗತಕಾಲದ ಪಳೆಯುಳಿಕೆಗಳಾಗಿವೆ. ಅಲ್ಲೆಲ್ಲಾ ಭವ್ಯ ವಾಣಿಜ್ಯ ಸಂಕೀರ್ಣಗಳು, ಹೋಟೆಲ್‌ಗಳು, ಮಾಲ್‌ಗಳು ತಲೆ ಎತ್ತಿವೆ. ಅಪೇರಾ, ರಣಜಿತ್, ಶಾಂತಲ, ಶ್ರೀ, ಶಾಲಿಮಾರ್, ರತ್ನ, ವಿದ್ಯಾರಣ್ಯ, ಗಣೇಶ, ಒಲಂಪಿಯಾ, ಚಾಮುಂಡೇಶ್ವರಿ, ಸ್ಟರ್ಲಿಂಗ್ ಮುಂತಾದ ಚಿತ್ರಮಂದಿರಗಳು ಮುಚ್ಚಿ ಹಲವಾರು ವರ್ಷಗಳೇ ಕಳೆದಿವೆ. ಬರೀ ನಗರದಲ್ಲಿ ಮಾತ್ರವಲ್ಲದೇ ಮಹಾನಗರ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ನೂರಾರು ಚಿತ್ರಮಂದಿರಗಳು ಮುಚ್ಚಿವೆ. ಇಂದಿನ ದಿನಗಳಲ್ಲಿ ಚಿತ್ರಮಂದಿರಗಳನ್ನು ನಡೆಸುವುದು ಲಾಭದಾಯಕವಲ್ಲ ಎಂಬ ಸತ್ಯವನ್ನು ಅರಿತ ಚಿತ್ರಮಂದಿರಗಳ ಮಾಲೀಕರು, ಲಾಭದಾಯಕ ಉದ್ಯಮಗಳತ್ತ ಹೊರಟಿರುವುದು ಸಹಜ ಮತ್ತು ಸ್ವಾಭಾವಿಕವಾಗಿದೆ. ಲಾಭದ ಮಾತಿರಲಿ, ಕೆಲವು ಚಿತ್ರಮಂದಿರಗಳ ಮಾಲೀಕರು ಸತತ ನಷ್ಟವನ್ನು ಅನುಭವಿಸಿ, ಕಡೆಗೆ ತಮ್ಮ ನೌಕರರಿಗೆ ಸಂಬಳವನ್ನು ಕೂಡ ಕೊಡಲಾಗದ ಅಸಹಾಯಕ ಪರಿಸ್ಥಿತಿ ಎದುರಿಸಿ ಕಡೆಗೆ ಬೇರೆ ದಾರಿ ಕಾಣದೇ ಚಿತ್ರಮಂದಿರಗಳನ್ನು ಮುಚ್ಚುತ್ತಿರುವುದು ನೋವಿನ ಸಂಗತಿ. ಅವರು ತಾನೇ ಬೇರೇನು ಮಾಡಿಯಾರು? ಚಿತ್ರಮಂದಿರಗಳ ಉಳಿವಿಗೆ ರಾಜ್ಯ ಸರ್ಕಾರ ಈಗಲಾದರೂ ಮಧ್ಯಪ್ರವೇಶಿಸದಿದ್ದರೆ, ಉಳಿದಿರುವ ಚಿತ್ರಮಂದಿರಗಳೂ ಸಹ ನಾಮಾವಶೇಷವಾಗುವುದರಲ್ಲಿ ಸಂಶಯವಿಲ್ಲ. –ಕೆ.ವಿ.ವಾಸು, ವಕೀಲರು, ನೋಟರಿ, ಮೈಸೂರು

ನ್ಯಾಯಾಂಗ ವ್ಯವಸ್ಥೆ ಬಲಿಷ್ಠವಾದರೆ ಮಾತ್ರ ಜನರು ನೆಮ್ಮದಿಯಿಂದ ಬದುಕಲು ಸಾಧ್ಯ

ಮಾನ್ಯರೆ,

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ನಿನ್ನೆ ಮಾಧ್ಯಮಗಳ ಮುಂದೆ ನ್ಯಾಯಾಂಗದ ಮೇಲೆ ಜನರಿಗೆ ವಿಶ್ವಾಸ ಮೂಡುತ್ತಿದೆ. ಇದೊಂದು ಉತ್ತಮ ಬೆಳವಣಿಗೆ ಎಂದು ಹೇಳಿಕೆ ನೀಡಿದ್ದಾರೆ. ಕಾರವಾರದ ಶಾಸಕ ಸೈಲ್ ಅವರಿಗೆ ಬೇಲೆಕೇರಿ ಅದಿರು ಕಳ್ಳತನ ಪ್ರಕರಣದಲ್ಲಿ 7 ವರ್ಷಗಳ ಕಾಲ ಜೈಲು ಶಿಕ್ಷೆಯಾಗಿದ್ದನ್ನು ಸ್ವಾಗತಿಸಿ, ನ್ಯಾಯಾಂಗಕ್ಕೆ ದೊರೆತ ಜಯವೆಂದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇಂತಹ ಪ್ರಕರಣಗಳಲ್ಲಿ ಭಾಗಿಯಾಗಿರುವ ಇನ್ನು ಅನೇಕರಿಗೆ ಶಿಕ್ಷೆ ಆಗಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಬೆಳವಣಿಗೆ ಈಗ ರಾಜ್ಯದ ಅನೇಕ ರಾಜಕಾರಣಿಗಳನ್ನು ನಿದ್ದೆಗೆಡಿಸಿರಬಹುದು !

ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ನಡೆದ ಪ್ರಜ್ವಲ್ ರೇವಣ್ಣನ ಪ್ರಕರಣ ಇರಬಹುದು, ನಟ ದರ್ಶನ್ ಪ್ರಕರಣ ಇರಬಹುದು, ಶಾಸಕ ಮುನಿರತ್ನ ಅವರದು ಎನ್ನಲಾದ ಅತ್ಯಾಚಾರ ಪ್ರಕರಣಗಳಲ್ಲಿ ನ್ಯಾಯಾಂಗ ತೆಗೆದುಕೊಂಡ ನಿರ್ಧಾರಗಳು ಸಾಮಾನ್ಯ ಜನರಲ್ಲಿ ನ್ಯಾಯಾಂಗದ ಬಗ್ಗೆ ಹೆಚ್ಚು ವಿಶ್ವಾಸ ಮೂಡುವಂತಾಗಿದೆ. ನ್ಯಾಯಾಂಗ ವ್ಯವಸ್ಥೆ ಇನ್ನೂ ಬಲಿಷ್ಠವಾದರೆ ಮಾತ್ರ ಸಾಮಾನ್ಯ ಜನರು ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತದೆ. ರಾಜಕಾರಣಿಗಳು ಸಹ ಬುದ್ಧಿ ಕಲಿಯುತ್ತಾರೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು




ಡಾ. ಹೆಚ್.ವಿ.ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಭಗವದ್ಗೀತೆ ಹೇಗೆ ಓದಬೇಕು?

ಭಗವದ್ಗೀತೆ ಭಾರತ ದೇಶದ ಜನಪ್ರಿಯ ಅಧ್ಯಾತ್ಮ ಗ್ರಂಥವಾಗಿದ್ದು, ಅನೇಕರು ಇದನ್ನು ಓದುತ್ತಿದ್ದಾರೆ. ಸಹಸ್ರಾರು ಜನರು ಇದನ್ನು ಕಂಠಸ್ಥವಾಗಿ ಮಾಡಿಕೊಂಡು ಪುಸ್ತಕದ ಅವಶ್ಯಕತೆಯಿಲ್ಲದೆ ಪ್ರತಿದಿನ ಪಾರಾಯಣ ಮಾಡುತ್ತಾರೆ. ಜಿಜ್ಞಾಸುಗಳು ತಮಗೆ ತಿಳಿದ ಭಾಷೆಯಲ್ಲಿರುವ ಅದರ ಅನುವಾದಗಳನ್ನು ಓದಿ ಅರ್ಥವನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆ. ಸಂಸ್ಕೃತ ಭಾಷೆಯನ್ನು ತಿಳಿದವರು ಭಗವದ್ಗೀತೆಯ ಮೇಲೆ ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ ಮುಂತಾದ ದಾರ್ಶನಿಕರು ಬರೆದಿರುವ ಭಾಷ್ಯಗಳನ್ನು ಓದಿ ಅವರವರ ಅಭಿಪ್ರಾಯಗಳು ಏನಿವೆ ಎಂದು ಅರಿಯಲು ಯತ್ನಿಸುತ್ತಾರೆ. ಆಂಗ್ಲ ಭಾಷೆಯನ್ನು ಬಲ್ಲವರು ವಿವೇಕಾನಂದ, ಮಹಾತ್ಮ ಗಾಂಧಿ, ಬಾಲಗಂಗಾಧರತಿಲಕ್ ಮುಂತಾದ ಮಹಾನುಭಾವರ ವೈಚಾರಿಕ ಚಿಂತನೆಗಳ ಮೂಲಕ ಭಗವದ್ಗೀತೆಯ ತಾತ್ಪರ್ಯವನ್ನು ತಿಳಿದುಕೊಳ್ಳಲು ಯತ್ನಿಸುತ್ತಾರೆ. ನೂರಾರು, ಸಾವಿರಾರು ವ್ಯಾಖ್ಯಾನಗಳು, ವಿವರಣೆಗಳು ಉಪಲಬ್ಧವಾಗಿದ್ದರೂ ಈ ಗ್ರಂಥದ ಆಳ ಅಗಲಗಳು ಇಷ್ಟೇ ಎಂದು ನಿರ್ಧರಿಸಲು ಆಗಿಲ್ಲವೆಂಬುದು ವಾಸ್ತವ. ಇದರಲ್ಲಿರುವ ಸಮಾಧಿ, ಬ್ರಹ್ಮ ನಿರ್ವಾಣ, ಮೋಕ್ಷ ಮುಂತಾದ ಪದಗಳ ಅರ್ಥ ಇದೇ ಎಂದು ಹೇಳಲು ಯಾರು ಶಕ್ತರು? ಅವುಗಳ ಅನುಭವ ಕಿಂಚಿತ್ತೂ ಇಲ್ಲದ ನಾವು ಪರರ ಮಾತುಗಳನ್ನೇ ನಂಬಬೇಕು. ಆ ಮಾತುಗಳು ಪರಸ್ಪರ ವಿರುದ್ಧವಾಗಿದ್ದಾಗ ದಿಕ್ಕು ತೋಚದೆ ಆಗುವುದು ಅನಿವಾರ್ಯ. ಸಾವಿರ ಜನರು ಸಾವಿರ ದೃಷ್ಟಿಕೋನಗಳಿಂದ ಭಗವದ್ಗೀತೆಯನ್ನು ಕಾಣುತ್ತಾರೆ ಎಂಬುದು ಸತ್ಯ.



1. ಮುಗ್ಧರ ದೃಷ್ಟಿ

ಭಗವದ್ಗೀತೆಯ ಒಂದೊಂದು ಅಕ್ಷರವೂ ಪವಿತ್ರ. ಅದನ್ನು ಓದುವುದೇ ಪುಣ್ಯದ ಕಾರ್ಯ. ಅದರ ಅರ್ಥ ಏನಾದರೂ ಸರಿ ಎಂಬುದು ಇವರ ದೃಷ್ಟಿ.

ಗೀತಾಶಾಸ್ತ್ರಮಿದಂ ಪುಣ್ಯಂ ಯಃ ಪಠೇತ್ ಪ್ರಯತಃ ಪುಮಾನ್।
ವಿಷ್ಣೋಃ ಪದಮವಾಪ್ನೋತಿ ಭಯಶೋಕವಿವರ್ಜಿತಃ॥

ಎಂದು ಗೀತಾಮಾಹಾತ್ಮ್ಯದಲ್ಲಿ ಹೇಳಿದೆ. ಈ ಪುಣ್ಯಮಯವಾದ ಗೀತಾಶಾಸ್ತ್ರವನ್ನು ಓದಿದವನು ಭಯವನ್ನು ಶೋಕವನ್ನೂ ವರ್ಜಿಸಿ ವಿಷ್ಣುಪಾದವನ್ನು ಸೇರುತ್ತಾನೆ ಎಂದು ಇದರ ಅಭಿಪ್ರಾಯ. ಇಲ್ಲಿ ಅರ್ಥಕ್ಕೆ ಪ್ರಾಧಾನ್ಯವಿಲ್ಲ. ಗ್ರಂಥದ ಪಠನ ಮತ್ತು ಶ್ರವಣ, ಅದೇ ಮುಖ್ಯ ಎಂದಿವರ ಭಾವನೆ.

2. ಚಿಂತನಶೀಲರ ದೃಷ್ಟಿ

ಅರ್ಥವನ್ನು ತಿಳಿಯದೆ ಓದುವುದು ಯಾಂತ್ರಿಕ ಕ್ರಿಯೆ. ಅಲ್ಲಿರುವ ಶ್ಲೋಕಗಳನ್ನು ಓದುವುದು ಮತ್ತು ಕಂಠಸ್ಥ ಮಾಡಿಕೊಳ್ಳುವುದೇ ಮುಖ್ಯವಾದರೆ, ಅಷ್ಟರಿಂದಲೇ ಮೋಕ್ಷ ಸಿಕ್ಕುವುದಾದರೆ, ಕ್ಯಾಸೆಟ್ಟುಗಳಿಗೂ ಮೊಬೈಲ್ ಫೋನ್‌ಗಳಿಗೂ ಮೋಕ್ಷ ಪ್ರಾಪ್ತಿಯಾಗಬೇಕಾದೀತು. ಮನುಷ್ಯರಿಗಿಂತಲೂ ಅವೇ ಆ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಮಾಡುತ್ತವೆ. ಅಲ್ಲವೇ? ಮನುಷ್ಯನ ವಿಶೇಷವೇನೆಂದರೆ ಕೇಳಿದುದರ ಅರ್ಥವನ್ನು ಅರಿತು ಅನುಷ್ಠಾನ ಮಾಡಿ ಮೋಕ್ಷವನ್ನು ಪಡೆಯುವುದು. ಅರ್ಥಜ್ಞಾನವಿಲ್ಲದ ಶ್ರವಣ–ಪಠನಗಳು ವ್ಯರ್ಥವೆಂದು ಚಿಂತಕರ ಅಭಿಪ್ರಾಯ.

ಸ್ಥಾಣುರಯಂ ಭಾರಹಾರಃ ಕಿಲಾಭೂದ್
ಅಧೀತ್ಯ ವೇದಂ ನ ವಿಜಾನಾತಿ ಯೋಽರ್ಥಮ್।

ವೇದವನ್ನು ಓದಿದರೂ ಅರ್ಥವನ್ನು ತಿಳಿದುಕೊಳ್ಳದವನು ಕೇವಲ ಭಾರವನ್ನು ಹೊರುವ ಕಂಬದಂತೆ– ಎಂದು ಇವರು ಹೇಳುತ್ತಾರೆ.

ಜ್ಞಾನವೇ ಪವಿತ್ರ ಶಬ್ದವಲ್ಲ. ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ (4.38) ಜ್ಞಾನಕ್ಕೆ ಸಮನಾದ ಪವಿತ್ರ ವಸ್ತು ಈ ಲೋಕದಲ್ಲಿಲ್ಲ ಎಂದು ಭಗವದ್ಗೀತೆಯೇ ಹೇಳಿದೆ. ಬೇರೆ ಬೇರೆ ಭಾಷೆಗಳಲ್ಲಿ ಒಂದೇ ವಿಷಯವನ್ನು ಹೇಳಬಹುದು. ಪ್ರತಿಪಾದ್ಯವಾದ ಜ್ಞಾನ ಮುಖ್ಯ. ಅದನ್ನು ತಿಳಿಸುವ ಶಬ್ದ ಯಾವುದಾದರೇನು ಎಂದು ಚಿಂತನಶೀಲರು ಹೇಳುತ್ತಾರೆ.

3. ಯೋಗಿಗಳ ದೃಷ್ಟಿ

ಭಗವದ್ಗೀತೆ ಮುಖ್ಯವಾಗಿ ಯೋಗವನ್ನು ತಿಳಿಸಲು ಹೊರಟಿದೆ. ಎಷ್ಟೇ ಜ್ಞಾನವಿದ್ದರೂ ಅದು ಕಾರ್ಯರೂಪದಲ್ಲಿ ಅನುಷ್ಠಾನಗೊಳ್ಳುವುದು ಯೋಗದಲ್ಲಿ. ಆತ್ಮ ಬ್ರಹ್ಮ ತಪಸ್ಸು ಇತ್ಯಾದಿಗಳ ಬಗೆಗೆ ಎಷ್ಟು ಜ್ಞಾನವಿದ್ದರೂ ಅದನ್ನು ಅಪರೋಕ್ಷವಾಗಿ ಸಾಕ್ಷಾತ್ ಅನುಭವಕ್ಕೆ ತಂದುಕೊಳ್ಳದಿದ್ದರೆ ಪ್ರಯೋಜನ ಏನು? ಆದ್ದರಿಂದ ಯೋಗ ಸಾಧನೆಗಾಗಿಯೇ ಭಗವದ್ಗೀತೆ ಓದಬೇಕು.

ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ।
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್‌ಯೋಗೀ ಭವಾರ್ಜುನ ॥ (6.46)

ಯೋಗಿಯು ತಪಸ್ವಿಗಳಿಗಿಂತ ಹೆಚ್ಚು, ಜ್ಞಾನಿಗಳಿಗಿಂತ ಮೇಲೆ, ಕರ್ಮಿಗಳಿಗಿಂತ ಯೋಗಿಯು ಲೇಸು, ಆದ್ದರಿಂದ ಅರ್ಜುನನೇ, ನೀನು ಯೋಗಿಯಾಗು ಎಂದು ಭಗವಂತನೇ ಹೇಳಿರುವುದರಿಂದ ಯೋಗ ಭಗವದ್ಗೀತೆಯಲ್ಲಿ ಉಳಿದ ಎಲ್ಲಕ್ಕಿಂತ ಯೋಗಕ್ಕೆ ಪ್ರಾಧಾನ್ಯವಿದೆ. ಅದರ ಪ್ರತಿಯೊಂದು ಅಧ್ಯಾಯವನ್ನು ಯೋಗ ಪದಾಂತ ವಾದ ಹೆಸರಿನಿಂದ ಕರೆಯುತ್ತಾರೆ. ಶ್ರೀ ಕೃಷ್ಣನನ್ನು ಭಗವದ್ಗೀತೆಯು ಯೋಗೇಶ್ವರ ಎಂದೇ ಗುರುತಿಸಿದೆ.

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥ (18.78)

ಎಂಬುದೇ ಅಂತಿಮ ಶ್ಲೋಕವಾಗಿದೆ. ಜಗತ್ತಿಗೆ ಯೋಗವನ್ನು ಕಲಿಸಿ ಕೊಟ್ಟವನೇ ಕೃಷ್ಣ ಎಂದು ಭಗವದ್ಗೀತೆಯಲ್ಲಿ ಹೇಳಿದೆ ಎಂದು ಯೋಗವನ್ನು ಕಲಿಸುವ ಗ್ರಂಥವೆಂದು ಯೋಗಾಭಾಷಿಗಳು ಭಗವದ್ಗೀತೆಯನ್ನು ಓದುತ್ತಾರೆ. ಯೋಗವು ಮುಖ್ಯವಾಗಿ ಮನೋ ನಿಯಂತ್ರಣಕ್ಕೆ ಸಂಬಂಧಿಸಿದುದು. ಯೋಗಶ್ಚಿತ್ತ ವೃತ್ತಿ ನಿರೋಧ ಎಂದು ಪತಂಜಲಿ ಹೇಳಿದ್ದಾನೆ. ಭಗವದ್ಗೀತೆ ಮನಸ್ಸಿನ ಹತೋಟಿಯನ್ನು ಪ್ರಧಾನವಾಗಿ ಪ್ರತಿಪಾದಿಸುವುದರಿಂದ ಯೋಗಿಗಳು ಭಗವದ್ಗೀತೆ ಅಧ್ಯಯನ ಮಾಡುವುದು ಸಹಜವಾಗಿದೆ.

ವಿಮರ್ಶಕರ ದೃಷ್ಟಿ

ಶ್ರೀಕೃಷ್ಣನು ಹಿಂದಿನವರು ಹೇಳಿದ್ದನ್ನೆಲ್ಲ ಕಣ್ಣು ಮುಚ್ಚಿ ಒಪ್ಪಿಕೊಳ್ಳುವವನಾಗಿರಲಿಲ್ಲ. ಸ್ವರ್ಗಕ್ಕೆ ಹೋಗಿ ಸುಖವಾಗಿ ಕಾಲವನ್ನು ಕಳೆಯುವುದೇ ಜೀವನದ ಮುಖ್ಯ ಉದ್ದೇಶ ಎಂದು ಯಜ್ಞಗಳಲ್ಲಿ ತೊಡಗಿದ್ದವರನ್ನು ಭಗವದ್ಗೀತೆ ಖಂಡಿಸಿದೆ. ಇದು ಶ್ರೀ ಕೃಷ್ಣನ ವಿಮರ್ಶಕ ಬುದ್ಧಿಯನ್ನು ತಿಳಿಸುತ್ತದೆ. ಯಾವುದನ್ನೂ ವಿಮರ್ಶಿಸದೆ ಒಪ್ಪಿಕೊಳ್ಳಬಾರದು ಎಂಬುದು ಕೃಷ್ಣನ ಸೂಚನೆ.

ಅರ್ಜುನನಿಗೆ ಎಲ್ಲಾ ವಿಷಯಗಳನ್ನೂ ಉಪದೇಶಿಸಿದ ಮೇಲೆ ಶ್ರೀ ಕೃಷ್ಣನ ಮಾತು ಹೀಗಿದೆ–

ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ ಗುಹ್ಯತರಂ ಮಯಾ।
ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು॥ (18.63)

"ಹೀಗೆ ರಹಸ್ಯದಲ್ಲಿ ರಹಸ್ಯವಾದ ಜ್ಞಾನವನ್ನು ನಿನಗೆ ಹೇಳಿದ್ದೇನೆ. ಇದೆಲ್ಲವನ್ನೂ ವಿಮರ್ಶಿಸಿ ನಿನಗೆ ಸರಿ ತೋರಿದಂತೆ ಮಾಡು." ಈ ದೃಷ್ಟಿಯಿಂದ ಪ್ರತಿಯೊಬ್ಬನೂ ಗೀತೆಯನ್ನು ಓದಿದ ಮೇಲೆ ತನ್ನ ಬುದ್ಧಿಯಿಂದ ವಿಮರ್ಶಿಸಬೇಕು. ಸರಿಯೆಂದು ತೋರಿದುದನ್ನು ಅಂಗೀಕರಿಸಬೇಕು. ಎಷ್ಟೋ ವಿಷಯಗಳು ಅಂದಿನ ಸಮಾಜಕ್ಕೆ ಹೊಂದುವುವುವಾಗಿದ್ದರೂ ಇಂದಿನ ಸಮಾಜಕ್ಕೆ ಹೊಂದದೆ ಇರಬಹುದು. ಅವುಗಳನ್ನು ಬಿಡಬೇಕು. ಅರ್ಜುನನು ದಿಗ್ಭ್ರಾಂತನಾಗಿ ಶಸ್ತ್ರಗಳನ್ನು ಕೆಳಗೆ ಎಸೆದು ಕರ್ತವ್ಯವನ್ನು ಬಿಟ್ಟು ಓಡಿ ಹೋಗಲು ಉದ್ಯುಕ್ತನಾದಾಗ ಅವನಿಗೆ ಧೈರ್ಯವನ್ನು ತುಂಬಿ ಕರ್ತವ್ಯದಲ್ಲಿ ತೊಡಗುವಂತೆ ಮಾಡಿದ್ದು ಗೀತೆ. ಅಂತಹ ವಿಷಮ ಕ್ಷಣಗಳು ನಮ್ಮ ಜೀವನದಲ್ಲಿ ಬಂದಾಗ ಎದೆಗುಂದದೆ ಕರ್ತವ್ಯನಿರತರಾಗಲು ಸಾಮಾನ್ಯ ಮಾನವರೂ ಗೀತೋಪದೇಶವನ್ನು ಉಪಯೋಗಿಸಿಕೊಳ್ಳಬಹುದು.

ಖಂಡನ ದೃಷ್ಟಿ

ಕೆಲವರು ಪ್ರತಿಯೊಂದು ವಸ್ತುವಿನಲ್ಲೂ ದೋಷವನ್ನೇ ಹುಡುಕುವ ಪ್ರವೃತ್ತಿಯನ್ನಿಟ್ಟುಕೊಂಡಿರುತ್ತಾರೆ. ಲೋಕದಲ್ಲಿ ಯಾವ ವಸ್ತುವಾಗಲಿ, ವ್ಯಕ್ತಿಯಾಗಲಿ, ಗ್ರಂಥವಾಗಲಿ ಪೂರ್ಣವಾಗಿ ನಿರ್ದೋಷವೂ ನಿರ್ಗುಣವೂ ಆಗಿರುವುದಿಲ್ಲ. ಹುಡುಕಿದರೆ ಎಲ್ಲದರಲ್ಲೂ ದೋಷಗಳು ಸಿಕ್ಕೇ ಸಿಕ್ಕುತ್ತವೆ. ಹಾಗೆ ಕೇವಲ ಖಂಡನೆಯನ್ನೇ ಮಾಡಬೇಕೆಂದುಕೊಂಡವರಿಗೆ ಭಗವದ್ಗೀತೆಯ ಯಾವ ಒಳ್ಳೆಯ ಅಂಶಗಳೂ ಕಾಣಿಸುವುದಿಲ್ಲ.

ಎರಡು ಸೈನ್ಯಗಳು ಯುದ್ಧಕ್ಕೆ ಸಿದ್ಧರಾಗಿ ಆಯುಧಗಳನ್ನು ಹಿಡಿದು ಶಂಖಗಳನ್ನು ಊದಿ ನಿಂತಿದ್ದಾಗ ಮಧ್ಯದಲ್ಲಿದ್ದ ಕೃಷ್ಣ–ಅರ್ಜುನರು ಗಂಭೀರವಾದ ದಾರ್ಶನಿಕ ವಿಚಾರಗಳನ್ನು ದೀರ್ಘ ಸಂವಾದದಲ್ಲಿ ಮಾಡಲು ಸಾಧ್ಯವೇ? ಕೃಷ್ಣನು ವಿಶ್ವರೂಪವನ್ನು ತೋರಿಸಿದಾಗ, ಅರ್ಜುನನು ಅವನನ್ನು ಹೊಗಳುತ್ತಿದ್ದಾಗ ಅಲ್ಲಿದ್ದ ಭೀಷ್ಮ ದ್ರೋಣಾಜಗಳೂ ಸಹಸ್ರಾರು ಸೈನಿಕರೂ ಏನು ಮಾಡುತ್ತಿದ್ದರು? ಎಂದು ಅವರು ಕೇಳುತ್ತಾರೆ.

ಜನಸಂಹಾರಕ್ಕೆ ಕಾರಣವಾಗುವ ಯುದ್ಧವು ಬೇಡ. ರಕ್ತಪಾತವು ತಪ್ಪಲಿ, ಯಾವ ಅಪರಾಧವನ್ನೂ ಮಾಡದ ಸೈನಿಕರೂ ಆನೆ ಕುದುರೆಗಳೂ ಸಾಯುವುದು ಬೇಡ ಎಂದು ಅರ್ಜುನನು ಶಸ್ತ್ರತ್ಯಾಗವನ್ನು ಮಾಡಿದಾಗ ಅವನಿಗೆ ಯುದ್ಧವನ್ನೇ ಮಾಡು ಎಂದು ಹೇಳಿದುದು ಹೇಗೆ ಸರಿ? ಯೋಗ–ಮೋಕ್ಷ–ಜ್ಞಾನ ಎಂದು ಬೋಧಿಸುವುದು, ಯುದ್ಧಕ್ಕೆ ಪ್ರಚೋದಿಸಿ ಬಂಧುಗಳನ್ನು ಕೊಲ್ಲಿಸುವುದು ಪರಸ್ಪರ ವಿರುದ್ಧವಲ್ಲವೆ? ಎಂದೂ ಕೆಲವು ಪ್ರಶ್ನಿಸುತ್ತಾರೆ.

ಆತ್ಮವು ನಿತ್ಯ, ಶರೀರಗಳು ಅನಿತ್ಯ, ಸ್ವರ್ಗ–ನರಕಗಳು ಇವೆ ಎಂದು ಭಗವದ್ಗೀತೆಯು ಹೇಳಿದೆ. ಇದಕ್ಕೆ ಸಾಧಕ ಪ್ರಮಾಣ ಎಲ್ಲಿದೆ ಎಂಬ ಪ್ರಶ್ನೆ ನಾಸ್ತಿಕರದು. ಪುನರ್ಜನ್ಮವಿದೆಯೆಂದು ಶ್ರೀಕೃಷ್ಣನು ಒತ್ತಿ ಹೇಳಿದ್ದಾನೆ.

ಬಹೂನಿ ಮೇ ವ್ಯತಿತಾನಿ ಜನ್ಮಾನಿ ತವ ಚಾರ್ಜುನ।
ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ॥

ಎಂಬುದು ಕೃಷ್ಣನ ಮಾತು. ನನ್ನ ಮತ್ತು ನಿನ್ನ ಅನೇಕ ಜನ್ಮಗಳು ಕಳೆದು ಹೋದುವು. ಅವೆಲ್ಲವನ್ನೂ ನಾನು ತಿಳಿದಿದ್ದೇನೆ. ಅರ್ಜುನ, ನೀನು ಅವುಗಳ ಬಗೆಗೆ ತಿಳಿದಿಲ್ಲ ಎಂದು ಈ ಶ್ಲೋಕದ ಅಭಿಪ್ರಾಯ. ಪುನರ್ಜನ್ಮ ಉಂಟು ಎಂದು ಸಾಧಿಸಿ ತೋರಿಸುವುದು ಹೇಗೆ? ಇಂತಹ ನಿರಾಧಾರವಾದ ವಿಷಯಗಳನ್ನು ಹೇಳುವ ಭಗವದ್ಗೀತೆಯನ್ನು ನಾವೇಕೆ ಓದಬೇಕು? ಎಂದು ಖಂಡನದೃಷ್ಟಿಯ ಜನರು ಕೇಳುತ್ತಾರೆ.

ಪೂರ್ವಾಗ್ರಹವಿಲ್ಲದ ಓದು

ಯಾವುದೇ ಪುಸ್ತಕವನ್ನು ಓದುವಾಗ ಪೂರ್ವಾಗ್ರಹ (Prejudice) ಇರಬಾರದು. ನಿಷ್ಪಕ್ಷಪಾತ ದೃಷ್ಟಿಯಿಂದ ಅದನ್ನು ಓದಿ ಅದರಲ್ಲಿರುವ ಒಳ್ಳೆಯ ಅಂಶಗಳನ್ನು ಗ್ರಹಿಸಬೇಕು. ಸರಿಯಲ್ಲವೆಂದು ನಮಗೆ ತೋರುವ ಅಂಶಗಳನ್ನು ನಿರಾಕರಿಸಬೇಕಾಗಿಲ್ಲ. ನಾವು ಸರ್ವಜ್ಞರಲ್ಲ. ನಮ್ಮದು ಅಲ್ಪಜ್ಞಾನ. ಈ ಅರಿವನ್ನು ಇಟ್ಟುಕೊಂಡು ಭಗವದ್ಗೀತೆ, ಬೈಬಲ್, ಕುರಾನ್ ಮುಂತಾದುವನ್ನು ಓದುವುದು ಲೇಸು. ಆ ಗ್ರಂಥಗಳಿಂದ ವಿವೇಕಲಾಭ ಆಗುವುದರಲ್ಲಿ ಸಂಶಯವಿಲ್ಲ.

ಇನ್ಮುಂದೆ ಇರುಮುಡಿಕಟ್ಟಿನಲ್ಲಿ ಕರ್ಪೂರ, ಗಂಧದಕಡ್ಡಿ ಒಯ್ಯುವಂತಿಲ್ಲ

ಶಬರಿಮಲೆ ಭಕ್ತರಿಗೆ ತಿರುವಾಂಕೂರು ದೇವಸ್ವಂ ಮಂಡಳಿ ಸೂಚನೆ

ಪಥನಂತಿಟ್ಟ (ಕೇರಳ), ನ.6– ಶಬರಿಮಲೆಗೆ ಬರುವ ಭಕ್ತರು ತಮ್ಮ ಇರುಮುಡಿ ಕಟ್ಟಿನಲ್ಲಿ ಕಸವಾಗಿ ಬದಲಾಗುವ ವಸ್ತುಗಳನ್ನು ತರದಂತೆ ತಿರುವಾಂಕೂರು ದೇವಸ್ವಂ ಮಂಡಳಿ ವಿನಂತಿಸಿದೆ. ಇನ್ನು ಮುಂದೆ ಇರುಮುಡಿಕಟ್ಟಿನಲ್ಲಿ ಕರ್ಪೂರ, ಧೂಪದ್ರವ್ಯದ ಕಡ್ಡಿಗಳು ಮತ್ತು ರೋಸ್ ವಾಟರ್‌ಗಳನ್ನು ಇಡದಂತೆ ಸೂಚಿಸಲಾಗಿದೆ.

ದೇವಸ್ವಂ ಮಂಡಳಿಯಿಂದ ಸುತ್ತೋಲೆ: ತಿರುವಾಂಕೂರು ದೇವಸ್ವಂ ಮಂಡಳಿಯ ದೇವಾಲಯಗಳಲ್ಲಿ ಕರ್ಪೂರ, ಧೂಪ ದ್ರವ್ಯ ಮತ್ತು ಗುಲಾಬಿ ನೀರನ್ನು ಬಳಸುವಂತಿಲ್ಲ ಎಂದು ಸುತ್ತೋಲೆ ಹೊರಡಿಸಲಾಗುವುದು ಎಂದು ದೇವಸ್ವಂ ಮಂಡಳಿ ಅಧ್ಯಕ್ಷ ಪಿ.ಎಸ್.ಪ್ರಶಾಂತ್ ಮತ್ತು ಸದಸ್ಯ ಎ.ಅಜಿಕುಮಾರ್ ತಿಳಿಸಿದ್ದಾರೆ.

ಇದಲ್ಲದೆ, ಈ ನಿಟ್ಟಿನಲ್ಲಿ ಕೊಚ್ಚಿ ಮತ್ತು ಮಲಬಾರ್ ದೇವಸ್ವಂ ಮಂಡಳಿಗಳಿಗೆ ಸಹ ಪತ್ರ ನೀಡಲಾಗುವುದು. ರಾಜ್ಯದ ಖಾಸಗಿ ದೇವಾಲಯಗಳ ಆಡಳಿತ ಮಂಡಳಿಗಳಿಗೆ ಮತ್ತು ಇತರ ರಾಜ್ಯಗಳ ಗುರುಸ್ವಾಮಿಗಳಿಗೆ ಈ ಬಗ್ಗೆ ಮನವಿ ಮಾಡಲಾಗುವುದು ಎಂದು ತಿಳಿಸಿದರು.



ಕರ್ಪೂರ ಮತ್ತು ಧೂಪ ದ್ರವ್ಯದ ಕಡ್ಡಿಗಳು ಪೂಜಾ ವಸ್ತುಗಳಾಗಿದ್ದರೂ ಬೆಂಕಿ ಹೊತ್ತಿಕೊಳ್ಳುವ ಅಪಾಯದ ಕಾರಣದಿಂದ ಅವುಗಳನ್ನು ಸನ್ನಿಧಾನದಲ್ಲಿ ಬಳಸಲು ಅನುಮತಿ ಇಲ್ಲ. ಹೀಗಾಗಿ ಭಕ್ತರು ಇರುಮುಡಿಕಟ್ಟಿನಲ್ಲಿ ತರುವ ಹೆಚ್ಚಿನ ವಸ್ತುಗಳು ಸಾಮಾನ್ಯವಾಗಿ ವ್ಯರ್ಥವಾಗಿ ಬಿಸಾಡಲ್ಪಡುತ್ತವೆ. ನಂತರ ದೇವಸ್ಥಾನ ಮಂಡಳಿಯವರು ಇಂಥ ತ್ಯಾಜ್ಯವನ್ನು ಪಂಡಿತಥಾವಲಂನಲ್ಲಿರುವ ಭಸ್ಮಗಾರಕ್ಕೆ ತೆಗೆದುಕೊಂಡು ಹೋಗಿ ಸುಡಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ತಪ್ಪಿಸಲು ಹೊಸ ನಿಯಮ ಮಾಡಲಾಗಿದೆ ಎಂದು ಮಂಡಳಿ ಮಾಹಿತಿ ನೀಡಿದೆ.

ತಂತ್ರಿ ಕಂದರಾರು ರಾಜೀವರು ಅವರ ಅಭಿಪ್ರಾಯದ ಮೇರೆಗೆ ಈ ವಸ್ತುಗಳನ್ನು ಇರುಮುಡಿಕಟ್ಟಿನಿಂದ ತೆಗೆದುಹಾಕಲು ನಿರ್ಧರಿಸಲಾಗಿದೆ. ಇರುವಮುಡಿಕಟ್ಟಿನ ಮುಂಭಾಗದಲ್ಲಿ, ಶಬರಿಮಲೆಗೆ ಅರ್ಪಿಸಬೇಕಾದ ವಸ್ತುಗಳು ಮತ್ತು ಹಿಂಭಾಗದಲ್ಲಿ ಆಹಾರ ಪದಾರ್ಥಗಳಿರುತ್ತವೆ. ಹಿಂದೆ, ಭಕ್ತರು ಕಾಲ್ನಡಿಗೆಯಲ್ಲಿ ಬರುವಾಗ ಅವರು ಆಹಾರ ತಯಾರಿಸಲು ಅಕ್ಕಿ ಮತ್ತು ತೆಂಗಿನಕಾಯಿಗಳನ್ನು ಬೆನ್ನಿನ ಮೇಲೆ ಹೊತ್ತು ತರುತ್ತಿದ್ದರು. ಆದರೆ ಈಗ ಆಹಾರವು ಎಲ್ಲೆಡೆ ಲಭ್ಯವಿರುವುದರಿಂದ ಅದರ ಅಗತ್ಯವಿಲ್ಲ. ಸ್ವಲ್ಪ ಅಕ್ಕಿಯನ್ನು ಹಿಂಭಾಗದಲ್ಲಿ ಇರಿಸಿ ಇದನ್ನು ಶಬರಿಮಲೆಯಲ್ಲಿ ಅರ್ಪಿಸಬಹುದು. ಕಂದುಬಣ್ಣದ ಅಕ್ಕಿ, ತುಪ್ಪದ ತೆಂಗಿನಕಾಯಿ, ಬೆಲ್ಲ, ಕದಳಿ ಬಾಳೆಹಣ್ಣು, ಅಡಿಕೆ, ಅಡಿಕೆ ಮತ್ತು ಕಾನಿಪೊನ್ನು (ನಾಣ್ಯ) ಮಾತ್ರ ಮುಂಭಾಗದಲ್ಲಿ ಅಗತ್ಯವಿದೆ ಎಂದು ತಂತ್ರಿ ಅವರ ಪತ್ರದಲ್ಲಿ ತಿಳಿಸಲಾಗಿದೆ.

ಏತನ್ಮಧ್ಯೆ, ಮಂಡಲ ಅವಧಿಯಲ್ಲಿ ಶಬರಿಮಲೆ ದರ್ಶನಕ್ಕಾಗಿ ಸ್ಪಾಟ್ ಬುಕಿಂಗ್ ಬಗ್ಗೆ ದೇವಸ್ವಂ ಮಂಡಳಿ ಸ್ಪಷ್ಟನೆ ನೀಡಿದೆ. ವರ್ಚುವಲ್ ಕ್ಯೂ ಬುಕಿಂಗ್ ಇಲ್ಲದೆ ಆಗಮಿಸುವ ಯಾತ್ರಾರ್ಥಿಗಳಿಗೆ ಮೂರು ಸ್ಥಳಗಳಲ್ಲಿ ಸ್ಪಾಟ್ ಬುಕಿಂಗ್ ಸೌಲಭ್ಯವನ್ನು ನೀಡಲು ದೇವಸ್ವಂ ಮಂಡಳಿ ನಿರ್ಧರಿಸಿದೆ.

ಈ ಬುಕಿಂಗ್ ಮಾಡಲು ಆಧಾರ್ ಕಾರ್ಡ್ ಕಡ್ಡಾಯವಾಗಿರುತ್ತದೆ. ಸ್ಪಾಟ್ ಬುಕಿಂಗ್ ಮಾಡುವವರಿಗೆ ಭಾವಚಿತ್ರವಿರುವ ವಿಶೇಷ ಪಾಸ್ ನೀಡಲು ದೇವಸ್ವಂ ಮಂಡಳಿ ನಿರ್ಧರಿಸಿದೆ.

ಕ್ಯೂಆರ್ ಕೋಡ್ ಮೂಲಕ ಸ್ಪಾಟ್ ಬುಕಿಂಗ್ ಮಾಡಿದ ಯಾತ್ರಾರ್ಥಿಗಳ ಎಲ್ಲಾ ಮಾಹಿತಿಯನ್ನು ತಿಳಿಯುವ ರೀತಿಯಲ್ಲಿ ಪಾಸ್ ನೀಡಲಾಗಿದೆ. ಈ ಉದ್ದೇಶಕ್ಕಾಗಿ ವಿಶೇಷ ವ್ಯವಸ್ಥೆಯನ್ನು ಸಿದ್ಧಪಡಿಸಲಾಗುವುದು ಎಂದು ದೇವಸ್ವಂ ಮಂಡಳಿ ಮಾಹಿತಿ ನೀಡಿದೆ. ಸ್ಪಾಟ್ ಬುಕಿಂಗ್ ಮೂಲಕ ಪ್ರತಿದಿನ 10,000 ಜನ ದರ್ಶನ ಪಡೆಯಬಹುದು. ವರ್ಚುವಲ್ ಕ್ಯೂ ಬುಕಿಂಗ್ ಮೂಲಕ 70,000 ಜನ ದರ್ಶನ ಪಡೆಯಬಹುದು. ಹೀಗೆ ದಿನದಲ್ಲಿ ಒಟ್ಟು 80,000 ಜನ ದರ್ಶನ ಪಡೆಯಲಿದ್ದಾರೆ. ಪಂಪಾ, ಎರುಮೇಲಿ ಮತ್ತು ಸತ್ರಾಮ್ (ಪೀರುಮೇಡು) ನಲ್ಲಿ ಸ್ಪಾಟ್ ಬುಕಿಂಗ್ ಕೌಂಟರ್‌ಗಳನ್ನು ತೆರೆಯಲಾಗುವುದು. ಪಂಪಾದಲ್ಲಿನ ಭಾರಿ ದಟ್ಟಣೆಯನ್ನು ಪರಿಗಣಿಸಿ, ಅಲ್ಲಿ ಕೌಂಟರ್‌ಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಗುರುವಾರ 7 ನವೆಂಬರ್ 2024

ಎಲೆಕ್ಟ್ರಿಕ್ ವಾಹನಕ್ಕೆ ಆಕಸ್ಮಿಕ ಬೆಂಕಿ



ಮೈಸೂರಿನ ಕೆ.ಆರ್.ವೃತ್ತದಲ್ಲಿ ಎಲೆಕ್ಟ್ರಿಕ್ ದ್ವಿಚಕ್ರ ವಾಹನ (ಇವಿ)ವೊಂದರಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿತು. ಕೂಡಲೇ ಸವಾರ ಸ್ಕೂಟರ್ ಅನ್ನು ರಸ್ತೆ ಬದಿಗೆ ನಿಲ್ಲಿಸಿ, ಡಿಕ್ಕಿ ತೆಗೆದು ಹೊಗೆ ಬರುತ್ತಿದ್ದ ಬ್ಯಾಟರಿಯೊಂದನ್ನು ಸ್ಕೂಟರ್ ನಿಂದ ಬೇರ್ಪಡಿಸಿ, ಸಂಭವಿಸಬಹುದಾದ ಹಾನಿಯನ್ನು ತಡೆಗಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಹೊಗೆ ಬರುತ್ತಿದ್ದ ಬ್ಯಾಟರಿಗೆ ದ್ರಾವಣ ಸಿಂಪಡಿಸಿ, ಬ್ಯಾಟರಿ ಸಿಡಿಯದಂತೆ ಕ್ರಮ ಕೈಗೊಂಡರು.

ಚನ್ನಪಟ್ಟಣ ಉಪಚುನಾವಣಾ ಕದನದಲ್ಲಿ ಕುಮಾರಸ್ವಾಮಿ ಆಡಿಯೋ ಬಿಡುಗಡೆ



ರಾಮನಗರ, ನ. 6– ಚನ್ನಪಟ್ಟಣ ಉಪಚುನಾವಣೆ ಕಣದಲ್ಲಿ ಎನ್‌ಡಿಎ ಮತ್ತು ಕಾಂಗ್ರೆಸ್ ನಾಯಕರ ನಡುವಿನ ಆರೋಪ–ಪ್ರತ್ಯಾರೋಪಗಳು ಜೋರಾಗಿವೆ. ಕ್ಷೇತ್ರವನ್ನು ಉಳಿಸಿಕೊಳ್ಳಲು ಎನ್‌ಡಿಎ ಕಸರತ್ತು ನಡೆಸಿದೆ. ಇನ್ನು ಕಾಂಗ್ರೆಸ್ ಈ ಬಾರಿ ಗೆದ್ದು ಕೇಂದ್ರ ಸಚಿವ ಕುಮಾರಸ್ವಾಮಿಗೆ ಶಾಕ್ ಕೊಡಲು ತೀರ್ಮಾನಿಸಿದೆ. ಇದರ ಮಧ್ಯ ಮಾಜಿ ಸಂಸದ ಡಿಕೆ ಸುರೇಶ್ ಅವರು ಕುಮಾರಸ್ವಾಮಿಯವರ ಆಡಿಯೋ ಸಿಡಿಯೊಂದನ್ನು ಬಿಡುಗಡೆ ಮಾಡಿದ್ದಾರೆ. 'ಜನರ ಬಳಿ ಹೆಚ್ಚು ಹೋಗಬಾರದು, ಮತದಾನಕ್ಕೆ ಇನ್ನೆಂಟು ದಿನ ಇರುವಾಗ ಹೋಗಿ ಪ್ರಚಾರ ಮಾಡಬೇಕು' ಎಂದು ಕುಮಾರಸ್ವಾಮಿ ಈ ಹಿಂದೆ ಹೇಳಿದ್ದ ಆಡಿಯೋ ಸಿಡಿಯೊಂದನ್ನು ಬಹಿರಂಗಪಡಿಸಿ ಟೀಕಿಸಿದ್ದಾರೆ.

ಚನ್ನಪಟ್ಟಣ ಚುನಾವಣಾ ಪ್ರಚಾರ ವೇಳೆ ಆಡಿಯೋ ಬಿಡುಗಡೆ ಮಾಡಿದ ಡಿ.ಕೆ.ಸುರೇಶ್, ಅಭಿವೃದ್ಧಿಗೆ ಜನ ಮತ ಹಾಕಲ್ಲ, ಚುನಾವಣೆಗೆ ಎಂಟು ದಿನದ ಹಿಂದೆ ಜನರ ಬಳಿ ಹೋಗಬೇಕು. ಚುನಾವಣಾ ತಂತ್ರ ಮಾಡಬೇಕು. ಜನರ ಬಳಿ ಹೆಚ್ಚು ಹೋಗಬಾರದು, ಎಂಟು ದಿನದಲ್ಲಿ ಪ್ರಚಾರ ಮಾಡಬೇಕು ಎಂದು ಆಗಿನ ಸಿಎಂ ಆಗಿದ್ದ ಕುಮಾರಸ್ವಾಮಿ ಹೇಳಿದ್ದರು ಎಂದು ವ್ಯಂಗ್ಯವಾಡಿದ್ದಾರೆ.

ಕುಮಾರಸ್ವಾಮಿ ಕೆಂಡಾಮಂಡಲ: ಇನ್ನು ಆಡಿಯೋ ರಿಲೀಸ್ ಮಾಡಿರುವುದಕ್ಕೆ ಸುದ್ದಿವಾಹಿನಿಗೆ ಪ್ರತಿಕ್ರಿಯಿಸಿರುವ ಕುಮಾರಸ್ವಾಮಿ, ಸಿಡಿ, ಆಡಿಯೋ–ವಿಡಿಯೋ ಬಿಡುವಂತ ಎಕ್ಸ್‌ಪರ್ಟ್‌ಗಳು. ಅವರನ್ನು ಹಿಡಿಯಲು ಆಗುತ್ತಾ? ಆಡಿಯೋ ನಾನು ವಿಧಾನಸಭೆಯಲ್ಲಿ ಮಾತನಾಡಿದ್ದು, ವಾರದಿಂದ ಅದನ್ನು ಕಟಿಂಗ್ ಮಾಡಿ ಹಂಚುತ್ತಿದ್ದಾರೆ. ಅದು ನನ್ನ ಹೇಳಿಕೆಯಲ್ಲ. ವಾಸ್ತವ ಪರಿಸ್ಥಿತಿ ಬಗ್ಗೆ ಮಾತನಾಡಿದ್ದೆ. ಪಕ್ಕದ ಮದ್ದೂರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿಚಾರವಾಗಿ ಹೇಳಿದ್ದೆ. ಇಸ್ಪೀಟ್, ಕ್ರಿಕೆಟ್ ಬೆಟ್ಟಿಂಗ್ ದಂಧೆ ನಡೆಸುವವರು 5 ವರ್ಷ ಕೆಲಸ ಮಾಡಲಿ. ನಾನು ಎರಡು ದಿನದಲ್ಲಿ ಬದಲಾವಣೆ ಮಾಡುತ್ತೇನೆ ಅಂದ ವಿಚಾರದ ಬಗ್ಗೆ ಹೇಳಿದ್ದೆ. ಅದನ್ನು ಮದ್ದೂರು ವಿಷಯಕ್ಕೆ ಹೇಳಿದ್ದು ಎಂದು ಸ್ಪಷ್ಟಪಡಿಸಿದರು.

ನನ್ನ ಚುನಾವಣೆಯಲ್ಲಿ ಕಾರ್ಯಕರ್ತರೇ ಮತ ಕೇಳುತ್ತಾರೆ. ನಾನು ಆ ರೀತಿ ಮಾತನಾಡುವ ಅವಶ್ಯಕತೆ ಇಲ್ಲ. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಉತ್ತಮ ಕೆಲಸ ಮಾಡಿದವರು ಇಂತವರಿಂದ ನಗಣ್ಯ ಆಗುತ್ತಾರೆ ಎನ್ನುವ ಹಿನ್ನೆಲೆಯಲ್ಲಿ ಹೇಳಿದ್ದೆ. ಕ್ಯಾಸೆಟ್ ಪುಲ್ ಪ್ಲೇ ಮಾಡಲು ಹೇಳಿ ಅವರ ಯೋಗ್ಯತೆ ಗೊತ್ತಾಗುತ್ತದೆ ಎಂದು ತಿರುಗೇಟು ನೀಡಿದರು. ಇದಕ್ಕೆಲ್ಲಾ ನಮ್ಮ ಜನ ಬೆಲೆ ಕೊಡುತ್ತಾರಾ? ನಾನು ಅಭಿವೃದ್ಧಿ ವಿಚಾರ ಇಟ್ಟುಕೊಂಡು ಹೊರಟಿದ್ದೇನೆ. ಅವರು ಏನೇ ಮಾತನಾಡಿದರೂ ಚನ್ನಪಟ್ಟಣದ ಜನ 13ಕ್ಕೆ ಉತ್ತರ ಕೊಡುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಟ ಸಲ್ಮಾನ್ ಖಾನ್‌ಗೆ ಕೊಲೆ ಬೆದರಿಕೆ: ಹಾವೇರಿಯಲ್ಲಿ ಆರೋಪಿ ಬಂಧನ



ಹಾವೇರಿ: ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ಕೊಲೆ ಬೆದರಿಕೆಯೊಡ್ಡಿದ್ದ ಆರೋಪದಡಿ ಬಿಖಾ ರಾಮ್ ಅಲಿಯಾಸ್ ವಿಕ್ರಮ್ (32) ಎಂಬುವವರನ್ನು ಹಾವೇರಿ ಜಿಲ್ಲಾ ಪೊಲೀಸರು ಬುಧವಾರ ಬಂಧಿಸಿದ್ದು, ಮುಂಬೈನ ಭಯೋತ್ಪಾದನಾ ನಿಗ್ರಹ ಪಡೆಯ ವಶಕ್ಕೆ ಒಪ್ಪಿಸಿದ್ದಾರೆ.

ರಾಜಸ್ಥಾನದ ಜಲೂರ್ ನಿವಾಸಿಯಾದ ಬಿಖಾ ರಾಯ್, ಕೆಲಸ ಹುಡುಕಿಕೊಂಡು ಇತ್ತೀಚೆಗೆ ಹಾವೇರಿಗೆ ಬಂದಿದ್ದ. ಇಲ್ಲಿಯ ಗೌಡರ ಓಣಿಯ ಕೊಠಡಿಯೊಂದರಲ್ಲಿ ನೆಲೆಸಿದ್ದ. ಈತನ ಇರುವಿಕೆ ಬಗ್ಗೆ ಮುಂಬೈ ಭಯೋತ್ಪಾದನಾ ನಿಗ್ರಹ ಪಡೆ ಮಾಹಿತಿ ನೀಡಿತ್ತು ಎಂದು ಜಿಲ್ಲಾ ಎಸ್ಪಿ ಅಂಶುಕುಮಾರ್ ತಿಳಿಸಿದರು.

ನಿರ್ಮಾಣ ಹಂತದ ಕಟ್ಟಡಗಳಲ್ಲಿ ಕೆಲಸ ಮಾಡಿಕೊಂಡಿದ್ದ ಬಿಖಾ ರಾಯ್, ಸಲ್ಮಾನ್ ಖಾನ್ ಕೊಲೆ ಮಾಡುವುದಾಗಿ ಸಾಮಾಜಿಕ ಮಾಧ್ಯಮಗಳ ಮೂಲಕ ಬೆದರಿಕೆಯೊಡ್ಡಿದ್ದ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ಮುಂಬೈ ಪೊಲೀಸರು, ಈತನಿಗಾಗಿ ಹುಡುಕಾಟ ನಡೆಸುತ್ತಿದ್ದರು ಎಂದು ಹೇಳಿದರು.

ಹಲವು ತಿಂಗಳ ಹಿಂದೆಯೇ ಆರೋಪಿ, ರಾಜ್ಯಕ್ಕೆ ಬಂದಿದ್ದಾನೆ. ಮೊದಲು ಬೇರೆ ನಗರದಲ್ಲಿ ಈತ ನೆಲೆಸಿದ್ದ. ಒಂದೂವರೆ ತಿಂಗಳ ಹಿಂದೆಯಷ್ಟೇ ಈತ ಹಾವೇರಿಗೆ ಬಂದಿದ್ದನೆಂದು ಗೊತ್ತಾಗಿದೆ. ಈತನನ್ನು ಬಂಧಿಸಿ ಮುಂಬೈ ಭಯೋತ್ಪಾದನಾ ನಿಗ್ರಹ ಪಡೆಗೆ ಒಪ್ಪಿಸಲಾಗಿದೆ. ಪ್ರಕರಣದ ಬಗ್ಗೆ ಅವರೇ ತನಿಖೆ ಮುಂದುವರಿಸಲಿದ್ದಾರೆ ಎಂದು ತಿಳಿಸಿದರು.

ಐತಿಹಾಸಿಕ ಬೀದರ್ ಕೋಟೆಯ 17 ಸ್ಮಾರಕಗಳು ತನ್ನ ಆಸ್ತಿ ಎಂದ ವಕ್ಫ್



ಬೆಂಗಳೂರು, ನ.6– ರಾಜ್ಯದಲ್ಲಿ ವಕ್ಫ್ ಆಸ್ತಿ ವಿವಾದ ಮುಗಿಯುವ ಸೂಚನೆಗಳು ಕಾಣುತ್ತಿಲ್ಲ. ರೈತರ ಜಮೀನು, ಮಠದ ಜಮೀನುಗಳನ್ನು ತನ್ನದೆಂದು ಗುರುತಿಸಿದ್ದ ವಕ್ಫ್ ಮಂಡಳಿ ಇದೀಗ ಐತಿಹಾಸಿಕ ಬೀದರ್ ಕೋಟೆ ಮೇಲೆ ಕಣ್ಣಾಕಿದ್ದು, ಕೋಟೆಯೊಳಗಿನ 17 ಸ್ಮಾರಕಗಳು ತನ್ನ ಆಸ್ತಿ ಎಂದು ಗುರುತಿಸಿರುವುದಾಗಿ ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಈ ಸ್ಮಾರಕಗಳು ಬೀದರ್ ಜಿಲ್ಲಾ ಕೇಂದ್ರ ಪಟ್ಟಣದಲ್ಲಿರುವ ಕೋಟೆಯ ಪ್ರಮುಖ ಹೆಗ್ಗುರುತುಗಳಲ್ಲಿ ಸೇರಿವೆ. ಕೋಟೆಯನ್ನು ನಿರ್ವಹಿಸುತ್ತಿರುವ ಭಾರತೀಯ ಪುರಾತತ್ವ ಇಲಾಖೆಗೆ ಈ ಬಗ್ಗೆ ತಿಳಿದಿಲ್ಲ. ಬೀದರ್ ಕೋಟೆ ಆವರಣದಲ್ಲಿರುವ 60 ಆಸ್ತಿಗಳ ಪೈಕಿ 17 ಆಸ್ತಿಗಳು ವಕ್ಫ್ ಮಂಡಳಿಗೆ ಸೇರಿದ್ದು ಎಂದು ಮೂಲಗಳು ತಿಳಿಸಿವೆ.

ವಕ್ಫ್ ಗುರುತಿಸಿರುವ ಪಟ್ಟಿಯಲ್ಲಿ ಹೆಸರಾಂತ 16 ಸ್ತಂಭಗಳು ಮಸೀದಿ, ವಿವಿಧ ಬಹಮನಿ ಆಡಳಿತಗಾರರ 14 ಸಮಾಧಿಗಳು ಮತ್ತು ಅಹ್ಮದ್ ಶಾ–IV, ಅಹ್ಮದ್ ಶಾ ಅವರ ಪತ್ನಿ, ಅಲ್ಲಾವುದ್ದೀನ್, ಹಸನ್ ಖಾನ್, ಮೊಹಮ್ಮದ್ ಶಾ–III, ನಿಜಾಮ್, ಸುಲ್ತಾನ್ ಅಹ್ಮದ್ ಶಾ ವಾಲಿ ಮತ್ತು ಸುಲ್ತಾನ್ ಮಹಮೂದ್ ಷಾ ಸೇರಿದಂತೆ ಅವರ ಕುಟುಂಬದ ಸದಸ್ಯರ ಸಮಾಧಿಗಳನ್ನು ಸೇರಿವೆ.

ಹಲವು ದಶಕಗಳಿಂದ ಐತಿಹಾಸಿಕ ಸ್ಮಾರಕಗಳ ನಿರ್ವಹಣೆ ಹಾಗೂ ರಕ್ಷಕರಾಗಿರುವ ಎಎಸ್‌ಐಗೆ ಮಂಡಳಿಯು ನೋಟಿಸ್ ಜಾರಿ ಮಾಡುವುದು ಹೇಗೆ, ವಕ್ಫ್ ಬೋರ್ಡ್ ಹೆಸರಿನಲ್ಲಿ ಸಾಕಷ್ಟು ಅವ್ಯವಹಾರಗಳು ನಡೆಯುತ್ತಿದ್ದು, ಇದರಿಂದ ಮುಸ್ಲಿಂ ಸಮುದಾಯಕ್ಕೆ ಕೆಟ್ಟ ಹೆಸರು ಬರುತ್ತಿದೆ ಎಂದು ಅಧಿಕಾರಿಯೊಬ್ಬರು ಆರೋಪಿಸಿದ್ದಾರೆ. ವಿವಾದವು ಪ್ರಾರಂಭವಾದಾಗಿನಿಂದ ನಾವು ಎಲ್ಲಾ ನೋಟಿಸ್‌ಗಳನ್ನು ಹಿಂಪಡೆಯಲು ನಿರ್ಧರಿಸಿದ್ದೇವೆ. ಏಕೆಂದರೆ ಬಹಳ ಸಮಯದಿಂದ ಭೂಮಿಯಲ್ಲಿ ಕುಳಿತಿರುವ ಜನರನ್ನು ಹೊರಹಾಕುವುದು ಅನ್ಯಾಯ ಮತ್ತು ಕಾನೂನುಬಾಹಿರವಾಗಿದೆ ಎಂದು ಅಧಿಕಾರಿ ಸೇರಿಸಿದರು.

ವಕ್ಫ್ (ತಿದ್ದುಪಡಿ) ಮಸೂದೆ 2024ರ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರು ನ.7ರಂದು ಕರ್ನಾಟಕದ ಹುಬ್ಬಳ್ಳಿ ಮತ್ತು ವಿಜಯಪುರಕ್ಕೆ ಭೇಟಿ ನೀಡಿ ವಕ್ಫ್ ಮಂಡಳಿಯ ಕ್ರಮದಿಂದ ಹಾನಿಗೊಳಗಾದ ರೈತರೊಂದಿಗೆ ಸಂವಾದ ನಡೆಸಲಿದ್ದಾರೆ. ವಿಜಯಪುರದಲ್ಲಿ ವಕ್ಫ್ ಮಂಡಳಿಯೂ ರೈತರ ಜಮೀನನ್ನು ಕಬಳಿಸುತ್ತಿದೆ. ಈ ಸಂಬಂಧ ರೈತರ ಜೊತೆ ಚರ್ಚಿಸಲು ರಾಜ್ಯಕ್ಕೆ ಬರುವಂತೆ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಮನವಿ ಮಾಡಿದ ಕೆಲವು ದಿನಗಳ ನಂತರ ಪ್ರತಿಕ್ರಿಯೆ ಬಂದಿದೆ.

ಕೀಳರಿಮೆ ಬಿಟ್ಟು ಎಲ್ಲರೂ ಮಾತೃಭಾಷೆ ಬಳಸಬೇಕು

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತೆ ತೇಜಸ್ವಿನಿ ಸಲಹೆ

ಮೈಸೂರು, ನ.6(ಎಂಟಿವೈ)–ಹಿಂಜರಿಕೆ ಹಾಗೂ ಕೀಳರಿಮೆಯನ್ನು ಬಿಟ್ಟು ಎಲ್ಲರೂ ಮಾತೃಭಾಷೆಯಲ್ಲಿ ಮಾತನಾಡುವ ಮೂಲಕ ಕನ್ನಡ ಭಾಷಾ ಸಂಸ್ಕೃತಿಯನ್ನು ಎತ್ತಿಹಿಡಿಯಬೇಕು ಎಂದು ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತೆ ತೇಜಸ್ವಿನಿ ಸಲಹೆ ನೀಡಿದ್ದಾರೆ.

ಮೈಸೂರು ಲೇಡಿಸ್ ಅಸೋಸಿಯೇಷನ್ ವತಿಯಿಂದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡದಲ್ಲಿ ಮಾತನಾಡಿದರೆ ಇತರರು ಲೋಕಜ್ಞಾನವಿಲ್ಲ ಎಂದು ಛೇಡಿಸುತ್ತಾರೆ ಎಂದು ಅನೇಕರು ಕನ್ನಡದಲ್ಲಿ ಮಾತನಾಡಲು ಹಿಂಜರಿಯುವುದನ್ನು ನಾವು ಕಾಣುತ್ತೇವೆ. ಆದರೆ, ಕನ್ನಡ ಭಾಷೆ ಸಂಪದ್ಭರಿತವಾದ ಭಾಷೆಯಾಗಿದ್ದು, ಅಪಾರವಾದ ಜ್ಞಾನ ಭಂಡಾರವನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಮಾತೃಭಾಷೆಯಲ್ಲಿ ಮಾತನಾಡಿದರೆ ನಾವು ಎಲ್ಲರಿಗೂ ಹತ್ತಿರವಾಗುತ್ತೇವೆ. ಅಲ್ಲದೇ ಮುಕ್ತವಾಗಿ ಮಾತನಾಡಬಹುದು. ಹೃದಯಾಂತರಾಳದ ಭಾವನೆ, ಕಷ್ಟ–ಸುಖ ಹಂಚಿಕೊಳ್ಳಲು ಮಾತೃಭಾಷೆಯಷ್ಟು ಪರಿಣಾಮಕಾರಿ ಸಂವಹನ ಮಾಧ್ಯಮ ಬೇರೊಂದು ಇಲ್ಲ. ಆದ್ದರಿಂದ ನಮ್ಮ ಭಾಷೆಯನ್ನು ಯಾವುದೇ ಹಿಂಜರಿಕೆ ಇಲ್ಲದೇ ಬಳಕೆ ಮಾಡಬೇಕು ಎಂದರು.

ವಿಶ್ವದ ಮುಂದುವರೆದ ದೇಶಗಳಲ್ಲಿ ಆಯಾ ನಾಡಿನ ಮಾತೃಭಾಷೆಯ ಬಗ್ಗೆ ಅವರಿಗೆ ಅಪಾರ ಗೌರವವಿದೆ. ತಮ್ಮ ಭಾಷೆಯನ್ನು ಬೆಳಸಬೇಕು ಎನ್ನುವ ಅಭಿಮಾನವಿದೆ. ಆದರೆ ನಮ್ಮಲ್ಲಿ ಮಾತೃಭಾಷೆ ಕುರಿತು ಅಭಿಮಾನವಿಲ್ಲ. ಭಾಷಾ ಬೆಳವಣಿಗೆಗೆ ಸಹಕಾರ ನೀಡುವುದಿಲ್ಲ. ಈ ಹಿನ್ನೆಲೆಯಲ್ಲಿ ಸಾಮಾನ್ಯ ಜನರಲ್ಲೂ ಕನ್ನಡದ ಬಗ್ಗೆ ಪ್ರೀತಿ ಹುಟ್ಟಬೇಕು. ತನ್ಮೂಲಕ ಭಾಷಾ ಬೆಳವಣಿಗೆಗೆ ಕೈ ಜೋಡಿಸಬೇಕು. ಆಗ ಮಾತ್ರ ನಮ್ಮ ಕನ್ನಡ ಭಾಷೆಯು ಇನ್ನೂ ಹೆಚ್ಚು ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತದೆ. ಕನ್ನಡ ಭಾಷೆಯು ವಿಶ್ವದಲ್ಲೇ ಅತ್ಯಂತ ಪ್ರಾಚೀನ ಭಾಷೆ. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ನಮ್ಮ ಭಾಷೆಯು ಶ್ರೀಮಂತವಾದ ಭಾಷೆಯಾಗಿದೆ. ಇಂತಹ ಮಹತ್ವವನ್ನು, ಘನತೆಯನ್ನು ಹೊಂದಿರುವ ನಮ್ಮ ಭಾಷೆಯ ಬಗ್ಗೆ ನಮಗೆ ಇನ್ನೂ ಹೆಚ್ಚಿನ ಅರಿವು ಉಂಟಾಗಬೇಕಾಗಿದೆ. ಪ್ರತಿಯೊಬ್ಬರಲ್ಲೂ ನಮ್ಮ ಭಾಷೆಯ ಶ್ರೀಮಂತಿಕೆಯನ್ನೂ ತಿಳಿಸುವ ಕೆಲಸವನ್ನು ಸಂಘ–ಸಂಸ್ಥೆಗಳು, ಕನ್ನಡ ಪರ ಸಂಘಟನೆಗಳು ನಿತ್ಯೋತ್ಸವದಂತೆ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತರಾದ ಕಸಾಪ ಜಿಲ್ಲಾ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತೆ ತೇಜಸ್ವಿನಿ, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಲೇಡೀಸ್ ಅಸೋಸಿಯೇಷನ್ ಅಧ್ಯಕ್ಷೆ ಮಲ್ಲಿಗೆ ವೀರೇಶ್ ವಹಿಸಿದ್ದರು. ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಅಸೋಸಿಯೇಷನ್ ಕಾರ್ಯದರ್ಶಿ ವಿದ್ಯಾ ಆನಂದ್, ಲತಾ, ತೇಜಸ್ವಿನಿ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಲೇಡಿಸ್ ಅಸೋಸಿಯೇಷನ್ ವತಿಯಿಂದ ಬುಧವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತೆ ತೇಜಸ್ವಿನಿ ಅವರನ್ನು ಸನ್ಮಾನಿಸಲಾಯಿತು.

ಹಿರಿಯ ವಕೀಲ ಹರೀಶ್ ಹೆಗಡೆ ಅವರಿಗೆ ಹುಟ್ಟುಹಬ್ಬದ ಶುಭಾಶಯ



ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಹಿರಿಯ ವಕೀಲ ಎಂ.ಡಿ.ಹರೀಶ್ ಹೆಗಡೆ ಅವರಿಗೆ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎನ್.ಲೋಕೇಶ್, 'ಲಾ ಗೈಡ್' ಕನ್ನಡ ಕಾನೂನು ಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್, ವಕೀಲರಾದ ಸರಗೂರು ಸ್ವಾಮಿ, ಕಾರ್ತಿಕ್, ಲೋಕೇಶ್, ಗಂಗಣ್ಣ ಮತ್ತಿತರರು ಶುಭಾಶಯ ಕೋರಿದರು.

ಬೆಂಗಳೂರಲ್ಲಿ ತಲೆ ಎತ್ತಲಿವೆ 89 ಹೊಸ ಟೆಕ್ ಪಾರ್ಕ್‌ಗಳು



ಬೆಂಗಳೂರು: ದೇಶದ ಐಟಿ ಹಬ್ ಎಂದೇ ಖ್ಯಾತಿ ಪಡೆದಿರುವ ರಾಜಧಾನಿ ಬೆಂಗಳೂರಿನಲ್ಲಿ 89 ಹೊಸ ಟೆಕ್ ಪಾರ್ಕ್‌ಗಳ ನಿರ್ಮಾಣ ಮತ್ತು ವಿಸ್ತರಣೆ ಬಗ್ಗೆ ರಾಜ್ಯ ಸರ್ಕಾರ ಮಂಗಳವಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ರಾಜ್ಯ ಸರ್ಕಾರವು ನವೆಂಬರ್ ಅಂತ್ಯದ ವೇಳೆಗೆ ಟೆಕ್ ಶೃಂಗಸಭೆಗೆ ಸಜ್ಜಾಗುತ್ತಿರುವ ಸಮಯದಲ್ಲಿ ಈ ಘೋಷಣೆ ಬಂದಿದೆ ಮತ್ತು ನಗರದ ಮೂಲಸೌಕರ್ಯ ಕೊರತೆ ಬಗ್ಗೆ ಹಲವು ಪ್ರಶ್ನೆಗಳು ಹುಟ್ಟಿಕೊಂಡಿವೆ.

ಈ ಘೋಷಣೆಯೊಂದಿಗೆ ರಾಜ್ಯ ರಾಜಧಾನಿ ಬೆಂಗಳೂರನ್ನು ಟೆಕ್ ಕ್ಯಾಪಿಟಲ್ ಆಗಿ ಪರಿವರ್ತಿಸುವ ಉದ್ದೇಶ ಹೊಂದಲಾಗಿದೆ. ಆದರೆ ಮೂಲ ಸೌಕರ್ಯಗಳನ್ನು ಕಲ್ಪಿಸುವುದು ಒಂದು ದೊಡ್ಡ ಸವಾಲಾಗಿದ್ದು, ಅದನ್ನು ತ್ವರಿತ ಗತಿಯಲ್ಲಿ ಮಾಡಬೇಕಾಗಿದೆ ಎಂದು ಐಟಿ–ಬಿಟಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಧ್ಯಮಕ್ಕೆ ತಿಳಿಸಿದ್ದಾರೆ.

ಪಟ್ಟಿ ಮಾಡಲಾದ ಕೆಲವು ಕೈಗಾರಿಕಾ ಮತ್ತು ಟೆಕ್ ಪಾರ್ಕ್‌ಗಳು ಈಗಾಗಲೇ ಅಸ್ತಿತ್ವದಲ್ಲಿವೆ. ಇದು ಸ್ವಾಗತಾರ್ಹ ಕ್ರಮವಾಗಿದೆ ಎಂದು ತಜ್ಞರು ಹೇಳಿದ್ದಾರೆ. ಟೆಕ್ ಶೃಂಗಸಭೆಯ ಸಮಯದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಗಮನವು ಈಗ ಮೂಲಸೌಕರ್ಯ, ಕೌಶಲ ಅಭಿವೃದ್ಧಿ ಮತ್ತು ಹೂಡಿಕೆಗಳನ್ನು ಸೆಳೆಯುವುದರ ಮೇಲೆ ಕೇಂದ್ರೀಕೃತವಾಗಿದೆ. ಹೊಸ ಟೆಕ್ ಪಾರ್ಕ್‌ಗಳು ಹೆಚ್ಚಾಗಿ ಉತ್ತರ ಬೆಂಗಳೂರು, ಬೆಳ್ಳಂದೂರು, ವೈಟ್‌ಫೀಲ್ಡ್, ಹೆಬ್ಬಾಳ ಮತ್ತು ಹೊರವರ್ತುಲ ರಸ್ತೆಯಲ್ಲಿ ನಿರ್ಮಿಸುವ ಉದ್ದೇಶ ಹೊಂದಲಾಗಿದೆ. ಅಲ್ಲಿ ಈಗಾಗಲೇ ಬೆಳವಣಿಗೆ ನಡೆಯುತ್ತಿದೆ. ಯಶವಂತಪುರ, ಬಾಣಸವಾಡಿ, ಸಿವಿ ರಾಮನ್ ನಗರ, ನಾಗವಾರ, ಬನ್ನೇರುಘಟ್ಟ, ಕೋರಮಂಗಲ, ಇಂದಿರಾನಗರ, ತುಮಕೂರು ರಸ್ತೆ ಮತ್ತು ಸೆಂಟ್ರಲ್ ಬ್ಯುಸಿನೆಸ್ ಡಿಸ್ಟ್ರಿಕ್ಟ್ (ಸಿಬಿಡಿ) ಸೇರಿದಂತೆ ಇತರ ಪ್ರದೇಶಗಳಲ್ಲೂ ಬೆಳವಣಿಗೆಗೆ ಅವಕಾಶವಿದೆ. ಇಂತಹ ಹೆಚ್ಚಿನ ಬೆಳವಣಿಗೆಗಳು ಜೀವನ, ಕೆಲಸ ಮತ್ತು ಆಟದ ಸ್ಥಳಗಳನ್ನು ರಚಿಸಲು ಸಹಾಯ ಮಾಡುತ್ತದೆ. ಈ ಟೆಕ್ ಪಾರ್ಕ್‌ಗಳು ಪರಿಸರ ವ್ಯವಸ್ಥೆ ಮತ್ತು ನಗರವನ್ನು ವಿಶಾಲವಾಗಿ ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತವೆ ಎಂದು ಐಟಿ–ಬಿಟಿ ಇಲಾಖೆ ಕಾರ್ಯದರ್ಶಿ ಎಕ್ ರೂಪ್ ಕೌರ್ ಅವರು ಹೇಳಿದ್ದಾರೆ.

ಮುಡಾ ಪ್ರಕರಣ: ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ, ಕಾನೂನಿಗೆ ಗೌರವ ಕೊಟ್ಟು ಲೋಕಾಯುಕ್ತ ವಿಚಾರಣೆಗೆ ಹಾಜರು




ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ. ಕಾನೂನಿಗೆ ಗೌರವ ಕೊಟ್ಟು ಲೋಕಾಯುಕ್ತ ಪೊಲೀಸರ ಮುಂದೆ ವಿಚಾರಣೆಗೆ ಹಾಜರಾಗಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಇಂದಿಲ್ಲಿ ಪ್ರತಿಪಾದಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಸಭಾ ಉಪ ಚುನಾವಣೆಯ ಪೂರ್ವ ಯೋಜಿತ ಪ್ರಚಾರದ ಹೊರತಾಗಿಯೂ, ಸಿಎಂ ಅವರಿಗೆ ನೋಟಿಸ್ ನೀಡಿದ್ದರಿಂದ ಪ್ರಚಾರವನ್ನು ಬಿಟ್ಟು ಲೋಕಾಯುಕ್ತರ ಮುಂದೆ ಹಾಜರಾದರು. ವಿನಾಯಿತಿ ಅಥವಾ ಒಂದು ವಾರ ಕಾಲಾವಕಾಶ ಕೋರಬಹುದಿತ್ತು, ಆದರೆ ಯಾವುದೇ ಅಧಿಕಾರ ದುರ್ಬಳಕೆ ಆರೋಪ ತಪ್ಪಿಸುವ ಮತ್ತು ಕಾನೂನನ್ನು ಗೌರವಿಸುವ ಉದ್ದೇಶದಿಂದ ಸಿಎಂ ಲೋಕಾಯುಕ್ತ ಪೊಲೀಸರ ಮುಂದೆ ವಿಚಾರಣೆಗೆ ಹಾಜರಾಗಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ ಅವರು ಯಾವುದಾದರೂ ದಾಖಲೆಗಳಿಗೆ ಸಹಿ ಮಾಡಿದ್ದಾರೆಯೇ ಅಥವಾ ಯಾವುದೇ ಅನುಮೋದನೆ ನೀಡಿದ್ದಾರೆಯೇ? ಏನೂ ಇಲ್ಲ, ಆದರೆ ಅವರನ್ನು ವಿಚಾರಣೆಗೆ ಕರೆಯಲಾಗಿತ್ತು. ಹೀಗಾಗಿ ಅವರು ತನಿಖಾ ಅಧಿಕಾರಿಗಳ ಮುಂದೆ ವಿಚಾರಣೆಗೆ ಹಾಜರಾದರು ಎಂದರು.

ಅಬಕಾರಿ ಇಲಾಖೆಯಲ್ಲಿ 900 ಕೋಟಿ ರೂ. ಹಫ್ತಾ ವಸೂಲಿ

- ಪ್ರತಿಪಕ್ಷ ನಾಯಕ ಆರ್.ಅಶೋಕ್ ಆರೋಪ
- ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲು ಆಗ್ರಹ



ಬೆಂಗಳೂರು,ನ.6–ಅಬಕಾರಿ ಇಲಾಖೆಯಲ್ಲಿ 900 ಕೋಟಿ ರೂ. ಭ್ರಷ್ಟಾಚಾರ ನಡೆದಿದ್ದು, ಇದನ್ನು ಕೂಡಲೇ ಸಿಬಿಐ ತನಿಖೆಗೆ ವಹಿಸಬೇಕು. ಸಚಿವ ಆರ್.ಬಿ. ತಿಮ್ಮಾಪುರ ರಾಜೀನಾಮೆ ನೀಡಬೇಕು. ಇದು ಹಣದ ಅವ್ಯವಹಾರವಾಗಿರುವುದರಿಂದ ಜಾರಿ ನಿರ್ದೇಶನಾಲಯ ಕೂಡ ಕ್ರಮ ವಹಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ಬೆಂಗಳೂರಿನಲ್ಲಿ ರೌಡಿಗಳು ಹಫ್ತಾ ವಸೂಲಿ ಮಾಡುತ್ತಿದ್ದರು. ಈಗ ರೌಡಿಗಳೇ ನಾಚುವಂತೆ ಅಬಕಾರಿ ಸಚಿವ ತಿಮ್ಮಾಪುರ ಅವರು ವಾರಕ್ಕೆ 18 ಕೋಟಿ ರೂ. ವಸೂಲಿ ಮಾಡುತ್ತಿದ್ದಾರೆ. ಅಂದರೆ ವರ್ಷಕ್ಕೆ ಸುಮಾರು 900 ಕೋಟಿ ರೂ. ಲಂಚ ಪಡೆಯಲಾಗುತ್ತಿದೆ. ಪ್ರತಿ ಹುದ್ದೆಯ ಅಧಿಕಾರಿಗಳಿಗೆ ಎಷ್ಟು ಲಂಚ ನೀಡಲಾಗುತ್ತಿದೆ ಎಂದು ಮದ್ಯ ಮಾರಾಟಗಾರರ ಸಂಘ ಪತ್ರದಲ್ಲಿ ವಿವರಿಸಿದೆ. ಮುಖ್ಯಮಂತ್ರಿ ಕಚೇರಿಯ ಅಧಿಕಾರಿ, ಪಿಎ, ಪಿಎಸ್ ಪಡೆಯುತ್ತಿರುವ ಲಂಚದ ಬಗ್ಗೆಯೂ ವಿವರವಿದೆ. ಸಮಬಾಳು ಸಮಪಾಲು ಎಂಬಂತೆ ಸಚಿವ ತಿಮ್ಮಾಪುರ ಎಲ್ಲರಿಗೂ ಲಂಚ ಹಂಚಿದ್ದಾರೆ. ಬಿಜೆಪಿ ಸರ್ಕಾರವಿದ್ದಾಗ 40 ಪರ್ಸೆಂಟ್ ಎಂದು ಆರೋಪ ಮಾಡಿದ್ದರೂ ಅದಕ್ಕೆ ಸೂಕ್ತ ದಾಖಲೆ ನೀಡಿಲ್ಲ. ಈಗ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ಭಿತ್ತಿಪತ್ರ ಅಂಟಿಸುವುದಾದರೆ ನಾನು ಕೂಡ ಬರುತ್ತೇನೆ ಎಂದು ವ್ಯಂಗ್ಯವಾಡಿದರು.

ಮದ್ಯ ಮಾರಾಟಗಾರರು ಈ ಕಿರುಕುಳ ವಿರೋಧಿಸಿ ಒಂದು ದಿನ ಬಂದ್ ಮಾಡಲಿದ್ದಾರೆ. ಈ ಸರ್ಕಾರ ಆದಾಯಕ್ಕೆ ಮದ್ಯವನ್ನೇ ನಂಬಿಕೊಂಡಿದೆ. ಹೀಗೆ ಬಾರ್‌ಗಳನ್ನು ಬಂದ್ ಮಾಡಿದರೆ ಸರ್ಕಾರದ ಖಜಾನೆ ಸಂಪೂರ್ಣ ಖಾಲಿಯಾಗಲಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬದುಕಿನ ತೆರೆದ ಪುಸ್ತಕದಲ್ಲಿ ಕಪ್ಪು ಚುಕ್ಕೆಗಳೇ ತುಂಬಿದೆ. ಅವರ ಕೈ ಕೆಳಗೆ ಕೆಲಸ ಮಾಡುವ ಪೊಲೀಸ್ ಅಧಿಕಾರಿಯ ಮುಂದೆ ಅವರೇ ಕುಳಿತು ತನಿಖೆ ಎದುರಿಸುವುದೆಂದರೆ ಅವರಿಗೆ ನಾಚಿಕೆಯಾಗಬೇಕು. ಇಲ್ಲಿ ತನಿಖೆಗೂ ನಿರ್ದಿಷ್ಟ ಸಮಯ ನಿಗದಿಪಡಿಸಿದ್ದು, ಇದು ಹೇಗೆ ಸಾಧ್ಯ ಎಂದು ಅಚ್ಚರಿಯಾಗುತ್ತದೆ ಎಂದರು.

ಬೆಳಗಾವಿಯ ಸರ್ಕಾರಿ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕ ರುದ್ರಣ್ಣ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಮೊಬೈಲ್‌ನಲ್ಲಿ ಸಂದೇಶ ಕಳುಹಿಸಿದ್ದರು. ಆದರೂ ಹಿರಿಯ ಅಧಿಕಾರಿಗಳು ಇದನ್ನು ಕಡೆಗಣಿಸಿದ್ದಾರೆ. ಇದು ಕರುಣೆಯೇ ಇಲ್ಲದ ಸರ್ಕಾರ. ಸುಮಾರು 2 ಲಕ್ಷ ರೂ. ಲಂಚವನ್ನು ರುದ್ರಣ್ಣ ಅವರಿಂದ ಪಡೆಯಲಾಗಿದೆ. ವಾಲ್ಮೀಕಿ ನಿಗಮದ ಅಧಿಕಾರಿ ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಪತ್ರ ಬರೆದ ಮಾದರಿಯಲ್ಲೇ ರುದ್ರಣ್ಣ ಕೂಡ ಭ್ರಷ್ಟಾಚಾರದ ವಿರುದ್ಧ ಹೋರಾಡಿ ಎಂದು ಸಂದೇಶ ಕಳುಹಿಸಿದ್ದಾರೆ. ಪಿಎಸ್‌ಐ ಪರಶುರಾಮ್ ಸತ್ತ ಬಳಿಕ ಯಾರನ್ನೂ ಬಂಧನ ಮಾಡಿಲ್ಲ. ರುದ್ರಣ್ಣ ಅವರ ಪ್ರಕರಣ ಅದೇ ರೀತಿ ಆಗುವ ಸಂಭವವಿದೆ. ಮಾಜಿ ಸಚಿವ ಈಶ್ವರಪ್ಪ ಅವರ ವಿರುದ್ಧ ತೊಡೆ ತಟ್ಟಿ ಹೋರಾಡಿದ್ದ ಸಿಎಂ ಸಿದ್ದರಾಮಯ್ಯ, ಈಗ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆರ್.ಅಶೋಕ್ ಆಗ್ರಹಿಸಿದರು.

ಕಾಂಗ್ರೆಸ್ ಸರ್ಕಾರ ಬಂದ ನಂತರ ಒಳ್ಳೆಯ ಕಾಲ ಬರುತ್ತದೆ ಎಂದುಕೊಂಡಿದ್ದೆ. ಆದರೆ ಇದು ಅಧಿಕಾರಿಗಳಿಗೆ ಯಮಗಂಡ ಕಾಲ, ಗುತ್ತಿಗೆದಾರರಿಗೆ ರಾಹುಕಾಲ, ರೈತರಿಗೆ ಕೊನೆಗಾಲ, ಜನರಿಗೆ ವಿನಾಶ ಕಾಲ ಎಂಬಂತಾಗಿದೆ. ವಿಧಾನಸೌಧದ ಮುಂಭಾಗ ಸರ್ಕಾರದ ಕೆಲಸ, ದೇವರ ಕೆಲಸ ಎಂದು ಬರೆಸಲಾಗಿದೆ. ಇನ್ನು ಕಾಂಗ್ರೆಸ್ ಸರ್ಕಾರದ ಜೇಬು ತುಂಬುವ ಕೆಲಸ ಎಂದು ಬದಲಾಯಿಸಿಕೊಳ್ಳಲಿ ಎಂದರು.

ಅನುದಾನವಿದ್ದರೂ ವಿಶೇಷಚೇತನರಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಾಗುತ್ತಿಲ್ಲ

'ದಿವ್ಯಾಂಗ ಸೇವಾ ಕೇಂದ್ರ' ಉದ್ಘಾಟಿಸಿದ ವಿಶೇಷಚೇತನರ ಸಬಲೀಕರಣ ಇಲಾಖೆ ನಿವೃತ್ತ ಆಯುಕ್ತ ಕೆ.ವಿ.ರಾಜಣ್ಣ ವಿಷಾದ

ಮೈಸೂರು, ನ.6(ಎಂಟಿವೈ)– ಸರ್ಕಾರ ವಿಶೇಷಚೇತನರ ಸಬಲೀಕರಣಕ್ಕೆ ಅಗತ್ಯ ಅನುದಾನ ಮೀಸಲಿಟ್ಟಿದ್ದರೂ, ಅದನ್ನು ಸಮರ್ಪಕವಾಗಿ ಬಳಸಿ ವಿಶೇಷಚೇತನರಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಾಗುತ್ತಿಲ್ಲ ಎಂದು ವಿಶೇಷಚೇತನ ಮತ್ತು ಹಿರಿಯ ನಾಗರಿಕ ಸಬಲೀಕರಣ ಇಲಾಖೆಯ ನಿವೃತ್ತ ಆಯುಕ್ತ ಕೆ.ವಿ.ರಾಜಣ್ಣ ವಿಷಾದಿಸಿದ್ದಾರೆ.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಸುಣ್ಣದಕೇರಿಯಲ್ಲಿ ಸಕ್ಷಮ ಕರ್ನಾಟಕ ದಕ್ಷಿಣ ಪ್ರಾಂತ, ಸೇವಾ ಇಂಟರ್‌ನ್ಯಾಷನಲ್ ಯುಎಸ್‌ಎ ಹಾಗೂ ಮುಖರ್ಜಿ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಆರಂಭಿಸಿರುವ 'ದಿವ್ಯಾಂಗ ಸೇವಾ ಕೇಂದ್ರ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರದಲ್ಲಿ ಅಗತ್ಯಕ್ಕೆ ತಕ್ಕ ಅನುದಾನವಿದೆ. ಆದರೆ ಅಧಿಕಾರಶಾಹಿಯು ಭ್ರಷ್ಟಾಚಾರದಲ್ಲಿ ತೊಡಗಿರುವುದರಿಂದ ಸರಿಯಾಗಿ ಅರ್ಹ ಫಲಾನುಭವಿಗಳಿಗೆ ಸವಲತ್ತು–ಸೌಲಭ್ಯ ದೊರಕುತ್ತಿಲ್ಲ. ಶಿಫಾರಸುವುಳ್ಳವರು ಹಾಗೂ ಅಧಿಕಾರಿಗಳೊಂದಿಗೆ ಒಡನಾಟವುಳ್ಳವರಿಗೆ ಹೆಚ್ಚಿನ ಲಾಭ ದೊರೆಯುತ್ತದೆ. ತಳಮಟ್ಟದಲ್ಲಿ ಇರುವ ವಿಶೇಷಚೇತನರಿಗೂ ಸೌಲಭ್ಯ ದೊರಕುವಂತಹ ವಾತಾವರಣ ನಿರ್ಮಾಣವಾಗಬೇಕು. ಅದಕ್ಕಾಗಿ ಸ್ವಯಂ ಸೇವಾ ಸಂಸ್ಥೆಗಳು ನಿಸ್ವಾರ್ಥವಾಗಿ ಕಾರ್ಯನಿರ್ವಹಿಸಬೇಕು ಎಂದರು.

ವಿಕಲಚೇತನರ ಪುನಶ್ಚೇತನವಾಗದಿದ್ದರೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಭಾರತದಲ್ಲಿ 7ರಿಂದ 8 ಕೋಟಿ ವಿಕಲಚೇತನರಿದ್ದಾರೆ. ಇವರನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಅಗತ್ಯ ತರಬೇತಿ ನೀಡಬೇಕು. ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು. ಆಗ ಮಾತ್ರ ವಿಶೇಷಚೇತನರಿಗೂ ನೆರವಾಗುತ್ತದೆ. ಮಾನವ ಸಂಪನ್ಮೂಲವೂ ಬಳಕೆಯಾಗುತ್ತದೆ. ಅಂಗವಿಕಲತೆಯನ್ನು ತಗ್ಗಿಸಲು ಕುಟುಂಬ, ವೈದ್ಯರು ಹಾಗೂ ಸಮಾಜವೇ ಕಾರ್ಯೋನ್ಮುಖವಾಗಬೇಕು. ವಿಶೇಷಚೇತನರಿಗೆ ಕೊಟ್ಟಿರುವ ಸಾಧನ–ಸಲಕರಣೆ ಉಪಯುಕ್ತವಾಗುತ್ತಿಲ್ಲ. ಇದರ ಬಗ್ಗೆ ಸಮಗ್ರವಾಗಿ ಅಧ್ಯಯನವಾಗಬೇಕು. ಸರ್ಕಾರದಿಂದ ತನಿಖೆಯಾಗಬೇಕು. ಏಕೆಂದರೆ ವಿಶೇಷಚೇತನರ ವಿಷಯವೂ ಮಾನವ ಹಕ್ಕಿನ ವಿಷಯವಾಗಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ. ಆದ್ದರಿಂದ ವಿಶೇಷಚೇತನರಿಗೆ ಸೌಲಭ್ಯ ಸಮರ್ಪಕವಾಗಿ ದೊರೆಯದಿದ್ದರೆ ಕಾನೂನು ಹೋರಾಟ ಮಾಡಲು ಮುಂದಾಗಲಿದ್ದೇವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಕ್ಷಮ ಮೈಸೂರು ಜಿಲ್ಲಾ ಘಟಕ ಅಧ್ಯಕ್ಷ ಜಯರಾಮ ವಹಿಸಿದ್ದರು. ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿ ಶಂಕರಗೌಡ ಪಾಟೀಲ್, ಎಬಿವಿಪಿ ನಗರ ಸಮಿತಿ ಅಧ್ಯಕ್ಷ ಅಮೃತ್‌ರಾವ್, ಸಕ್ಷಮ ಕರ್ನಾಟಕ ದಕ್ಷಿಣ ಪ್ರಾಂತ ಅಧ್ಯಕ್ಷ ಕೇಶವ್‌ಕುಮಾರ್, ಮುಖರ್ಜಿ ಫೌಂಡೇಶನ್ ಪ್ರತಿನಿಧಿ ಸುಬ್ಬಯ್ಯ, ವೆಂಕಟೇಶ್ ಮೂರ್ತಿ, ರಮೇಶ್ ಪ್ರಭು ಮತ್ತಿತರರು ಭಾಗವಹಿಸಿದ್ದರು.



ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಸುಣ್ಣದಕೇರಿಯಲ್ಲಿ ಆರಂಭಿಸಿರುವ 'ದಿವ್ಯಾಂಗ ಸೇವಾ ಕೇಂದ್ರ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ವಿಶೇಷಚೇತನರು.

ಜಲವಿಮಾನ ಹಾರಾಟಕ್ಕೆ ಸ್ಥಳ ಪರಿಶೀಲನೆ




ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಅಣೆಕಟ್ಟೆನ ಹಿನ್ನೀರಿನ ವೇಣು ಗೋಪಾಲಸ್ವಾಮಿ ದೇವಸ್ಥಾನದ ಬಳಿ ಜಲ ವಿಮಾನ ಪ್ರಾಂಯೋಗಿಕ ಹಾರಾಟಕ್ಕೆ ನವೆಂಬರ್ 10ರಂದು ಚಾಲನೆ ನೀಡಲಾಗುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ ಬುಧವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಅಧಿಕಾರಿಗಳ ವರ್ಗ ಉಪಸ್ಥಿತರಿದ್ದರು.

ಶ್ರೀ ಬಸವೇಶ್ವರ ಸ್ವಾಮಿ ಹುಲಿ ವಾಹನೋತ್ಸವ



ಪಾಂಡವಪುರ ತಾಲೂಕಿನ ಕೆಂಚನಹಳ್ಳಿ ಗ್ರಾಮದಲ್ಲಿ 95ನೇ ವರ್ಷದ ಶ್ರೀ ಬಸವೇಶ್ವರಸ್ವಾಮಿ ಹುಲಿ ವಾಹನೋತ್ಸವ ಹಾಗೂ ಧನಗಳ ಮೆರವಣಿಗೆ ಉತ್ಸವವು ವಿಜೃಂಭಣೆಯಿಂದ ನಡೆಯಿತು.

ಶ್ರೀ ಲಕ್ಷ್ಮೀದೇವಿ ಅಮ್ಮನವರ ಸಿಡಿಲು ಕಲ್ಲು ಜಾತ್ರೆ



ಕೆ.ಆರ್.ಪೇಟೆ ತಾಲೂಕಿನ ಗಡಿಗ್ರಾಮ ದಡಿಘಟ್ಟ ಗ್ರಾಮದ ಗ್ರಾಮ ದೇವತೆ ಶ್ರೀ ಲಕ್ಷ್ಮೀದೇವಿ ಅಮ್ಮನವರ ಸಿಡಿಲು ಕಲ್ಲು ಜಾತ್ರೆ ಅಂಗವಾಗಿ ಲಕ್ಷ್ಮೀದೇವಿ ಮತ್ತು ದೊಡ್ಡಯ್ಯ, ಚಿಕ್ಕಯ್ಯ, ಮೈಲಾರಲಿಂಗೇಶ್ವರ ಸ್ವಾಮಿಯವರ ಪೂಜಾ ಕುಣಿತ ಹಾಗೂ ಶ್ರೀ ಲಕ್ಷ್ಮೀದೇವಿ ಅಮ್ಮನವರ ಪಲ್ಲಕ್ಕಿ ಉತ್ಸವ ಸಡಗರ ಸಂಭ್ರಮದಿಂದ ನಡೆಯಿತು.

ನ.13ರಂದು ಸಾರ್ವಜನಿಕ ಕುಂದು ಕೊರತೆ ಸಭೆ

ಮಂಡ್ಯ,ನ.6– ಮಂಡ್ಯ ಲೋಕಾಯುಕ್ತ ವಿಭಾಗದ ಅಧಿಕಾರಿಗಳು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನಲ್ಲಿ ಸಾರ್ವಜನಿಕರಿಂದ ದೂರು/ಅಹವಾಲು ಸ್ವೀಕಾರ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರ ಕುಂದು ಕೊರತೆ ಸಭೆಯನ್ನು ನ.13ರಂದು ಬೆಳಿಗ್ಗೆ 11 ಗಂಟೆಗೆ ಕೆ.ಆರ್.ಪೇಟೆ ತಾಲೂಕು ಕಚೇರಿ ಆವರಣದಲ್ಲಿ ಏರ್ಪಡಿಸಿದ್ದಾರೆ. ಸಭೆಯಲ್ಲಿ ಮಂಡ್ಯ ಲೋಕಾಯುಕ್ತ ಡಿವೈಎಸ್‌ಪಿ ಸುನಿಲ್ ಕುಮಾರ್ ಹೆಚ್.ಟಿ, ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಮೋಹನ್‌ರೆಡ್ಡಿ ಆರ್.ಎಂ, ಎಂ.ಜಯರತ್ನ, ಬ್ಯಾಟರಾಯಗೌಡ.ಬಿ.ಪಿ ಅವರುಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಬಸರಾಳನ್ನು ತಾಲೂಕು ಕೇಂದ್ರ ಮಾಡಲು ಪ್ರಸ್ತಾವನೆ ಸಲ್ಲಿಕೆ

ಮಂಡ್ಯ,ನ.6– ಮಂಡ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಸರಾಳು ಹೋಬಳಿ ಕೇಂದ್ರವಾಗಿದ್ದು, ತಾಲೂಕು ಕೇಂದ್ರವಾಗಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಶಾಸಕ ಪಿ.ರವಿಕುಮಾರ್ ಗಣಿಗ ತಿಳಿಸಿದರು.

ಬಸರಾಳು ಗ್ರಾಮದಲ್ಲಿ ಬಸರಾಳು–ಮುತ್ತೇಗೆರೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಬಸರಾಳು ಹೋಬಳಿ ಕೇಂದ್ರವಾಗಿದ್ದು ಮಂಡ್ಯ ನಗರದಿಂದ 26 ಕಿ.ಮೀ. ದೂರದಲ್ಲಿದೆ. ಇದರಿಂದಾಗಿ ಬಸರಾಳು ಸುತ್ತಮುತ್ತಲಿನ ಗ್ರಾಮಸ್ಥರು ತಾಲೂಕು ಕಚೇರಿ ಸೇರಿದಂತೆ ಇನ್ನಿತರೆ ವ್ಯವಹಾರಗಳಿಗೆ ಬರಬೇಕಾದರೆ ಬಹಳ ದೂರ ಕ್ರಮಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಹೋಬಳಿ ಕೇಂದ್ರವಾಗಿ ಬೆಳೆದಿರುವ ಬಸರಾಳನ್ನು ತಾಲೂಕು ಕೇಂದ್ರವಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ ಎಂದರು.

10 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ: ಬಸರಾಳು–ಮುತ್ತೇಗೆರೆ ರಸ್ತೆಯು ಸುಮಾರು 25 ವರ್ಷಗಳಿಂದ ಅಭಿವೃದ್ಧಿಯನ್ನೇ ಕಂಡಿಲ್ಲ. ಪ್ರಸ್ತುತ ಕಾಲ ಕೂಡಿ ಬಂದಿದ್ದು, 10 ಕೋಟಿ ರೂ. ವೆಚ್ಚದಲ್ಲಿ 4.43 ಕಿ.ಮೀ. ರಸ್ತೆಯನ್ನು ಉತ್ತಮ ಗುಣಮಟ್ಟದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ. ನಾನು ಶಾಸಕನಾಗಿ ಆಯ್ಕೆಯಾದ ನಂತರ ಈ ಭಾಗದಲ್ಲಿ ಸುಮಾರು 75 ಕೋಟಿ ವೆಚ್ಚದಲ್ಲಿ ರಸ್ತೆ, ಚರಂಡಿ ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಇನ್ನೂ 15 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೆ ಟೆಂಡರ್ ಕರೆಯಬೇಕಾಗಿದೆ ಎಂದು ಹೇಳಿದರು.



ಬಸರಾಳು ಗ್ರಾಮದಲ್ಲಿ ಬಸರಾಳು–ಮುತ್ತೇಗೆರೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ರವಿಕುಮಾರ್ ಗಣಿಗ ಭೂಮಿ ಪೂಜೆ ಸಲ್ಲಿಸಿದರು.

ಮಾಚಗೌಡನಹಳ್ಳಿ–ಬಾಳೇನಹಳ್ಳಿ ರಸ್ತೆ, ಬಸರಾಳು–ಕಂಬದಹಳ್ಳಿ ರಸ್ತೆಗೆ 4.5 ಕೋಟಿ, ಅಂಕುಶಾಪುರ ಕೆರೆ ಕೋಡಿ ಮತ್ತು ಸೇತುವೆ, ಬೆನ್ನಹಟ್ಟಿ ಕೆರೆ ಕೆಳಭಾಗ ಸೇತುವೆಗೆ ಒಟ್ಟು 2.5 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದರು. ಸುಮಾರು ವರ್ಷಗಳಿಂದ ನಂಜೇನಹಳ್ಳಿಗೆ ರಸ್ತೆಯೇ ಆಗಿರಲಿಲ್ಲ. ಇದಕ್ಕೂ 60 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ. ಬಸರಾಳು ಬಸ್ ನಿಲ್ದಾಣ ಕಾಮಗಾರಿಗೆ ಟೆಂಡರ್‌ದಾರರು ಶೇ. 25ಕ್ಕಿಂತ ಕಡಿಮೆ ಬಿಡ್ ಮಾಡಿದ್ದರಿಂದ ಪುನಃ ಹೊಸದಾಗಿ ಟೆಂಡರ್ ಕರೆಯುವಂತೆ ತಿಳಿಸಲಾಗಿದೆ. ಹೈಟೆಕ್ ಶೌಚಾಲಯ ನಿರ್ಮಾಣಕ್ಕೆ ಶಂಕು ಸ್ಥಾಪನೆ ನೆರವೇರಿಸಲಾಗಿದೆ ಎಂದು ಹೇಳಿದರು.

ಚಿಕ್ಕಮಂಡ್ಯ–ಬಿಳಿದೇಗಲು ವರೆಗಿನ ರಸ್ತೆಯ ಅಭಿವೃದ್ಧಿಗೆ 10 ಕೋಟಿ ರೂ. ಟೆಂಡರ್ ಆಗಿದೆ. ಮಂಡ್ಯ ವಿಧಾನಸಭಾ ಕ್ಷೇತ್ರದ ಗ್ರಾಮೀಣ ಪ್ರದೇಶಗಳ ಎಲ್ಲ ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಅಧಿಕಾರ ಬರುತ್ತೆ ಹೋಗುತ್ತೆ. ಆದರೆ, ನಾವು ಅಧಿಕಾರದಲ್ಲಿದ್ದಾಗ ಏನು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೆವೋ ಅವುಗಳೇ ನಮ್ಮ ಹೆಸರನ್ನು ತಂದುಕೊಡುತ್ತವೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಪ್ಪಾಜಿಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಕಂಬದಹಳ್ಳಿ ಪುಟ್ಟಸ್ವಾಮಿ, ತಾಪಂ ಮಾಜಿ ಸದಸ್ಯ ಮಂಜೇಗೌಡ, ಗ್ರಾಪಂ ಅಧ್ಯಕ್ಷ ಜವರಪ್ಪ, ಸದಸ್ಯ ರಾಜು, ಉದ್ಯಮಿ ರವಿ ಬೋಜೇಗೌಡ, ಕಾಂಗ್ರೆಸ್ ಮುಖಂಡ ಪ್ರದೀಪ್ ಹಾಜರಿದ್ದರು.

ತಾಲೂಕು ಕಚೇರಿ ಎದುರು ರೈತರ ಪ್ರತಿಭಟನೆ


ಶ್ರೀರಂಗಪಟ್ಟಣದಲ್ಲಿ ಭೂಮಾಫಿಯಾ ಹೆಚ್ಚಳ: ನಂಜುಂಡೇಗೌಡ

ಶ್ರೀರಂಗಪಟ್ಟಣ,ನ.6– ತಾಲೂಕಿನಲ್ಲಿ ಭೂ ಮಾಫಿಯಾ ಹಾಗೂ ಆಡಳಿತದಲ್ಲಿ ಲೂಟಿಕೋರರ ಧಂಧೆ ತೀವ್ರವಾಗಿ ಹೆಚ್ಚಾಗಿದ್ದು, ಶಾಸಕರ ರಕ್ಷಣೆಯಲ್ಲಿ ಅವರ ಹಿಂಬಾಲಕರೇ ಸುಲಿಗೆ ಮಾಡುತ್ತಿದ್ದಾರೆ ಎಂದು ರೈತ ಮುಖಂಡ ಕೆ.ಎಸ್.ನಂಜುಂಡೇಗೌಡ ಆರೋಪಿಸಿದರು.

ಪಟ್ಟಣದ ತಾಲೂಕು ಕಚೇರಿಯ ಮುಂಭಾಗ ಬುಧವಾರ ಭೂಮಿ ತಾಯಿ ಹೋರಾಟ ಸಮಿತಿಯ ಕಾರ್ಯಕರ್ತರೊಂದಿಗೆ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ ನಂತರ ಜಿಲ್ಲಾಧಿಕಾರಿ ಡಾ.ಕುಮಾರ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಮೈಸೂರಿಗೆ ಸಮೀಪದ ತಾಲೂಕಿನ ಹೋಬಳಿಗಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿನ ಬೆಲೆಬಾಳುವ ಭೂಮಿಗಳನ್ನು ಕೆಲ ಪ್ರಭಾವಿ ಭೂ ಮಾಫಿಯಾದವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಅಕ್ರಮ ವಾಗಿ ಕಬಳಿಸಿ ಖಾಸಗಿ ಬಡಾವಣೆ ನಿರ್ಮಾಣ ಮಾಡುತ್ತಿದ್ದಾರೆ.

ತಾಲೂಕಿನ ಬೆಳವಾಡಿ ಸರ್ವೆ ನಂ.64 ಹಾಗೂ ಸರ್ವೆ ನಂ.23ರಲ್ಲಿರುವ ಸರ್ಕಾರಿ ಜಮೀನಿನಲ್ಲಿ ರಾಜರೋಷವಾಗಿ ಖಾಸಗಿ ಬಡಾವಣೆ ನಿರ್ಮಾಣ ಮಾಡಲಾಗುತ್ತಿದೆ. ಹುಲಿಕೆರೆ ಗ್ರಾಮದ ಜುವಾರಿ ಗಾರ್ಡನ್ ಸಿಟಿಯವರಿಂದಲೂ ಸಹ ಸಾರ್ವಜನಿಕ ರಸ್ತೆ ಕಬಳಿಸಿದ್ದಾರೆ. ಈ ಆಸ್ತಿಗಳಿಗೆ ಅಧಿಕೃತ ದಾಖಲೆ ಹೊಂದಿ ಸರ್ಕಾರಿ ಭೂಮಿಗಳ ಕಬಳಿಕೆಯಾಗುತ್ತಿದ್ದರು ತಾಲೂಕು ಆಡಳಿತ ಮೌನವಾಗಿ ಸುಮ್ಮನಿದ್ದು, ಈ ಬಗ್ಗೆ ಪ್ರಶ್ನಿಸದಿರುವುದು ಇಂತಹ ಅಕ್ರಮಗಳಲ್ಲಿ ಇವರು ಶಾಮೀಲಾಗಿರುವ ಅನುಮಾನ ಕಾಡುತ್ತಿದೆ. ಜತೆಗೆ ತಾಲೂಕು ಆಡಳಿತದ ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ಕ್ಷೇತ್ರದ ಶಾಸಕರ ಹಿಂಬಾಲಕರುಗಳದೇ ಪಾರುಪತ್ಯ ನಡೆಯುತ್ತಿದೆ ಎಂದು ಆರೋಪಿಸಿ ಸರಿಯಾದ ಕ್ರಮ ಕೈಗೊಳ್ಳಿ ಎಂದು ಮನವಿ ಮಾಡಿದರು.



ಜಿಲ್ಲಾಧಿಕಾರಿ ಡಾ.ಕುಮಾರ ಅವರಿಗೆ ಮನವಿ ಸಲ್ಲಿಸುತ್ತಿರುವ ರೈತರು.

ಪ್ರತಿಭಟನಾಕಾರರ ಮನವಿ ಆಲಿಸಿದ ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಅಕ್ರಮಗಳ ವಿರುದ್ಧ ಕ್ರಮಕೈಗೊಳ್ಳಲು ಹೋರಾಟಗಾರರ ಎದುರೇ ತಹಸೀಲ್ದಾರ್ ಪರಶುರಾಮ್ ಅವರಿಗೆ ಸೂಚನೆ ನೀಡಿದರು.

ಭೂಮಿ ತಾಯಿ ಹೋರಾಟ ಸಮಿತಿ ಅಧ್ಯಕ್ಷ ಕೃಷ್ಣೇಗೌಡ, ಉಪಾಧ್ಯಕ್ಷರುಗಳಾದ ಹನಿಯಾಂಬಡಿ ನಾಗರಾಜು, ಪ್ರಧಾನ ಕಾರ್ಯದರ್ಶಿ ಎಂ.ವಿ.ಕೃಷ್ಣ ದರ್ಶನ್, ಖಜಾಂಚಿ ಮಹದೇವು, ಮುಖಂಡರಾದ ಮಹದೇವು, ದೊಡ್ಡಪಾಳ್ಯ ಮಹೇಶ್, ಅಚ್ಚಪ್ಪನಕೊಪ್ಪಲು ರವಿಲಕ್ಷ್ಮಣ, ಹೆಮ್ಮಿಗೆ ಕೃಷ್ಣ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಮಂಡ್ಯದಲ್ಲಿ ಗಾಂಜಾ ಗಿಡ ಪತ್ತೆ..!

ಮಂಡ್ಯ: ನಗರದ ಸರ್ಕಾರಿ ನೌಕರರ ಸಂಘದ ಬಳಿ ಇರುವ ಮಂಡ್ಯ ಜಿಲ್ಲಾ ಭೂದಾಖಲೆ ನೌಕರರ ಸಂಘದ ಕಚೇರಿ ಆವರಣದಲ್ಲಿ ಗಾಂಜಾ ಗಿಡ ಪತ್ತೆಯಾಗಿದ್ದು, ಖಚಿತ ಮಾಹಿತಿ ಆಧರಿಸಿ ಅಬಕಾರಿ ಅಧಿಕಾರಿಗಳು ದಾಳಿ ನಡೆಸಿ, ಗಿಡಗಳನ್ನು ವಶಕ್ಕೆ ಪಡೆದಿದ್ದಾರೆ.

ಅಬಕಾರಿ ನಿರೀಕ್ಷಕಿ ವನಿತಾ ನೇತೃತ್ವದಲ್ಲಿ ದಾಳಿ ನಡೆದಿದ್ದು, ಅಧಿಕಾರಿಗಳ ದಾಳಿ ಬಳಿಕ ಎರಡು ಗಾಂಜಾ ಗಿಡ ವಶಕ್ಕೆ ಪಡೆಯಲಾಗಿದ್ದು, ಸಮೃದ್ಧವಾಗಿ ಸುಮಾರು 4 ಅಡಿ ಉದ್ದ ಗಿಡಗಳು ಬೆಳೆದಿದ್ದವು.

ಸುಮಾರು 50 ಸಾವಿರ ರೂ ಬೆಲೆ ಬಾಳುವ ಎರಡು ಗಿಡಗಳಾಗಿದ್ದು, ನಿಷೇಧಿತ ಗಾಂಜಾ ಸೇವನೆ ಮಾಡುವವರು ಸ್ಥಳದಲ್ಲಿ ಗಾಂಜಾ ಸೇವಿಸಿ, ಬೀಜ ಬಿಸಾಡಿ ಹೋಗಿದ್ದು, ಅದರಿಂದ ಗಿಡಗಳು ಬೆಳೆದಿರುಹುದೆಂದು ಶಂಕಿಸಿದ್ದು, ಈ ಸಂಬಂಧ ಮಂಡ್ಯ ಅಬಕಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ಬೆಟ್ಟಿಂಗ್ ದಂದೆಗೆ ಕಡಿವಾಣ ಹಾಕಿ

ಮಂಡ್ಯ,ನ.6– ಜಿಲ್ಲೆಯಲ್ಲಿ ಬೆಟ್ಟಿಂಗ್ ದಂಧೆಗೆ ಸಿಲುಕಿ ಯುವಕನೊಬ್ಬ ಮನನೊಂದು ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವುದು ಬಹಳ ನೋವಿನ ಸಂಗತಿಯಾಗಿದೆ. ಜಿಲ್ಲೆಯಲ್ಲಿ ಬೆಟ್ಟಿಂಗ್ ದಂಧೆಗೆ ಕಡಿವಾಣ ಹಾಕಿ ಎಂದು ಜಿಲ್ಲಾ ಧಿಕಾರಿ ಡಾ.ಕುಮಾರ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ವಿವಿಧ ಸಂಘಟನೆಗಳು ಹಾಗೂ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಜೂಜು ಹಾಗೂ ಕ್ರಿಕೆಟ್ ಬೆಟ್ಟಿಂಗ್ ದಂಧೆಯು ಯುವಕರುಗಳನ್ನು ದಾರಿ ತಪ್ಪಿಸುತ್ತಿದ್ದು ಅವರನ್ನು ಸಾಲದ ಸುಳಿಯಲ್ಲಿ ಸಿಲುಕುವಂತೆ ಮಾಡುತ್ತಿದೆ. ಜನಪರ ಸಂಘಟನೆಗಳು ಯುವಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹೆಚ್ಚು ಆಯೋಜಿಸಿ ಜೂಜು ಹಾಗೂ ಬೆಟ್ಟಿಂಗ್‌ಗಳಿಂದ ದೂರವಿಡಿ ಎಂದರು.

ಜಿಲ್ಲೆಯಲ್ಲಿ ಆರೋಗ್ಯಕರ ಸಮಾಜದ ನಿರ್ಮಾಣ ಮಾಡಲು ಬೆಟ್ಟಿಂಗ್, ಇಸ್ಪೀಟು ಹಾಗೂ ಯಾವುದೇ ರೀತಿಯ ಜೂಜುಗಳ ಬಗ್ಗೆ ಮಾಹಿತಿ ಅಥವಾ ದೂರು ನೀಡಲು ಪೊಲೀಸ್ ಇಲಾಖೆಯಿಂದ ಸಹಾಯವಾಣಿಯನ್ನು ತೆರೆಯಲಾಗುವುದು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಮಾತನಾಡಿ ಜಿಲ್ಲೆಯಲ್ಲಿ ನಡೆಯುತ್ತಿರುವ ಬೆಟ್ಟಿಂಗ್ ದಂಧೆಯ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಬೆಟ್ಟಿಂಗ್, ಇನ್ನಾವುದೇ ಜೂಜುಗಳನ್ನು ತಡೆಯುವ ನಿಟ್ಟಿನಲ್ಲಿ ಬೀಟ್ ವ್ಯವಸ್ಥೆ ಮಾಡಲಾಗುವುದು ಎಂದರು.

ಒಂದನೇ ಪುಟದಿಂದ

ಲೋಕಾಯುಕ್ತ ವಿಚಾರಣೆಗೆ ಸಿದ್ದರಾಮಯ್ಯ ಹಾಜರು

ಸಿಎಂ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಜೊತೆ ಉಪಹಾರ ಸ್ವೀಕರಿಸಿದ ಸಿದ್ದರಾಮಯ್ಯ ಖಾಸಗಿ ಕಾರು (ಕೆಎ 04 ಎಂವಿ 7666) ನಲ್ಲಿ ಲೋಕಾಯುಕ್ತ ಕಚೇರಿಯತ್ತ ಹೊರಟರು.

ಡಾ.ಮಹದೇವಪ್ಪ ಹಾಗೂ ವೆಂಕಟೇಶ್ ಅವರನ್ನು ಸರ್ಕಾರಿ ಅತಿಥಿ ಗೃಹದಲ್ಲೆ ಇರಲು ಹೇಳಿ, ಪೊಲೀಸ್ ಎಸ್ಕಾರ್ಟ್ ಬಿಟ್ಟು ತಮ್ಮ ಕಾರಿನ ಹಿಂದೆ ಮುಂದೆ ಯಾವುದೇ ವಾಹನ ಹಿಂಬಾಲಿಸಲು ಅವಕಾಶ ನೀಡದೆ ಸಿದ್ದರಾಮಯ್ಯ ಲೋಕಾಯುಕ್ತ ಕಚೇರಿಯತ್ತ ಹೊರಟರು. ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಗೆ ಇಂದು ಬೆಳಿಗ್ಗೆ ಸರಿಯಾಗಿ 10.07 ಗಂಟೆಗೆ ಆಗಮಿಸಿದ ಸಿದ್ದರಾಮಯ್ಯ ಅವರನ್ನು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಸ್ವಾಗತಿಸಿದರು. ತರುವಾಯ ಸಿದ್ದರಾಮಯ್ಯ ಜೊತೆ ಕೊಡಗಿನ ವೀರಾಜಪೇಟೆಯ ಶಾಸಕ ಎ.ಎಸ್.ಪೊನ್ನಣ್ಣ ಲೋಕಾಯುಕ್ತ ಕಚೇರಿ ಒಳಗೆ ಹೋಗಿದ್ದು ಕಂಡು ಬಂದಿತು.

ಈ ವೇಳೆ ಲೋಕಾಯುಕ್ತ ಎಸ್ಪಿ ಉದೇಶ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಚಾರಣೆಗೊಳಪಡಿಸಿದರು. ಮೈಸೂರಿನ ಕೆಸರೆ ಸರ್ವೆ ನಂಬರ್ 464 ರ 3.16 ಎಕರೆ ಜಮೀನು ಖರೀದಿ ಮಾಡಿದ ವಿಚಾರ, ಮುಡಾ ಭೂ ಸ್ವಾಧೀನ ಮಾಡಿಕೊಂಡ ಪ್ರಕ್ರಿಯೆ, ಡಿ ನೋಟಿಫಿಕೇಷನ್ ಮಾಡಿದ ಸರ್ಕಾರದ ಆದೇಶ ಹಾಗೂ ಸಿಎಂ ಪತ್ನಿ ಪಾರ್ವತಿ ಅವರು ವಿಜಯನಗರದಲ್ಲಿ ಬದಲಿ 14 ನಿವೇಶನ ಪಡೆದಿರುವ ವಿಚಾರಗಳ ಬಗ್ಗೆ ಲೋಕಾಯುಕ್ತರು ಸಿದ್ದರಾಮಯ್ಯ ಅವರಿಂದ ಮಾಹಿತಿ ಪಡೆದರು.

ಮೊದಲೇ ಸಿದ್ಧಪಡಿಸಿಕೊಂಡಿದ್ದ ಸರಣಿ ಪ್ರಶ್ನೆಗಳಿಗೆ ಲೋಕಾಯುಕ್ತ ಎಸ್ಪಿ ಉದೇಶ್ ಉತ್ತರ ಪಡೆದರು. ಶಾಂತಚಿತ್ತರಾಗಿದ್ದ ಸಿದ್ದರಾಮಯ್ಯ ಲೋಕಾಯುಕ್ತರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದರು. ತನಿಖೆ ಪೂರ್ಣಗೊಂಡ ನಂತರ ಸಮ್ಮತಿ ಪತ್ರಕ್ಕೆ ಸಿದ್ದರಾಮಯ್ಯ ಅವರಿಂದ ಸಹಿ ಕೂಡ ಪಡೆದರು.

ಈ ಮೂಲಕ 12 ಗಂಟೆಗೆ ವಿಚಾರಣೆ ಮುಗಿಸಿ ಸಿದ್ದರಾಮಯ್ಯ ಲೋಕಾಯುಕ್ತ ಕಚೇರಿಯಿಂದ ಹೊರ ಬಂದರು. ಈ ಮೂಲಕ ಸುಮಾರು ಎರಡು ಗಂಟೆಗಳ ಕಾಲ ಸಿದ್ದರಾಮಯ್ಯ ಅವರನ್ನು ಲೋಕಾಯುಕ್ತರು ವಿಚಾರಣಗೊಳಪಡಿಸಿದರು. ವಿಚಾರಣೆ ಬಳಿಕ ಸಿದ್ದರಾಮಯ್ಯ ಖಾಸಗಿ ಕಾರಿನಲ್ಲಿ ನಗರದ ಸರ್ಕಾರಿ ಅತಿಥಿ ಗೃಹಕ್ಕೆ ಆಗಮಿಸಿದರು. ಅಲ್ಲಿಂದ ಸಚಿವರಾದ ಡಾ.ಮಹದೇವಪ್ಪ ಹಾಗೂ ವೆಂಕಟೇಶ್ ಜೊತೆ ಚನ್ನಪಟ್ಟಣ ಉಪ ಚುನಾವಣಾ ಪ್ರಚಾರಕ್ಕೆ ಹೊರಟರು.

ಸಿದ್ದರಾಮಯ್ಯಗೆ ಅಗ್ನಿಪರೀಕ್ಷೆ

40 ವರ್ಷಗಳ ಸುದೀರ್ಘ ರಾಜಕೀಯ ಜೀವನ ಕಳೆದಿರುವ ಸಿದ್ದರಾಮಯ್ಯ ಅವರಿಗೆ ಇಂದು ಕಹಿ ಅನುಭವದ ದಿನವಾಗಿತ್ತು. ಪೊಲೀಸ್ ಇಲಾಖೆಯ ಅತ್ಯುನ್ನತ ಹುದ್ದೆಯಲ್ಲಿರುವ ರಾಜ್ಯ ಪೊಲೀಸ್ ನಿರ್ದೇಶಕರು ಸೆಲ್ಯೂಟ್ ಹೊಡೆಯುವ ಹುದ್ದೆ ಅಲಂಕರಿಸಿರುವ ಸಿದ್ದರಾಮಯ್ಯ, ಇಂದು ಎಸ್ಪಿ ದರ್ಜೆಯ ಪೊಲೀಸ್ ಅಧಿಕಾರಿ ಮುಂದೆ ಕುಳಿತು ಪ್ರಶ್ನೆಗಳಿಗೆ ಉತ್ತರ ನೀಡಬೇಕಾದ ಪರಿಸ್ಥಿತಿ ಬಂದಿತು. ಇದು ಮುಜುಗರದ ಸಂಗತಿ ಎಂಬುದು ಬಹಳಷ್ಟು ಜನರ ಅಭಿಪ್ರಾಯವಾದರೂ ಸಿದ್ದರಾಮಯ್ಯ ಮಾತ್ರ ಇದು ನನಗೆ ಮುಜುಗರವಲ್ಲ ಎಂದು ಪ್ರತಿಕ್ರಿಯೆ ನೀಡಿದರು.

ಮೊದಲು ಮುಗುಳ್ನಗೆ, ತರುವಾಯ ಕೋಪ ತಾಪ

ಲೋಕಾಯುಕ್ತ ಕಚೇರಿಗೆ ಬಂದ ಆಗಮಿಸಿದ ಸಂದರ್ಭದಲ್ಲಿ ಮುಗುಳ್ನಗೆಯ ಭಾವ ತೋರಿದ ಸಿದ್ದರಾಮಯ್ಯ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುವಾಗ ಕೋಪೋದ್ರಿಕ್ತರಾದರು. ನಗರದ ಸರ್ಕಾರಿ ಅತಿಥಿ ಗೃಹದಲ್ಲಿ ಪತ್ರಕರ್ತರೊಂದಿಗೆ ಮಾತನಾಡುವ ಸಂದರ್ಭದಲ್ಲಿ ಸಿದ್ದರಾಮಯ್ಯ ಒಂದು ಹಂತದಲ್ಲಿ ತಾಳ್ಮೆ ಕಳೆದುಕೊಂಡರು. ಒಬ್ಬರಾದ ಮೇಲೆ ಒಬ್ಬರು ಪ್ರಶ್ನೆ ಕೇಳಿ, ಎಲ್ಲರೂ ಒಟ್ಟಿಗೆ ಪ್ರಶ್ನೆ ಕೇಳಿದರೆ ನಾನೇಗೆ ಉತ್ತರ ನೀಡಲಿ ಎಂದು ಸಿಡಿಮಿಡಿಗೊಂಡರು. ಪ್ರತಿದಿನ ಸಿದ್ದರಾಮಯ್ಯ ಅವರನ್ನು ಬೆಳಿಗ್ಗೆಯಿಂದ ರಾತ್ರಿ ತನಕ ಹಲವು ಬಾರಿ ಭೇಟಿಯಾಗಿ ಪ್ರತಿಕ್ರಿಯೆ ಕೇಳುವಾಗ ಇದೇ ರೀತಿ ಒಬ್ಬರಾದ ಮೇಲೆ ಒಬ್ಬ ಪತ್ರಕರ್ತ ಪ್ರಶ್ನೆ ಕೇಳುವುದು ಸರ್ವೆ ಸಾಮಾನ್ಯ. ಆದರೆ ಇಷ್ಟು ದಿನ ಇಲ್ಲದ ಕೋಪ ಇಂದು ಸಿದ್ದರಾಮಯ್ಯ ಅವರನ್ನು ಏಕೆ ಕಾಡಿತು ಎಂಬ ಪ್ರಶ್ನೆ ಎದುರಾಯಿತು. ಲೋಕಾಯುಕ್ತ ತನಿಖೆಯ ಕೋಪವನ್ನು ಈ ರೀತಿ ಪ್ರದರ್ಶಿಸಿದರೆ ಎಂಬ ಅನುಮಾನ ಕಾಡಿತು.

ಲೋಕಾಯುಕ್ತ ಕಚೇರಿ ಬಳಿ ಹೆಜ್ಜೆ ಹೆಜ್ಜೆಗೂ ಪೊಲೀಸ್

ಮುಖ್ಯಮಂತ್ರಿ ಸಿದ್ದರಾಮಯ್ಯ ವಿಚಾರಣೆಗೆ ಹಾಜರಾದ ಹಿನ್ನೆಲೆ ಮೈಸೂರು ಲೋಕಾಯುಕ್ತ ಕಚೇರಿಯಲ್ಲಿ ಇಂದು ಪೊಲೀಸರ ಸರ್ಪಗಾವಲು ಹಾಕಲಾಗಿತ್ತು. ಲೋಕಾಯುಕ್ತ ಕಚೇರಿಯನ್ನು ಸಂಪರ್ಕಿಸುವ ರಸ್ತೆಯನ್ನು ಬಂದ್ ಮಾಡಲಾಗಿತ್ತು. ಲೋಕಾಯುಕ್ತ ಕಚೇರಿ ಬಳಿಯ ದಿವಾನ್ಸ್ ರಸ್ತೆ, ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿ ಸಾರ್ವಜನಿಕರ ಪ್ರವೇಶಕ್ಕೆ ತಡೆ ನೀಡಲಾಗಿತ್ತು. ಸಿದ್ದರಾಮಯ್ಯ ಆಗಮನದ ಹಿನ್ನಲೆ ಅವರ ಬೆಂಬಲಿಗರು ಸೇರುತ್ತಾರೆ ಹಾಗೂ ಬಿಜೆಪಿಯವರ ಗೋ ಬ್ಯಾಕ್ ಸಿಎಂ ಪ್ರತಿಭಟನೆ ಹಿನ್ನಲೆ ಲೋಕಾಯುಕ್ತ ಕಚೇರಿ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಡಿಸಿಪಿಗಳಾದ ಮುತ್ತುರಾಜ್ ಹಾಗ ಜಾಹ್ನವಿ ಸ್ಥಳದಲ್ಲೆ ಇದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಂಡರು. ಲೋಕಾ ಯುಕ್ತ ಕಚೇರಿ ಬಳಿ ಹೆಜ್ಜೆ ಹೆಜ್ಜೆಗೂ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾ ಗಿತ್ತು. ಇದರಿಂದ ಲೋಕಾಯುಕ್ತ ಕಚೇರಿ ಪಕ್ಕದಲ್ಲೆ ಇರುವ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕರ್ತವ್ಯಕ್ಕೆ ಹಾಜರಾಗಲು ತೊಂದರೆ ಉಂಟಾಯಿತು. ಪೊಲೀಸರಿಗೆ ತಮ್ಮ ಗುರುತಿನ ಚೀಟಿ ತೋರಿಸಿ ಕಚೇರಿ ಸೇರಲು ಪ್ರಯಾಸಪಟ್ಟರು. ಲೋಕಾಯುಕ್ತ ಕಚೇರಿ ಪಕ್ಕದಲ್ಲೆ ಇರುವ ಖಾಸಗಿ ಹೋಟೆಲ್ ಬಳಿ ಕೂಡ ಬ್ಯಾರಿಕೇಡ್ ಹಾಕಲಾಗಿತ್ತು. ಇದರಿಂದ ಗ್ರಾಹಕರಿಲ್ಲದೆ ಹೋಟೆಲ್ ಬಣಗುಟ್ಟುತ್ತಿತ್ತು.

ಪೊಲೀಸರ ಚಾಣಾಕ್ಷ ನಡೆ, ಕೊನೆಗೂ ಕೈಗೂಡದ ತಡೆ

ಲೋಕಾಯುಕ್ತ ಕಚೇರಿಯಿಂದ ಸಿದ್ದರಾಮಯ್ಯ ಹೊರಗೆ ಬರುವ ದೃಶ್ಯ ಚಿತ್ರೀಕರಿಸಲು ಮಾಧ್ಯಮದವರಿಗೆ ತಡೆಯೊಡ್ಡಲು ಪೊಲೀಸರು ಚಾಣಾಕ್ಷ ನಡೆ ಅನುಸರಿಸಿದರು. ಲೋಕಾಯುಕ್ತ ಕಚೇರಿಯಿಂದ ಸಿದ್ದರಾಮಯ್ಯ ಹೊರಗೆ ಬರುವ ದೃಶ್ಯ ಚಿತ್ರೀಕರಿಸಲು ಪತ್ರಿಕಾ ಛಾಯಾಗ್ರಾಹಕರು ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮದವರು ವಾಣಿಜ್ಯ ತೆರಿಗೆ ಇಲಾಖೆಯವರು ಕಾಂಪೌಂಡ್ ಬಳಿ ಕಾದು ನಿಂತಿದ್ದರು. ಆದರೆ ಪೊಲೀಸರು ಇದಕ್ಕೆ ತಡೆಯೊಡ್ಡಲು ಪೊಲೀಸ್ ಮಿನಿ ಬಸ್‌ನ್ನು ಅಡ್ಡಲಾಗಿ ನಿಲ್ಲಿಸಿದರು. ತರುವಾಯ ಪೊಲೀಸರು ಹಾಗೂ ಮಾಧ್ಯಮದವರಿಗೂ ವಾಗ್ವಾದ ವಾಯಿತು. ನಂತರ ಪೊಲೀಸ್ ಮಿನಿ ಬಸ್‌ನ್ನು ಅಲ್ಲಿಂದ ತೆರವುಗೊಳಿಸಲಾಯಿತು.

ಸುಳ್ಳು ಆರೋಪಕ್ಕೆ ಸತ್ಯ ಹೇಳಿದ್ದೇನೆ

ಇದನ್ನು ವಿರೋಧಿಸಿ ಬಿಜೆಪಿಯವರು ಪ್ರತಿಭಟನೆ ನಡೆಸಿದರೆ, ಲೋಕಾಯುಕ್ತ ವಿಚಾರಣೆಗೆ ಇವರು ವಿರುದ್ಧವಾಗಿದ್ದಾರೆ ಎಂಬ ಅರ್ಥವಲ್ಲವೆ. ಇದರಿಂದ ಬಿಜೆಪಿಯವರ ಆರೋಪ ಸುಳ್ಳು ಎಂಬುದು ಸ್ಪಷ್ಟವಾಗುತ್ತದೆಯಲ್ಲವೆ ಎಂದು ಕೇಸರಿ ನಾಯಕರಿಗೆ ತಿರುಗೇಟು ನೀಡಿದರು.

ಲೋಕಾಯುಕ್ತ ತನಿಖೆಯಲ್ಲಿ ನಂಬಿಕೆ ಇಲ್ಲದ ಕಾರಣ ಸಿಬಿಐ ತನಿಖೆ ನಡೆಸಬೇಕೆಂಬ ಬಿಜೆಪಿ ಆಗ್ರಹಕ್ಕೆ ಆಕ್ರೋಶ ವ್ಯಕ್ತಪಡಿಸಿದ ಸಿದ್ದರಾಮಯ್ಯ, ಸಿಬಿಐ ನಂತೆ ಲೋಕಾಯುಕ್ತ ಕೂಡ ಸ್ವತಂತ್ರ ಸಂಸ್ಥೆ. ಇದರಿಂದ ಲೋಕಾಯುಕ್ತದ ಮೇಲೆ ನಂಬಿಕೆ ಇಲ್ಲ ಎಂದಾದರೆ ಬಿಜೆಪಿಯವರಿಗೆ ಸಿಬಿಐ ಮೇಲೆ ಕೂಡ ನಂಬಿಕೆ ಇಲ್ಲ ಎಂದಾಗುತ್ತದೆ. ಲೋಕಾಯುಕ್ತದ ಬಗ್ಗೆ ನಂಬಿಕೆ ಇಲ್ಲದ ಬಿಜೆಪಿಯವರಿಗೆ ಕಾನೂನು ಮೇಲೆ ಗೌರವ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎಂದು ಕುಟುಕಿದರು. ಈ ತನಕ ಬಿಜೆಪಿಯವರು ಒಂದು ಪ್ರಕರಣವನ್ನಾದರೂ ಸಿಬಿಐಗೆ ಕೊಟ್ಟಿದ್ದಾರೆಯೇ ಎಂದು ಕೇಳಿದ ಸಿದ್ದರಾಮಯ್ಯ, ಬಿಜೆಪಿಯವರು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಬೇಕು ಎಂಬ ನಿಮಯ ಏನಿದೆ ಎಂದು ಕಿಡಿಕಾರಿದರು.

ಮುಡಾ ಪ್ರಕರಣದ ಬಗ್ಗೆ ಲೋಕಾಯುಕ್ತ ತನಿಖೆ ಆಗಬೇಕೆಂದು ರಾಜ್ಯಪಾಲರು ಸೂಚಿಸಿದ್ದರು, ಅದರಂತೆ ಈಗ ವಿಚಾರಣೆ ನಡೆಯುತ್ತಿದೆ. ಆದರೆ ಇದಕ್ಕೆ ವಿರೋಧ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ತಮಗೆ ಕಾನೂನುಬದ್ಧವಾಗಿಯೇ 14 ನಿವೇಶನ ನೀಡಲಾಗಿತ್ತು ಆದರೆ ಬಿಜೆಪಿ ಹಾಗೂ ಜೆಡಿಎಸ್ ಸುಳ್ಳು ಆರೋಪ ಮಾಡುತ್ತಿದೆ. ಈ ಹಿನ್ನೆಲೆ ನನ್ನ ಪತ್ನಿ ನಿವೇಶನಗಳನ್ನು ವಾಪಾಸು ನೀಡಿದ್ದಾರೆ. ತಪ್ಪು ಮಾಡಿದ ಕಾರಣಕ್ಕೆ ಅಥವಾ ಅಕ್ರಮವಾಗಿ ನಿವೇಶನ ಪಡೆಯಲಾಗಿದೆ ಎಂಬ ಕಾರಣಕ್ಕೆ ನಿವೇಶನ ವಾಪಾಸು ನೀಡಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಬಿತ್ತರವಾಗುತ್ತಿರುವ ಪ್ರಶ್ನಾವಳಿ ನಮ್ಮದಲ್ಲ

ಹೇಳಿಕೆಯನ್ನು ವಿಡಿಯೋ ರೆಕಾರ್ಡ್ ಮಾಡಿಕೊಳ್ಳಲಾಗಿದೆ. ವಿಚಾರಣೆಯ ಬಹುತೇಕ ಹಂತಗಳು ಪೂರ್ಣಗೊಂಡಿವೆ. ಇನ್ನೂ ಹಲವಾರು ಕೆಲಸಗಳು ಬಾಕಿ ಉಳಿದಿದೆ. ಈ ಎಲ್ಲವನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಲಾಗುತ್ತದೆ ಎಂದರು. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲರ ಉತ್ತರಗಳನ್ನು ತಾಳೆ ಹಾಕಲಾಗುವುದು. ಒಂದೊಮ್ಮೆ ಏನಾದರು ಅನುಮಾನಗಳಿದ್ದಲ್ಲಿ ಮತ್ತೆ ನೋಟಿಸ್ ನೀಡಿ ವಿಚಾರಣೆಗೆ ಕರೆಯಲಾಗುತ್ತದೆ.

ಕೋರ್ಟ್‌ಗೆ ವರದಿ: ವಿಚಾರಣೆಯ ಅಂತಿಮ ವರದಿ ಸಲ್ಲಿಕೆಗೆ ಸಮಯಾವಕಾಶವಿದೆ. ಈ ನಡುವೆ ಪ್ರಕರಣದ ವಿಚಾರಣೆಯನ್ನು ಸಿಬಿಐಗೆ ವಹಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಮಂಗಳವಾರ ನಡೆಸಿದ ಹೈಕೋರ್ಟ್ ನ.25ರ ತನಕ ವಿಚಾರಣೆಯಲ್ಲಿನ ಪ್ರಗತಿ ಬಗ್ಗೆ ವರದಿ ಸಲ್ಲಿಸುವಂತೆ ಸೂಚಿಸಿದ್ದು, ಈ ಬಗ್ಗೆ ಲೋಕಾಯುಕ್ತ ಎಸ್ಪಿ ಉದೇಶ್‌ರನ್ನು ಪ್ರಶ್ನಿಸಿದಾಗ ಕೋರ್ಟ್ ಸೂಚನೆ ಪಾಲಿಸಲಾಗುವುದು ಎಂದರು.

'ಗೋ ಬ್ಯಾಕ್ ಮುಖ್ಯಮಂತ್ರಿ' ಪ್ರತಿಭಟನೆ

ಶಿವಕುಮಾರ್ ಪಕ್ಕದಲ್ಲಿ ನಿಂತಿದ್ದ ಪಕ್ಷದ ಪ್ರಚಾರ ವಾಹನವನ್ನು ಹತ್ತಿ, ಪೊಲೀಸರು ಕಾಂಗ್ರೆಸ್ ಪಕ್ಷದ ಏಜೆಂಟ್‌ಗಳಂತೆ ವರ್ತಿಸುತ್ತಿದ್ದಾರೆ. ನಾವು ಇಲ್ಲಿ ಯಾವುದೇ ಗಲಾಟೆ ಮಾಡುತ್ತಿಲ್ಲ. ಪ್ರತಿಭಟನೆ ಮಾಡಲು ಅವಕಾಶ ನೀಡದೇ ಬಂಧಿಸಲು ಮುಂದಾಗುತ್ತಿರುವುದು ಖಂಡನೀಯ ಎಂದು ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತ ಪಡಿಸಿದರು.

ಎಲ್.ನಾಗೇಂದ್ರ ಮಾತನಾಡಿ, ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿದ್ದುಕೊಂಡೇ ಸಿದ್ದರಾಮಯ್ಯ ತನಿಖೆ ಎದುರಿಸುತ್ತಿರುವುದು ದುರದೃಷ್ಟಕರ. ಇದೊಂದು ಕರಾಳ ದಿನ. ಪೊಲೀಸರು ಕಾಂಗ್ರೆಸ್ ಏಜೆಂಟ್‌ಗಳಂತೆ ವರ್ತಿಸುತ್ತಿದ್ದು, ನಮ್ಮ ಹೋರಾಟ ಹತ್ತಿಕ್ಕಲಾಗುತ್ತಿದೆ ಎಂದು ಕಿಡಿಕಾರಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ಮಾಡಲು ಎಲ್ಲರಿಗೂ ಅವಕಾಶವಿದೆ. ಇದು ಎಲ್ಲರ ಹಕ್ಕು. ಆದರೆ, ನಮಗೆ ಅವಕಾಶ ನೀಡದಿರುವುದು ಖಂಡನೀಯ. ಚುನಾವಣಾ ಸಂದರ್ಭದಲ್ಲಿ ಈ ರೀತಿ ಮಾಡುವುದು ಸರಿಯಲ್ಲ. ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟ ಮಾಡುತ್ತೇವೆ. ಲೋಕಾಯುಕ್ತ ನಡೆಯುತ್ತಿರುವ ವಿಚಾರಣೆ ಬಗ್ಗೆ ಯಾವುದೇ ನಂಬಿಕೆ ಇಲ್ಲ ಎಂದರು.

ಈ ನಡುವೆ ಪೊಲೀಸರು ಮತ್ತು ಬಿಜೆಪಿ ಕಾರ್ಯಕರ್ತರು, ಮುಖಂಡರ ನಡುವೆ ಮಾತಿನ ಚಕಮಕ್ಕಿ ನಡೆಯಿತು. ಈ ವೇಳೆ ಪೊಲೀಸರು ತಂಡ ಶಾಸಕ ಟಿ.ಎಸ್. ಶ್ರೀವತ್ಸ, ನಗರ ಬಿಜೆಪಿ ಅಧ್ಯಕ್ಷ ಎಲ್. ನಾಗೇಂದ್ರ, ಗ್ರಾಮಾಂತರ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ, ಮಾಜಿ ಮೇಯರ್ ಶಿವಕುಮಾರ್ ನಿಂತಿದ್ದ ಪಕ್ಷದ ವಾಹನವನ್ನೇ ಸಿಎಆರ್ ಮೈದಾನಕ್ಕೆ ಕಳುಹಿಸಿದರು. ನಂತರ ತಂಡ, ತಂಡವಾಗಿ ಬಂದ ಕಾರ್ಯಕರ್ತರನ್ನು ಪೊಲೀಸ್ ಬಸ್ ಮೂಲಕ ಬಂಧಿಸಿ ಬಿಡುಗಡೆಗೊಳಿಸಿದರು.

ಕೇಂದ್ರ ಸಂಪುಟದ ಅನುಮೋದನೆ

ಪಡೆಯುವ ಯಾವುದೇ ವಿದ್ಯಾರ್ಥಿಯು ಯಾವುದೇ ಮೇಲಾಧಾರ ಅಥವಾ ಗ್ಯಾರಂಟಿ ಇಲ್ಲದೆ ಬ್ಯಾಂಕ್ ಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲನ್ನು ಪಡೆಯಲು ಅರ್ಹರಾಗಿರುತ್ತಾರೆ. ದೇಶದ 860 ಅರ್ಹ ಅತ್ಯುನ್ನತ ಗುಣಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ಸಂಭಾವ್ಯ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಪ್ರಧಾನಮಂತ್ರಿ–ವಿದ್ಯಾಲಕ್ಷ್ಮಿ ಯೋಜನೆಯು ಒಳಗೊಂಡಿದೆ. ರೂ. 7.5 ಲಕ್ಷದವರೆಗಿನ ಸಾಲದ ಮೊತ್ತಕ್ಕೆ, ವಿದ್ಯಾರ್ಥಿಯು ಬಾಕಿ ಉಳಿದಿರುವ ಡೀಫಾಲ್ಟ್‌ನ ಶೇ.75 ರಷ್ಟು ಸಾಲ ಖಾತರಿಗೆ ಅರ್ಹರಾಗಿರುತ್ತಾರೆ. ಉನ್ನತ ಶಿಕ್ಷಣ ಇಲಾಖೆಯು ಪಿಎಂ–ವಿದ್ಯಾಲಕ್ಷ್ಮಿ ಎಂಬ ಏಕೀಕೃತ ಪೋರ್ಟಲ್ ಅನ್ನು ಹೊಂದಿದ್ದು, ಸರಳೀಕೃತ ಅಪ್ಲಿಕೇಶನ್ ಪ್ರಕ್ರಿಯೆಯ ಮೂಲಕ ವಿದ್ಯಾರ್ಥಿಗಳು ಶಿಕ್ಷಣ ಸಾಲ ಮತ್ತು ಬಡ್ಡಿ ರಿಯಾಯಿತಿಗೆ ಅರ್ಜಿ ಸಲ್ಲಿಸಲು ಮತ್ತು ಎಲ್ಲಾ ಬ್ಯಾಂಕ್‌ಗಳು ಬಳಸಲು ಸಾಧ್ಯವಾಗುತ್ತದೆ. ಇ–ವೋಚರ್ ಮತ್ತು ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ (ಸಿಬಿಡಿಸಿ) ವ್ಯಾಲೆಟ್ ಮೂಲಕ ಬಡ್ಡಿ ರಿಯಾಯಿತಿಯನ್ನು ಪಾವತಿಸಲಾಗುತ್ತದೆ. ಪಿಎಂ ವಿದ್ಯಾಲಕ್ಷ್ಮಿ ಯೋಜನೆಯು ಭಾರತದ ಯುವಜನರಿಗೆ ಗುಣಮಟ್ಟದ ಉನ್ನತ ಶಿಕ್ಷಣದ ಪ್ರವೇಶವನ್ನು ಗರಿಷ್ಠಗೊಳಿಸಲು ಶಿಕ್ಷಣ ಮತ್ತು ಆರ್ಥಿಕ ಒಳಗೊಳ್ಳುವಿಕೆಯ ಕ್ಷೇತ್ರದಲ್ಲಿ ಕಳೆದ ದಶಕದಲ್ಲಿ ಭಾರತ ಸರ್ಕಾರವು ಕೈಗೊಂಡ ಉಪಕ್ರಮಗಳ ವ್ಯಾಪ್ತಿಯನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಸಿದ್ದರಾಮಯ್ಯ ವಿಚಾರಣೆ ವೇಳೆ ಕಾನೂನು ಸಲಹೆಗಾರ ಪೊನ್ನಣ್ಣ ಹಾಜರಿದ್ದರೆ ಕಾನೂನುಬಾಹಿರ

ಮೈಸೂರು, ನ.6(ಬಿಎಲ್‌ಯು)– ಲೋಕಾಯುಕ್ತ ಎಸ್ಪಿ ವಿಚಾರಣೆ ನಡೆಸುವ ವೇಳೆ ಸಿದ್ದರಾಮಯ್ಯ ಜೊತೆ ಅವರ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಹಾಜರಿದ್ದರೆ ಅದು ಕಾನೂನು ಬಾಹಿರ ಎಂದು ದೂರುದಾರ **ಸ್ನೇಹಮಯಿ ಕೃಷ್ಣ** ಪ್ರತಿಕ್ರಿಯಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಲೋಕಾಯುಕ್ತ ವಿಚಾರಣೆಯಲ್ಲಿ ಭಾಗವಹಿಸಿದ್ದ ಬಗ್ಗೆ 'ಮೈಸೂರು ಮಿತ್ರ'ನಿಗೆ ಪತ್ರಿಕ್ರಿಯೆ ನೀಡಿದ ಸ್ನೇಹಮಯಿ ಕೃಷ್ಣ, ವಿಚಾರಣೆಯಲ್ಲಿ ಭಾಗಿಯಾಗಲು ಲೋಕಾಯುಕ್ತ ಕಚೇರಿಗೆ ಆರೋಪಿ ಜೊತೆ ಅವರ ಕಾನೂನು ಸಲಹೆಗಾರರು ಅಥವಾ ವಕೀಲರು ಹೋಗಲು ಅವಕಾಶ ವಿದೆ ಎಂದರು.



ಆದರೆ ಆರೋಪಿಯನ್ನು ವಿಚಾರಣೆ ಮಾಡುವಾಗ ವಕೀಲರು ಸೇರಿದಂತೆ ಅವರ ಕಡೆಯ ಯಾರೂ ಕೂಡ ಹಾಜರಿರಬಾರದು. ಇಂದು ಲೋಕಾಯುಕ್ತರು ವಿಚಾರಣೆ ನಡೆಸುವಾಗ ಸಿದ್ದರಾಮಯ್ಯ ಜೊತೆ ಅವರ ಕಾನೂನು ಸಲಹೆಗಾರ ಪೊನ್ನಣ್ಣ ಹಾಜರಿದ್ದರೆ ಅದು ಕಾನೂನು ಬಾಹಿರ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದರು.

ಲೋಕಾಯುಕ್ತರು ಸಿದ್ದರಾಮಯ್ಯ ಅವರಿಗೆ ಅನುಕೂಲಕರವಾಗುವ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದಿದ್ದಾರೆ ಎಂಬ ಅನುಮಾನವಿದೆ ಎಂದು ಆರೋಪಿಸಿದ್ದಾರೆ.

ಲೋಕಾಯುಕ್ತ ತನಿಖೆಯ ಸಮಯವನ್ನು ಸಿದ್ದರಾಮಯ್ಯ ನಿಗದಿ ಮಾಡಿದ ಆ ಸಮಯ ಒಂದೆರಡು ನಿಮಿಷ ವ್ಯತ್ಯಾಸವಾಗದಂತೆ ಲೋಕಾಯುಕ್ತರು ವಿಚಾರಣೆ ಮಾಡಿ ಮುಗಿಸಿದ್ದಾರೆ ಎಂದು ಆಪಾದಿಸಿದರು. ಮುಖ್ಯಮಂತ್ರಿಗಳ ಮೈಸೂರು ಭೇಟಿಯ ಪ್ರವಾಸ ಕಾರ್ಯಕ್ರಮದ ಪಟ್ಟಿಯಲ್ಲಿ ಇಂತಿಷ್ಟೆ ಸಮಯಕ್ಕೆ ಬಂದು ಹೋಗುವ ಬಗ್ಗೆ ಘಳಿಗೆಯನ್ನು ನಿಗದಿ ಮಾಡಲಾಗಿದೆ. ಅದರಂತೆ ಸಿದ್ದರಾಮಯ್ಯ ಲೋಕಾಯುಕ್ತ ಕಚೇರಿಗೆ ಬಂದು ವಿಚಾರಣೆಯಲ್ಲಿ ಪಾಲ್ಗೊಂಡು ಅವರು ನಿಗದಿಪಡಿಸಿದ ಸಮಯಕ್ಕೆ ವಿಚಾರಣೆ ಮುಗಿಸಿ ಅಲ್ಲಿಂದ ನಿರ್ಗಮಿಸಿದ್ದಾರೆ. ಇದನ್ನೆಲ್ಲಾ ನೋಡಿದರೆ ಸರಿಯಾದ ಹಾದಿಯಲ್ಲಿ ತನಿಖೆ ನಡೆದಿದೆ ಎಂಬುದು ಅನುಮಾನಕ್ಕೆ ಎಡೆ ಮಾಡಿದೆ ಎಂದು ಸ್ನೇಹಮಯಿ ಕೃಷ್ಣ ಹೇಳಿದರು.

ಈ ಹಿನ್ನೆಲೆ ಲೋಕಾಯುಕ್ತ ತನಿಖೆ ಬಗ್ಗೆ ನಂಬಿಕೆ ಇಲ್ಲದ ಕಾರಣ ಸಿಬಿಐ ನಿಂದಲೇ ತನಿಖೆ ನಡೆಸಬೇಕು ಎಂದು ನಾನು ಈಗಾಗಲೇ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ವಿಚಾರಣೆ ನಡೆಯುತ್ತಿದೆ. ನವೆಂಬರ್ 25 ರಂದು ಲೋಕಾಯುಕ್ತರು ಈ ತನಕ ನಡೆಸಿರುವ ತನಿಖಾ ವರದಿ ಸಲ್ಲಿಸಿದ ತರುವಾಯ ಅವರು ಯಾವ ರೀತಿ ತನಿಖೆ ನಡೆಸಿದ್ದಾರೆ ಎಂಬುವುದು ಖಾತ್ರಿಯಾಗುತ್ತದೆ ಎಂದು ತಿಳಿಸಿದರು. ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದಲ್ಲಿ ಕೆಸರೆಯ ಸರ್ವೆ ನಂಬರ್ 464 ರ 3.16 ಎಕರೆ ಭೂಮಿಯ ಸ್ಯಾಟಲೈಟ್ ಚಿತ್ರ ಸಂಗ್ರಹ ಮಾಡಿಲ್ಲ. ಇದು ಸೇರಿದಂತೆ ಲೋಕಾಯುಕ್ತ ಎಸ್ಪಿ ಉದೇಶ್ ಹಲವು ರೀತಿಯಲ್ಲಿ ಕರ್ತವ್ಯ ಲೋಪ ಎಸಗಿದ್ದಾರೆ. ಈ ಹಿನ್ನೆಲೆ ಲೋಕಾಯುಕ್ತ ಎಸ್ಪಿ ಉದೇಶ್ ತನಿಖೆ ನಡೆಸುವಾಗ ಉನ್ನತ ಅಧಿಕಾರಿಗಳು ಮಾರ್ಗದರ್ಶನ ನೀಡಬೇಕು ಎಂದು ಲೋಕಾಯುಕ್ತ ಇಲಾಖೆಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರಿಗೆ ಪತ್ರ ಬರೆದಿದ್ದೇನೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದರು.

ಸಚಿವ ಆರ್.ಬಿ.ತಿಮ್ಮಾಪುರ ವಿರುದ್ಧ ಗಂಭೀರ ಆರೋಪ ಕೇಳಿಬಂದರೂ ಚಕಾರವೆತ್ತುತ್ತಿಲ್ಲವೇಕೆ?

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಬಿ.ವೈ.ವಿಜಯೇಂದ್ರ ಪ್ರಶ್ನೆ




ಬೆಂಗಳೂರು, ನ.6– ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ಆಧಾರರಹಿತವಾಗಿ ಶೇ.40 ಕಮಿಷನ್ ಸರ್ಕಾರವೆಂದು ಆರೋಪಗಳ ಲೇಬಲ್ ಮಾಡಿದ್ದವರು ಈಗ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ವಿರುದ್ಧ ಗಂಭೀರ ಆರೋಪ ಕೇಳಿಬಂದಿದ್ದರೂ ಚಕಾರವೆತ್ತುತ್ತಿಲ್ಲವೇಕೆ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಪ್ರಶ್ನಿಸಿದ್ದಾರೆ.

ಅಬಕಾರಿ ಇಲಾಖೆಯ ಮದ್ಯದಂಗಡಿಗಳಿಂದ 'ಮಂತ್ಲಿ ಮನಿ' ಹೆಸರಿನಲ್ಲಿ ಲಂಚ ಪಡೆಯುತ್ತಿದೆ ಎಂಬ ಆರೋಪ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ವಿಜಯೇಂದ್ರ ಅವರು, ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದ್ದಾರೆ.

ರಾಜ್ಯದ 700 ಕೋಟಿ ರೂಗಳ ಮದ್ಯದ ಹಗರಣವೀಗ ಬಯಲಾಗಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಆಡಳಿತದಲ್ಲಿ ಭ್ರಷ್ಟಾಚಾರವು ಹವ್ಯಾಸವಲ್ಲ ಇದು ಕಾಂಗ್ರೆಸ್ ಪಕ್ಷದ ಜೀವನಶೈಲಿಯಾಗಿದೆ. 17 ತಿಂಗಳ ಭ್ರಷ್ಟಾಚಾರದ ಪುಟದಲ್ಲಿ ಹೊಸ ಅಧ್ಯಾಯವಿದು. ಸಚಿವ ಆರ್.ಬಿ.ತಿಮ್ಮಾಪುರ ಅವರ ಸುಲಿಗೆ ದಂಧೆಯನ್ನು ಕರ್ನಾಟಕ ಮದ್ಯ ವ್ಯಾಪಾರಿಗಳ ಸಂಘ ಬಹಿರಂಗ ಪಡಿಸಿದೆ. ತಿಮ್ಮಾಪುರ ವಿರುದ್ಧ ವಾರ್ಷಿಕ 180 ಕೋಟಿ ರೂ.ಗಳ ಹಫ್ತಾ ವಸೂಲಿ ಆರೋಪವು ಗಂಭೀರವಾಗಿ ಪರಿಗಣಿಸದಿರುವುದು ಅನುಮಾನ. ಇದೊಂದು 'ಪೇ ಟು ಪ್ಲೇ' ಸ್ಕೀಮ್ ಭಾಗವಾಗಿರಬಹುದು ಅಥವಾ ಚುನಾವಣೆ ಉದ್ದೇಶ ಎನ್ನುವ ಉದಾತ್ತತೆಯೂ ಇರಬಹುದು. ಇಲ್ಲವೇ ಪಾಲುದಾರಿಕೆಯಿರುವ ಸಾಧ್ಯತೆಯೂ ಇದೆ. ಅಬಕಾರಿ ಇಲಾಖೆಯಲ್ಲಿ ಪ್ರತಿಯೊಂದಕ್ಕೂ ಲಂಚದ ದರ ಪಟ್ಟಿ ನಿಗದಿಯಾಗಿದೆ. ಸಿಎಲ್7 ಬಾರ್ ಸನ್ನದು ಪಡೆಯಲು 30ರಿಂದ 70 ಲಕ್ಷ ರೂಗಳನ್ನು ನಿಯಮಬಾಹಿರವಾಗಿ ಒಂದು ಸಾವಿರ ಸನ್ನದು ನೀಡಲಾಗಿದೆ. ಇದೊಂದು ಫ್ರಾಂಚೈಸಿ ಭ್ರಷ್ಟಾಚಾರದ ಕಾರ್ಯಚರಣೆ, ವಾರ್ಷಿಕ 700 ಕೋಟಿ ರೂ. ವಸೂಲಿಯು ದಿಗ್ಭ್ರಮೆಗೊಳಿಸುವ ಉದ್ಯಮ ರೀತಿಯ ದಂಧೆಯಾಗಿದೆ.

ಸಿದ್ದರಾಮಯ್ಯನವರಿಗೆ ರಾಜಕೀಯ ಪ್ರಾಮಾಣಿಕತೆ ಇದ್ದರೆ ಕೂಡಲೇ ಸಚಿವ ತಿಮ್ಮಾಪುರ್ ಅವರನ್ನು ವಜಾಗೊಳಿಸಿ ಲೋಕಾಯುಕ್ತ ತನಿಖೆಗೆ ಆದೇಶಿಸಬೇಕು. ಆದರೆ, ಗಂಭೀರ ಭ್ರಷ್ಟಾಚಾರದ ಆರೋಪಗಳ ಹೊರತಾಗಿಯೂ ಅಧಿಕಾರಕ್ಕೆ ಅಂಟಿಕೊಂಡಿರುವ ಮುಖ್ಯಮಂತ್ರಿಯಿಂದ ಹೊಣೆಗಾರಿಕೆ ನಿಭಾಯಿಸುತ್ತಾರೆಂಬುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಎಂಬುದು ನಮಗೆ ಚೆನ್ನಾಗಿ ತಿಳಿದಿದೆ. ಮುಡಾ ಹಗರಣದಲ್ಲಿ ಆರೋಪಿ ನಂ.1 ಆಗಿರುವ ಸಿದ್ದರಾಮಯ್ಯ ಅವರಿಗೆ ಸಚಿವರ ವಜಾಗೊಳಿಸುವ ಅಥವಾ ತನಿಖೆಗೆ ಆದೇಶಿಸುವ ಧೈರ್ಯವಿಲ್ಲ. ರಾಜ್ಯದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಿಸುತ್ತಿಲ್ಲ, ಬದಲಿಗೆ ನಿಭಾಯಿಸಲಾಗುತ್ತಿದೆ. ಹಗರಣಗಳು ಹೊರಬಿದ್ದಾಗ ದಿವ್ಯ ಮೌನ ವಹಿಸಲಾಗುತ್ತದೆ. ಭ್ರಷ್ಟಾಚಾರದ ಬ್ರ್ಯಾಂಡ್ ಲಜ್ಜೆಗೆಟ್ಟ ಕಾಂಗ್ರೆಸ್ ಸರ್ಕಾರದಿಂದ ಕರ್ನಾಟಕದ ಜನರು ಶಾಪಗ್ರಸ್ತರಾಗಿದ್ದಾರೆ ಎಂದಿದ್ದಾರೆ.

ವೈಟ್‌ಬೋರ್ಡ್ ಟ್ಯಾಕ್ಸಿ ಚಾಲಕರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರವಾಸಿ ವಾಹನ ಚಾಲಕರು ಮಾಲೀಕರ ಪ್ರತಿಭಟನೆ



ಮೈಸೂರಿನಲ್ಲಿ ಅನಧಿಕೃತವಾಗಿ ವೈಟ್ ಬೋರ್ಡ್, ಎಲೆಕ್ಟ್ರಿಕ್ ವಾಹನಗಳನ್ನು ಟ್ಯಾಕ್ಸಿಗಳಾಗಿ ಓಡಿಸುತ್ತಿರುವವರ ವಿರುದ್ಧ ಕ್ರಮ ಜರುಗಿಸುವಂತೆ ಆಗ್ರಹಿಸಿ ಮೈಸೂರಿನ ಪ್ರಾದೇಶಿಕ ಸಾರಿಗೆ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ನ.6(ಜಿಎ)–ಮೈಸೂರಲ್ಲಿ ಅನಧಿಕೃತವಾಗಿ ವೈಟ್ ಬೋರ್ಡ್, ಎಲೆಕ್ಟ್ರಿಕ್ ವಾಹನಗಳನ್ನು ಟ್ಯಾಕ್ಸಿಗಳಾಗಿ ಓಡಿಸುತ್ತಿರುವವರ ವಿರುದ್ಧ ಕ್ರಮ ಜರುಗಿಸಿ ಜಿಲ್ಲಾ ಪ್ರವಾಸಿ ವಾಹನ ಚಾಲಕರಿಗೆ ನ್ಯಾಯ ಒದಗಿಸಬೇಕೆಂದು ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರ ಮತ್ತು ಮಾಲೀಕರ ಯೋಗ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬಲ್ಲಾಳ್ ವೃತ್ತದ ಬಳಿ ಇರುವ ಪ್ರಾದೇಶಿಕ ಸಾರಿಗೆ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಸಂಘದ ಅಧ್ಯಕ್ಷ ಎಸ್.ನಾಗರಾಜ್ ಮಾತನಾಡಿ, ಅಕ್ರಮವಾಗಿ ವೈಟ್ ಬೋರ್ಡ್ ಕಾರುಗಳ ಬಾಡಿಗೆಗೆ ಕೊಡುವ ಖಾಸಗಿ ಸಂಸ್ಥೆಗಳ ಮೇಲೆ ಮಂಗಳವಾರ ದಾಳಿ ನಡೆಸಿ, ಆರ್‌ಟಿಓ ಅಧಿಕಾರಿಗಳಿಗೆ ದೂರು ಕೊಟ್ಟ ಬೆನ್ನಲ್ಲೇ ಹಲವು ಕಾರುಗಳನ್ನು ವಶಪಡಿಸಿಕೊಂಡರು. ಆದರೆ, ವೈಟ್ ಕಾರು ಮಾಲೀಕರು ರಾತ್ರೋರಾತ್ರಿ ಕಾರುಗಳನ್ನು ಬೇರೆಡೆ ಸಾಗಿಸಿದ್ದು, ಇದು ಆರ್‌ಟಿಓ ಅಧಿಕಾರಿಗಳ ಶಾಮೀಲು ಎಂದು ಆರೋಪಿಸಿದರು. ಮಂಗಳವಾರ ರಾತ್ರಿ 7ಕ್ಕೂ ಹೆಚ್ಚು ಕಾರುಗಳ ಸೀಜ್ ಮಾಡಲಾಗಿತ್ತು. ಅದರಲ್ಲಿ 3 ಕಾರುಗಳನ್ನು ಆರ್‌ಟಿಓ ಕಚೇರಿ ಬಳಿ ತಂದು ಉಳಿದ 4 ಕಾರುಗಳನ್ನು ಅಲ್ಲೇ ಬಿಟ್ಟು ಬರಲಾಯಿತು. ಆದರೆ ವ್ಹೀಲ್ ಲಾಕರ್ ಹಾಕಿದ್ದರೂ ಚಕ್ರ ಕಳಚಿ ಬೇರೆ ಚಕ್ರ ಅಳವಡಿಸಿ ಬೇರೆಡೆಗೆ ಕಾರುಗಳ ಎತ್ತೋಯ್ದಿದ್ದಾರೆ ಎಂದರು.

ವೈಟ್ ಬೋರ್ಡ್ ಹೊಂದಿರುವ ವಾಹನಗಳನ್ನು ಕಮರ್ಷಿಯಲ್ ಆಗಿ ಬಳಸಿಕೊಂಡು, ಕಾನೂನುಬಾಹಿರವಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರು ಸರ್ಕಾರದಿಂದ ಲೈಸೆನ್ಸ್ (ಪರವಾನಗಿ) ಪಡೆದಿದ್ದಾರೊ ಇಲ್ಲವೋ ಎಂದು ಪರಿಶೀಲಿಸಿ, ಅವರು ಲೈಸೆನ್ಸ್ ಪಡೆದಿರದಿದ್ದಲ್ಲಿ ತಕ್ಷಣ ಅವರ ಸಂಸ್ಥೆಯನ್ನು ರದ್ದುಗೊಳಿಸಬೇಕೆಂದು ಆರ್‌ಟಿಓ ಅಧಿಕಾರಿಗಳಿಗೆ ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರ ಮತ್ತು ಮಾಲೀಕರ ಯೋಗ ಕ್ಷೇಮಾಭಿವೃದ್ಧಿ ಸಂಘದವರು ಮನವಿ ಮಾಡಿದರು.

ಈ ವೇಳೆ ಆರ್‌ಟಿಓ ಅಧಿಕಾರಿ ಮಾತನಾಡಿ, ವೈಟ್ ಬೋರ್ಡ್ ಮಾಲೀಕರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುತ್ತದೆ. ಪಾರದರ್ಶಕ ತನಿಖೆ ಮಾಡುತ್ತೇವೆ. ಸಂಘದವರು ನಮ್ಮ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದು, ಸತ್ಯಕ್ಕೆ ದೂರವಾದದು ಎಂದರು.

ಪ್ರತಿಭಟನೆಯಲ್ಲಿ ಸಂಘದ ಉಪಾಧ್ಯಕ್ಷ ಆರ್.ಪ್ರಭಾಕರ್, ಕಾರ್ಯದರ್ಶಿ ಕೆ.ಟಿ.ದಿವಾಕರ್, ಗಿರೀಶ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಸುತ್ತೂರು ಜಾತ್ರೆಯಲ್ಲಿ ನಾಟಕ ಪ್ರದರ್ಶನ

ಮೈಸೂರು, ನ.6–ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವು 2025ರ ಜ.26 ರಿಂದ 31ರವರೆಗೆ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜರುಗಲಿದೆ. ಇದರ ಅಂಗವಾಗಿ ಪೌರಾಣಿಕ, ಐತಿಹಾಸಿಕ, ಶರಣರ ಜೀವನ ಸಂದೇಶ ಕುರಿತ ನಾಟಕಗಳ ಪ್ರದರ್ಶನಕ್ಕೆ ಅವಕಾಶ ಇರುತ್ತದೆ. ಆಯ್ಕೆಯಾದ ತಂಡಗಳಿಗೆ ರಂಗ ಸಜ್ಜಿಕೆ ವ್ಯವಸ್ಥೆ ಮಾಡಿ, ಸ್ಮರಣಾ ಫಲಕ, ಪ್ರಶಂಸಾ ಪತ್ರ ನೀಡಲಾಗುವುದು. ಆಸಕ್ತರು ನ.30ರೊಳಗೆ ಅರ್ಜಿ ಸಲ್ಲಿಸಬೇಕು. ಆಸಕ್ತರು ಹೆಚ್ಚಿನ ವಿವರಗಳಿಗೆ ಎಂ.ಗಂಗಾಧರ, ಮೊ. 74836 28380 ಸಂಪರ್ಕಿಸಬಹುದು.

ಪದಾಧಿಕಾರಿಗಳ ಆಯ್ಕೆ

ಮೈಸೂರು, ನ.6–ಮೈಸೂರು ನಗರ ಮತ್ತು ತಾಲೂಕು ಪತ್ರ ಬರಹಗಾರರ ಒಕ್ಕೂಟದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ನಿಸಾರ್ ಅಹಮದ್‌ಖಾನ್, ಪದಾಧಿಕಾರಿಗಳಾಗಿ ಎಂ.ಎಸ್.ಧನಂಜಯ, ಕೆ.ಆರ್.ಸತ್ಯನಾರಾಯಣ, ಎಸ್.ಎನ್. ದೇವರಾಜ್, ಎ.ಎಸ್.ನಾಗಭೂಷಣ ಆರಾಧ್ಯ ಕೆ.ಆರ್.ಉದಯಕುಮಾರ್, ಎಂ. ಗಣೇಶ್, ಜಿ.ಮಹದೇವ, ಬಿ.ಕುಮಾರ್, ಎಸ್.ಫಣಿರಾಜ್, ಎಸ್.ಚಂದ್ರಶೇಖರ್, ಎನ್.ದಿನೇಶ್‌ಕುಮಾರ್, ಎಂ.ಎಸ್.ನರಸಿಂಹಮೂರ್ತಿ, ಎಸ್.ಎಸ್.ವೇಣು ಮತ್ತು ಜೆ.ಜಯಲಕ್ಷ್ಮಿ ಆಯ್ಕೆಯಾದರು.

ನಾಳೆ ಮಹಿಳಾ ಸಾಧಕರಿಗೆ ಪ್ರಶಸ್ತಿ ಪ್ರದಾನ

ಮೈಸೂರು, ನ. 6– ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ ವತಿಯಿಂದ 3ನೇ ವಾರ್ಷಿಕೋತ್ಸವದ ಅಂಗವಾಗಿ ನ.8 ರಂದು ಬೆಳಗ್ಗೆ 11ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಂಸ್ಥೆ ಸಭಾಂಗಣದಲ್ಲಿ 5 ಮಂದಿ ಮಹಿಳಾ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ.

ಜಯಚಾಮರಾಜೇಂದ್ರ ಒಡೆಯರ್ ಅವರ ಪುತ್ರಿ ಕಾಮಾಕ್ಷಿದೇವಿ ಒಡೆಯರ್ ಕಾರ್ಯಕ್ರಮ ಉದ್ಘಾಟಿಸುವರು. ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಅಧ್ಯಕ್ಷತೆ ವಹಿಸುವರು. ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್.ಅರಸ್ ವಿಶೇಷ ಉಪನ್ಯಾಸ ನೀಡುವರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕಿ ಡಾ.ಎಂ.ಸುಶೀಲಾ ಅರಸ್, ಮಹಾರಾಣಿ ಲಕ್ಷ್ಮಮ್ಮಣ್ಣಿ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು. ಸಾಧಕ ಮಹಿಳೆಯರಿಗೆ ಕರ್ನಾಟಕ ಅರಸು ಮಹಾ ಮಂಡಳಿ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್ ಪ್ರಶಸ್ತಿ ಪ್ರದಾನ ಮಾಡುವರು. ಬೆಂಗಳೂರಿನ ಜಿ.ಟಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಅಂಡ್ ಸ್ಟಡೀಸ್ ಕಾಲೇಜಿನ ಸಹ ಪ್ರಾಧ್ಯಾಪಕ ಸತ್ಯಪ್ರಕಾಶ್ ಪಾಲ್ಗೊಳ್ಳುವರು.

ಆರ್‌ಬಿಸಿ ಮೈಸೂರು ಸಂಸ್ಥಾಪಕ ಅಧ್ಯಕ್ಷರಾಗಿ ಡಾ.ಮುಳ್ಳೂರು ನಂಜುಂಡಸ್ವಾಮಿ ಅಧಿಕಾರ ಸ್ವೀಕಾರ



ರೋಟರಿ ಬಿಜಿನೆಸ್ ಕಾನ್‌ಕ್ಲೇವ್ ಮೈಸೂರು ಘಟಕದ ಸಂಸ್ಥಾಪಕ ಅಧ್ಯಕ್ಷರಾಗಿ ರೊಟೇರಿಯನ್ ಡಾ. ಮುಳ್ಳೂರು ನಂಜುಂಡಸ್ವಾಮಿ ಅಧಿಕಾರ ಸ್ವೀಕರಿಸಿದರು.

ಮೈಸೂರು, ನ.6–ರೋಟರಿ ಬಿಜಿನೆಸ್ ಕಾನ್‌ಕ್ಲೇವ್ (ಆರ್‌ಬಿಸಿ) ಮೈಸೂರು ಘಟಕದ ಸಂಸ್ಥಾಪಕ ಅಧ್ಯಕ್ಷರಾಗಿ ರೊಟೇರಿಯನ್ ಡಾ.ಮುಳ್ಳೂರು ನಂಜುಂಡಸ್ವಾಮಿ ಅಧಿಕಾರ ಸ್ವೀಕರಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಆರ್‌ಬಿಸಿ ಮೈಸೂರು ಘಟಕದ ಉದ್ಘಾಟನೆ ಹಾಗೂ ಪದಗ್ರಹಣ ಸಮಾರಂಭದಲ್ಲಿ ರೋಟರಿ ಅಂತರರಾಷ್ಟ್ರೀಯ ಜಿಲ್ಲೆ–3181ರ ಮಾಜಿ ಜಿಲ್ಲಾ ಗವರ್ನರ್, ಮೇಜರ್ ಡೋನರ್, ರೊಟೇರಿಯನ್ ಎನ್.ಪ್ರಕಾಶ್ ಕಾರಂತ್ ಅವರು ಆರ್‌ಬಿಸಿಯ ಲಾಂಛನವಿರುವ ಕಾಲರ್ ಮತ್ತು ಪಿನ್ನು ಹಾಕುವ ಮೂಲಕ ಪದಗ್ರಹಣ ನೆರವೇರಿಸಿದರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ಡಾ.ಮುಳ್ಳೂರು ನಂಜುಂಡಸ್ವಾಮಿ, ರೋಟರಿ ಅಂತರರಾಷ್ಟ್ರೀಯ ಜಿಲ್ಲೆ 3181ರಲ್ಲಿ ರುವ ಹಲವಾರು ಕ್ಲಬ್‌ಗಳ ಸದಸ್ಯರನ್ನು ಮಾತ್ರ ಆರ್‌ಬಿಸಿಗೆ ಸೇರಿಸಲಾಗಿದೆ. ಇಲ್ಲಿ ಉದ್ಯಮ, ನಾಯಕತ್ವ ಮತ್ತು ಸೇವೆಗೆ ಒತ್ತು ನೀಡಲಾಗುವುದು ಎಂದರು.

ಪದಾಧಿಕಾರಿಗಳಾಗಿ ಸ್ವಾಮಿ ಉಪಾಧ್ಯಕ್ಷ, ಭರತ್, ಕಾರ್ಯದರ್ಶಿ ಹರೀಶ್, ಸಹ ಕಾರ್ಯದರ್ಶಿ ಸಂತೋಷ್ ಎಸ್. ಗೌಡ ಖಜಾಂಚಿ, ಎಲ್.ಸಿ.ಧರ್ಮಾನಂದ, ಎಸ್.ನಾಗೇಶ್, ಬಿ.ಶ್ರೀನಾಥ್, ಎಸ್. ಯದುಕೃಷ್ಣ, ಎಸ್.ಶಿವಕುಮಾರ್, ವಿ.ಮಂಜುನಾಥ ನಿರ್ದೇಶಕರಾಗಿ ನೇಮಕಗೊಂಡರು. ಮಾಜಿ ಸಹಾಯಕ ಗವರ್ನರ್‌ಗಳು, ವಲಯ ಸೇನಾನಿಗಳು, ವಿವಿಧ ರೋಟರಿ ಕ್ಲಬ್‌ಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸದಸ್ಯರು ಆರ್‌ಬಿಸಿಗೆ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಡಾ.ಮುಳ್ಳೂರು ನಂಜುಂಡಸ್ವಾಮಿ ಅವರ ಪತ್ನಿ ಬಿ.ಎಸ್.ಅಶ್ವಿನಿ, ರೋಟರಿ ಮಾಜಿ ಸಹಾಯಕ ಗವರ್ನರ್‌ಗಳಾದ ಯಶಸ್ವಿನಿ ಸೋಮಶೇಖರ್, ವಾಸುದೇವ್, ನಂಜಯ್ಯ, ಕಾರ್ಯದರ್ಶಿ ಭರತ್ ಎನ್. ವಲಯ ಸೇನಾನಿ ಜಗದೀಶ್ ಉಪಸ್ಥಿತರಿದ್ದರು.

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು,ನ.6– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ನಂತರದ ಪಿಯುಸಿ ಮತ್ತು ಸಮಾನಂತರ (PUC & Equivalent Courses) ಮತ್ತು ಸಾಮಾನ್ಯ ಪದವಿ ಕೋರ್ಸ್‌ಗಳಲ್ಲಿ (Integrated Degree Courses) ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2024–25ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ (ಊಟ ಮತ್ತು ವಸತಿ ಸಹಾಯ ಯೋಜನೆ) ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ನ.10ರವರೆಗೆ ವಿಸ್ತರಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು https://ssp.postmatric.karnataka.gov.in/ ಮೂಲಕ ಸಲ್ಲಿಸಬೇಕು. ಕಾರ್ಯಕ್ರಮಗಳ ವಿವರ ಅರ್ಹತೆ ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ https://bcwd.karnataka.gov.in ಅಥವಾ ಸಹಾಯವಾಣಿ ಸಂ: 8050770005, ಇಮೇಲ್ bcwdhelpline@gmail.com ಅಥವಾ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ದೂ.ಸಂ: 1902, ಇಮೇಲ್ postmatrichelp @karnataka.gov.in ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ.9ರಂದು ಪ್ರೊ. ಸಾ.ಕೃ ರಾಮಚಂದ್ರರಾವ್ ಬೌದ್ಧ ಸಾಹಿತ್ಯ ಕೃತಿಗಳು ಕುರಿತು ವಿಚಾರ ಸಂಕಿರಣ

ಮೈಸೂರು, ನ.6–ಎನ್‌ಆರ್ ಕಾಲೋನಿಯ ಬಿಎಂಶ್ರೀ ಪ್ರತಿಷ್ಠಾನದ ಸಭಾಂಗಣದಲ್ಲಿ ನ.9ರಂದು ಬೆಳಿಗ್ಗೆ 10 ಗಂಟೆಗೆ ಪ್ರೊ.ಸಾಕೃ.ರಾಮಚಂದ್ರರಾವ್ ಬೌದ್ಧ ಸಾಹಿತ್ಯ ಕೃತಿಗಳು ಕುರಿತ ಸಂಕಿರಣವನ್ನು ಆಯೋಜಿಸಲಾಗಿದೆ. ಕಲ್ಬುರ್ಗಿಯ ಪಾಲಿ ಇನ್‌ಸ್ಟಿಟ್ಯೂಟ್‌ನ ಬಿಎಂಶ್ರೀ ಪ್ರತಿಷ್ಠಾನ ಮತ್ತು ಪ್ರೊ.ಸಾಕೃ.ರಾಮಚಂದ್ರ ಮೆಮೋರಿಯಲ್ ಟ್ರಸ್ಟ್‌ನ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿರುವ ವಿಚಾರ ಸಂಕಿರಣವನ್ನು ವಿದ್ವಾಂಸ ಡಾ.ಆರ್.ಗಣೇಶ್ ಉದ್ಘಾಟಿಸಲಿದ್ದಾರೆ. ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಡಾ.ಬೈರಮಂಗಲ ರಾಮೇಗೌಡ ಅಧ್ಯಕ್ಷತೆ ವಹಿಸುವರು. ಪಾಲಿ ಇನ್‌ಸ್ಟಿಟ್ಯೂಟ್ ಅಧ್ಯಕ್ಷ ರಾಹುಲ್ ಎಂ.ಖರ್ಗೆ ಮುಖ್ಯ ಅತಿಥಿಗಳಾಗಿ ಆಗಮಿಸುವರು. ನಂತರ ಗೋಷ್ಠಿಯಲ್ಲಿ ಬೌದ್ಧ ವಿದ್ವಾಂಸ ಮೊಳಕಾಲ್ಮೂರು ಶ್ರೀನಿವಾಸ ಮೂರ್ತಿ, ಸಂಸ್ಕೃತಿ ಚಿಂತಕ ಡಾ.ಜಿ.ಬಿ.ಹರೀಶ್, ಡಾ.ಪೂರ್ಣಿಮಾ ಅವರು ವಿಚಾರ ಮಂಡಿಸುವರು ಎಂದು ಪ್ರಕಟಣೆ ತಿಳಿಸಿದೆ.

ಭೂಮಿಗಿರಿ ಪ್ರಕಾಶನದಿಂದ ಕನ್ನಡ ರಾಜ್ಯೋತ್ಸವ ಆಚರಣೆ



ಭೂಮಿಗಿರಿ ಪ್ರಕಾಶನದಿಂದ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಮೈಸೂರು ಜಿಲ್ಲಾ ವಾಣಿಜ್ಯ–ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಎನ್.ಬೆಟ್ಟೇಗೌಡ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಎಸ್‌ಟಿ ವಿಭಾಗದ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಮಾಜಿ ಸಿಂಡಿಕೇಟ್ ಸದಸ್ಯ ಈ.ಸಿ.ನಿಂಗರಾಜ್‌ಗೌಡ, ಕಸಾಪ ಮಾಜಿ ಜಿಲ್ಲಾಧ್ಯಕ್ಷ ವೈ.ಡಿ.ರಾಜಣ್ಣ, ಚಂದ್ರಶೇಖರ್, ರಘುರಾಂ ವಾಜಪೇಯಿ ಉಪಸ್ಥಿತರಿದ್ದರು.

ಚರ್ಮರೋಗ ಉಚಿತ ತಪಾಸಣೆ ಶಿಬಿರ

ಮೈಸೂರು, ನ. 6–ಮೈಸೂರಿನ ಸುಯೋಗ್ ಆಸ್ಪತ್ರೆಯಲ್ಲಿ ನ.6ರಿಂದ 10ರವರೆಗೆ ಚರ್ಮರೋಗ ಸಮಸ್ಯೆಗಳಿಗೆ ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಚರ್ಮದಲ್ಲಿ ಕಪ್ಪುಕಲೆ, ಮೊಡವೆ, ಕೂದಲು ಉದುರುವಿಕೆ, ತಲೆ ಹೊಟ್ಟು, ಅಲರ್ಜಿ, ಉಗುರಿನ ಸಮಸ್ಯೆ, ಶಿಲೀಂಧ್ರ ಸೋಂಕುಗಳು ಮುಂತಾದ ಸಮಸ್ಯೆಗಳಿಂದ ಬಳಲುತ್ತಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದಾಗಿದೆ.

ಇಂದಿನಿಂದ ಕಿರುರಂಗಮಂದಿರದಲ್ಲಿ ರಂಗವಲ್ಲಿ ರಂಗ ಸಂಭ್ರಮ


ರಾಮೇಶ್ವರಿ ವರ್ಮಾ


ಇಸ್ಲಾಉದ್ದೀನ್


ಸತೀಶ್ ತಿಪಟೂರು


ಶಿವೋಹಂ ನಾಟಕ


ನಾಟ್ಯದೇವ ಚರಿತೆ ನಾಟಕ


ಎ ಫ್ರೆಂಡ್ ಬಿಯಾಂಡ್ ದಿ ಫೆನ್ಸ್ ನಾಟಕ.

ಮೈಸೂರು, ನ.6–ಮೈಸೂರಿನ ರಂಗವಲ್ಲಿ ರಂಗ ತಂಡವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶನಾಲಯ, ಬೆಂಗಳೂರು ಮತ್ತು ವಿಜಯ ವಿಠ್ಠಲ ಶಿಕ್ಷಣ ಸಂಸ್ಥೆಗಳು ಸಹಯೋಗದಲ್ಲಿ ನಾಲ್ಕು ದಿನಗಳ ರಂಗಹಬ್ಬ 'ರಂಗವಲ್ಲಿ ರಂಗ ಸಂಭ್ರಮ–2024' ಅನ್ನು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ನ.7ರಿಂದ 10ರವರೆಗೆ ಆಯೋಜಿಸಲಾಗಿದೆ.



ನ.7ರಂದು ಸಂಜೆ 6 ಗಂಟೆಗೆ ರಂಗ ಸಂಭ್ರಮವನ್ನು ಹಿರಿಯ ರಂಗಭೂಮಿ ಕಲಾವಿದೆ ರಾಮೇಶ್ವರಿ ವರ್ಮಾ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಚಲನಚಿತ್ರ ನಿರ್ದೇಶಕ ಎನ್.ಎಸ್.ಇಸ್ಲಾಉದ್ದೀನ್ ಭಾಗವಹಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಮತ್ತು ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಗೌರವ ಅತಿಥಿಗಳಾಗಿ ಭಾಗವಹಿಸುವರು. ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಅಧ್ಯಕ್ಷತೆ ವಹಿಸಲಿದ್ದಾರೆ. ರಂಗವಲ್ಲಿ ಸಂಸ್ಥಾಪಕ ಸದಸ್ಯ ಮತ್ತು ಟ್ರಸ್ಟಿ ಹೆಚ್.ಆರ್.ರವಿಪ್ರಸಾದ್ ಮತ್ತು ಖಜಾಂಚಿ ಮತ್ತು ಸಂಭ್ರಮ ಕಮಿಟಿ ಸಂಚಾಲಕ ಮಂಜುನಾಥ್ ಶಾಸ್ತ್ರಿ ಉಪಸ್ಥಿತರಿರುವರು.

ಉದ್ಘಾಟನಾ ಕಾರ್ಯಕ್ರಮದ ನಂತರ ಸಂಜೆ 6.30ಕ್ಕೆ ರಾಜ್ಯ ಪ್ರಶಸ್ತಿ ವಿಜೇತರಾದ ವೈ.ಎಂ.ಪುಟ್ಟಣ್ಣಯ್ಯ ಮತ್ತು ತಂಡದಿಂದ 'ರಂಗ ಸಂಗೀತಾಂಜಲಿ' ರಂಗಗೀತೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ನಾಲ್ಕು ದಿನಗಳ ರಂಗ ಸಂಭ್ರಮದಲ್ಲಿ ಬೆಂಗಳೂರು ಮತ್ತು ಮಂಗಳೂರು ರಂಗ ತಂಡಗಳಿಂದ ನಾಟಕ ಪ್ರದರ್ಶನ, ಮೈಸೂರು ಪೋಲೀಸ್ ಬ್ಯಾಂಡ್‌ನಿಂದ ಸಾಂಸ್ಕೃತಿಕ ಕಾರ್ಯ ಕ್ರಮಗಳು, ನಿತಿನ್ ರಾಜಾರಾಂ ಶಾಸ್ತ್ರಿ ಮತ್ತು ಭಾರತ್ ಬ್ರಾಸ್ ಬ್ಯಾಂಡ್‌ನಿಂದ ಲಘು ಸಂಗೀತ ಕಾರ್ಯಕ್ರಮವಿದೆ.

ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಉಚಿತ ಪ್ರವೇಶ. ನಾಟಕ ಪ್ರದರ್ಶನಕ್ಕೆ ಪ್ರವೇಶ ದರ ರೂ. 100 ನಿಗದಿಪಡಿಸಲಾಗಿದೆ.

ನವೆಂಬರ್ 7: ಸಂಜೆ 6.30ಕ್ಕೆ ರಾಜ್ಯ ಪ್ರಶಸ್ತಿ ವಿಜೇತರಾದ ವೈ.ಎಂ. ಪುಟ್ಟಣ್ಣಯ್ಯ ಮತ್ತು ತಂಡದಿಂದ 'ರಂಗ ಸಂಗೀತಾಂಜಲಿ' ರಂಗಗೀತೆ ಕಾರ್ಯಕ್ರಮ.



ಮೈಸೂರು ಪೊಲೀಸ್ ಬ್ಯಾಂಡ್‌ನಿಂದ ಮಾಸ್ ಬ್ಯಾಂಡ್

ನವೆಂಬರ್ 8: ಸಂಜೆ 5.30ಕ್ಕೆ ಮೈಸೂರು ಪೊಲೀಸ್ ಬ್ಯಾಂಡ್‌ನಿಂದ ಮಾಸ್ ಬ್ಯಾಂಡ್, ಸಂಜೆ 7ಕ್ಕೆ ಬೆಂಗಳೂರಿನ ಸಂಚಯ ತಂಡದಿಂದ ನಾಟ್ಯದೇವ ಚರಿತೆ ನಾಟಕ ಪ್ರದರ್ಶನ, ಮೂಲ: ಮೂಲಿಎರೆ, ಕನ್ನಡಕ್ಕೆ ರೂಪಾಂತರ: ಕೃಷ್ಣ ಹೆಬ್ಬಾಲೆ ಮತ್ತು ಹೇಮಂತ್‌ಕುಮಾರ್, ನಿರ್ದೇಶನ: ಪೃಥ್ವಿ ವೇಣುಗೋಪಾಲ್.

ನವೆಂಬರ್ 9 : ಸಂಜೆ 5.30ಕ್ಕೆ ಮೈಸೂರಿನ ನಿತಿನ್ ರಾಜಾರಾಂ ಶಾಸ್ತ್ರಿ ಮತ್ತು ತಂಡದಿಂದ ಸುಗಮ ಸಂಗೀತ, ಸಂಜೆ 7ಕ್ಕೆ ಮಂಗಳೂರು ಕಲಾಭಿರಂಗ ತಂಡದಿಂದ ಎ ಫ್ರೆಂಡ್ ಬಿಯಾಂಡ್ ದಿ ಫೆನ್ಸ್ ನಾಟಕ ಪ್ರದರ್ಶನ, ವಿನ್ಯಾಸ ಮತ್ತು ನಿರ್ದೇಶನ: ಶ್ರವಣ್ ಹೆಗ್ಗೋಡು.

ನವೆಂಬರ್ 10: ಸಂಜೆ 4.30ಕ್ಕೆ ಗಾಂಧಿನಗರದ ಭಾರತ್ ಬ್ರಾಸ್ ಬ್ಯಾಂಡ್‌ನಿಂದ ಬ್ರಾಸ್ ಬ್ಯಾಂಡ್ ಪ್ರದರ್ಶನ, ಸಂಜೆ 7ಕ್ಕೆ ಬೆಂಗಳೂರಿನ ಕ್ರೋನಿಕಲ್ಸ್ ಆಫ್ ಇಂಡಿಯಾ ತಂಡದಿಂದ ಶಿವೋಹಂ ನಾಟಕ ಪ್ರದರ್ಶನ, ವಿನ್ಯಾಸ, ಸಂಗೀತ ಮತ್ತು ನಿರ್ದೇಶನ: ಗಣೇಶ್ ಮಂದಾರ್ತಿ. ಹೆಚ್ಚಿನ ಮಾಹಿತಿಗೆ ರಂಗವಲ್ಲಿ ಕಾರ್ಯದರ್ಶಿ ಬಿ.ರಾಜೇಶ್, ಮೊ. 94488–71815; ಮಂಜುನಾಥ್ ಶಾಸ್ತ್ರಿ, ಮೊ. 99016 26701, ಹೆಚ್.ಆರ್. ರವಿಪ್ರಸಾದ್, ಮೊ. 99646 56482 ಸಂಪರ್ಕಿಸಬಹುದು.

ದೇಶ – ವಿದೇಶ

ಐಫೋನ್ ಚಾರ್ಜ್ ಮಾಡುವಾಗ ಸ್ಫೋಟ: ಮಹಿಳೆಗೆ ಗಂಭೀರ ಗಾಯ

ಬೀಜಿಂಗ್(ಚೀನಾ): ರಾತ್ರಿ ವೇಳೆ ಮಲಗುವ ಮುನ್ನ ಮಹಿಳೆಯೊಬ್ಬರು ತನ್ನ ಐಫೋನ್ ಚಾರ್ಜ್ ಗಿಟ್ಟಿದ್ದರು. ಬೆಳಗ್ಗೆ ಫೋನ್ ಸ್ಫೋಟಗೊಂಡಿದ್ದು, ಆಕೆ ಗಂಭೀರವಾಗಿ ಗಾಯಗೊಂಡಿದ್ದಾರೆ. ಈ ಘಟನೆ ಚೀನಾದ ಶಾಂಕ್ಸಿಯಲ್ಲಿ ನಡೆದಿದೆ. ಈ ಸುದ್ದಿ ಚೀನಾದಾದ್ಯಂತ ಸಂಚಲನ ಮೂಡಿಸಿದ ಬಳಿಕ ಆ್ಯಪಲ್ ಕಂಪನಿ ಆತಂಕ ವ್ಯಕ್ತಪಡಿಸಿದೆ. ಐಫೋನ್ ಸ್ಫೋಟದ ಬಗ್ಗೆ ತಿಳಿಯಲು ಆ ಸಾಧನವನ್ನು ಹತ್ತಿರದ ಆ್ಯಪಲ್ ಕಸ್ಟಮರ್ ಕೇರ್‌ಗೆ ತೆಗೆದುಕೊಂಡು ಹೋಗಲಾಗಿದೆ.



ವರದಿಗಳ ಪ್ರಕಾರ ಮಹಿಳೆ ಮಲಗುವ ಮುನ್ನ ಐಫೋನ್ ಚಾರ್ಜ್‌ಗೆ ಇಟ್ಟಿದ್ದರು. ರಾತ್ರಿ ಮಲಗಿದ್ದಾಗ ಆಕಸ್ಮಿಕವಾಗಿ ಐಫೋನ್ 14 ಪ್ರೊ ಮ್ಯಾಕ್ಸ್ ಮೇಲೆ ಕೈ ಹಾಕಿದ್ದಾರೆ. ಆಗ ಐಫೋನ್ ಬೆಂಕಿ ಹೊತ್ತಿಕೊಂಡು ಸ್ಫೋಟಗೊಂಡಿದೆ. ನಂತರ ಎಚ್ಚೆತ್ತುಕೊಂಡು ಹೊಗೆ ಮತ್ತು ಬೆಂಕಿ ನಿಯಂತ್ರಿಸಲು ಪ್ರಯತ್ನಿಸಿದ್ದಾರೆ. ಅಷ್ಟರಲ್ಲಿ ಫೋನ್ ಸಂಪೂರ್ಣವಾಗಿ ಸುಟ್ಟುಹೋಗಿತ್ತು. ಈ ಘಟನೆ ನಂತರ ಸಾಕಷ್ಟು ಹಾನಿಯಾಗಿದೆ. ಅಪಾರ್ಟ್‌ಮೆಂಟ್‌ನ ಗೋಡೆಗಳು ಹೊಗೆಯಿಂದ ಸಂಪೂರ್ಣ ಕಪ್ಪಾಗಿದ್ದು, ಹಾಸಿಗೆ ಕೂಡ ಸುಟ್ಟು ಕರಕಲಾಗಿದೆ. ಈ ಐಫೋನ್ ಅನ್ನು 2022ರಲ್ಲಿ ಖರೀದಿಸಲಾಗಿದೆ ಮತ್ತು ಅದರ ವಾರಂಟಿ ಅವಧಿ ಮುಗಿದಿದೆ.

ಜಾರ್ಖಂಡ್ ಆದಿವಾಸಿಗಳಿಗೆ ಸೇರಿದ್ದು, ಈ ರಾಜ್ಯವನ್ನು ಅವರೇ ಆಳುತ್ತಾರೆ

ಚೈಬಾಸಾ: ಜಾರ್ಖಂಡ್ ಆದಿವಾಸಿಗಳಿಗೆ ಸೇರಿದ್ದು, ಈ ರಾಜ್ಯವನ್ನು ಅವರೇ ಆಳುತ್ತಾರೆ ಎಂದು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಹೇಳಿದ್ದಾರೆ. ಎಜೆಓ ಕಾರ್ಯಕಾರಿ ಅಧ್ಯಕ್ಷರೂ ಆಗಿರುವ ಸೊರೇನ್, ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ರಾಜ್ಯದಲ್ಲಿ ಯಾವುದೇ ಹಿಂದೂ ಅಪಾಯದಲ್ಲಿಲ್ಲ. ಆದರೆ ಬಿಜೆಪಿ ಹಿಂದೂ–ಮುಸ್ಲಿಂರ ನಡುವೆ ಸಂಘರ್ಷವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು. ನಾವು ಪ್ರತ್ಯೇಕ ಜಾರ್ಖಂಡ್ ರಾಜ್ಯಕ್ಕಾಗಿ ಹೋರಾಡಿದ್ದೇವೆ ಮತ್ತು ನಮ್ಮ ಹಕ್ಕುಗಳನ್ನು ಪಡೆಯಲು ನಾವು ಹೋರಾಡುತ್ತೇವೆ. ಜಾರ್ಖಂಡ್ ಬುಡಕಟ್ಟು ಜನಾಂಗದವರಿಗೆ ಸೇರಿದ್ದರಿಂದ ಇಲ್ಲಿ ಆದಿವಾಸಿಗಳು ಆಳ್ವಿಕೆ ನಡೆಸುತ್ತಾರೆ ಎಂದು ಸೊರೇನ್ ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯ ಚೋಟಾನಾಗ್ರಾದಲ್ಲಿ ಹೇಳಿದ್ದಾರೆ. ಜನರ ಬೆಂಬಲದೊಂದಿಗೆ ತಮ್ಮ ಸರ್ಕಾರ ಉತ್ತಮವಾಗಿ ಕಾರ್ಯನಿರ್ವಹಿಸಿದ್ದು, ಮುಂದೆಯೂ ಇದನ್ನು ಮುಂದುವರಿಸಲಿದೆ ಎಂದು ಸೊರೇನ್ ತಿಳಿಸಿದ್ದಾರೆ. ಬಿಜೆಪಿಯವರು ಸಿಬಿಐ ಮತ್ತು ಇಡಿ ಜತೆ ಶಾಮೀಲಾಗಿ ನನ್ನನ್ನು ಬೆದರಿಸುತ್ತಿದ್ದಾರೆ ಮತ್ತು ಸುಳ್ಳು ಆರೋಪಗಳನ್ನು ಹೊರಿಸಿ ಜೈಲಿಗೆ ಕಳುಹಿಸಿದ್ದರು. ಆದರೆ ನಾನು ಜಾರ್ಖಂಡ್ ಮಣ್ಣಿನ ಮಗ, ನಾನು ಹೆದರುವುದಿಲ್ಲ ಎಂದು ಹೇಳಿದ್ದಾರೆ.



ಮರದಿಂದ ತಯಾರಿಸಿದ ವಿಶ್ವದ ಮೊದಲ ಉಪಗ್ರಹ ಉಡಾವಣೆ

ನ್ಯೂಯಾರ್ಕ್: ಚಂದ್ರ ಮತ್ತು ಮಂಗಳನ ಅಂಗಳದಲ್ಲಿ ಮರ ಬಳಸಿ ಮನೆ ಕಟ್ಟುವ ಯೋಜನೆಯನ್ನು ಹೊಂದಿರುವ ವಿಜ್ಞಾನಿಗಳು, ಇದರ ಸಾಧ್ಯಾಸಾಧ್ಯತೆಯನ್ನು ಅರ್ಥ ಮಾಡಿಕೊಳ್ಳಲು ಮರದಿಂದ ತಯಾರಿಸಿದ ಉಪಗ್ರಹವನ್ನು ಉಡಾವಣೆ ಮಾಡಿದ್ದಾರೆ. ಇದು ವಿಶ್ವದಲ್ಲೇ ಮೊದಲ ಮರದ ಉಪಗ್ರಹ ಎಂಬ ಖ್ಯಾತಿ ಪಡೆದುಕೊಂಡಿದೆ.



ಜಪಾನ್‌ನ ಕ್ಯೋಟೋ ವಿವಿ ಮತ್ತು ಸುಮಿಟೊಮೋ ಫಾರೆಸ್ಟ್ರಿ ಸೇರಿ ತಯಾರು ಮಾಡಿರುವ ಈ ಉಪಗ್ರಹವನ್ನು ಅಮೆರಿಕದ ಸ್ಪೇಸ್‌ಎಕ್ಸ್‌ನ ರಾಕೆಟ್ ಮೂಲಕ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ಉಡಾವಣೆ ಮಾಡಲಾಗಿದೆ. ಅಂಗೈ ಅಗಲ ಇರುವ ಈ ಉಪಗ್ರಹಕ್ಕೆ ಲಿಗ್ನೊಸ್ಯಾಟ್ ಎಂದು ಹೆಸರಿಡಲಾಗಿದೆ. ಬಾಹ್ಯಾಕಾಶಕ್ಕೆ ಕಳುಹಿಸುವ ನವೀಕರಿಸಬಹುದಾದ ವಸ್ತುವಿನ ಮೇಲೆ ಕಾಸ್ಮಿಕ್ ಪರಿಣಾಮ ಏನಾಗಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಲು ಹಾಗೂ ಇದರ ಮೂಲಕ ಬಾಹ್ಯಾಕಾಶದಲ್ಲಿ ಮನುಷ್ಯದ ಜೀವನ ಕುರಿತ ಅಧ್ಯಯನ ಕೈಗೊಳ್ಳಲಾಗುತ್ತದೆ. ಕ್ಯೋಟೋ ಸಂಸ್ಥೆಯ ಪ್ರಮುಖ ಗುರಿ ಚಂದ್ರ ಮತ್ತು ಮಂಗಳನ ಮೇಲೆ ಮರದಿಂದ ಮನೆ ನಿರ್ಮಾಣ ಮಾಡುವುದಾಗಿದೆ. ಇದಕ್ಕಾಗಿ 50 ವರ್ಷಗಳ ಗುರಿ ಹಾಕಿಕೊಳ್ಳಲಾಗಿದೆ.

ವಕ್ಫ್ ಮಸೂದೆ ಕುರಿತು JPC ನಿರ್ಧಾರ; ಸ್ಪೀಕರ್ ಭೇಟಿ ಮಾಡಿ ದೂರು ಸಲ್ಲಿಸಿದ ವಿರೋಧ ಪಕ್ಷ ಸಂಸದರು

ನವದೆಹಲಿ: ವಕ್ಫ್ (ತಿದ್ದುಪಡಿ) ಮಸೂದೆಯ ಸಂಸದೀಯ ಸಮಿತಿಯ ಭಾಗವಾಗಿರುವ ವಿರೋಧ ಪಕ್ಷದ ಸಂಸದರು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾಗಿ ಸಮಿತಿಯ ಅಧ್ಯಕ್ಷ ಮತ್ತು ಬಿಜೆಪಿ ಸಂಸದ ಜಗದಾಂಬಿಕಾ ಪಾಲ್ ಅವರ ಏಕಪಕ್ಷೀಯ ನಿರ್ಧಾರಗಳ ವಿರುದ್ಧ ತಮ್ಮ ಪ್ರತಿಭಟನೆಯನ್ನು ದಾಖಲಿಸಿದ್ದಾರೆ. ಸ್ಪೀಕರ್ ಶೀಘ್ರವೇ ನಿರ್ಧಾರ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ತೃಣಮೂಲ ಕಾಂಗ್ರೆಸ್ ಸಂಸದ ಕಲ್ಯಾಣ್ ಬ್ಯಾನರ್ಜಿ, ಸ್ಪೀಕರ್ ಅವರು ಸೂಕ್ತ ನಿರ್ಧಾರ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದರು. ಸದಸ್ಯರು ತಮ್ಮ ಕುಂದು ಕೊರತೆಗಳನ್ನು ತಿಳಿಸಿದ್ದು, ಪರಿಹಾರದ ಭರವಸೆ ನೀಡಲಾಗಿದೆ ಎಂದು ಎಎಪಿ ಸಂಸದ ಸಂಜಯ್ ಸಿಂಗ್ ಹೇಳಿದ್ದಾರೆ. ಸ್ಪೀಕರ್ ಭರವಸೆ ನೀಡಿದ ನಂತರ ಜೆಪಿಸಿ ಸಭೆಗೆ ಹಾಜರಾಗುವುದನ್ನು ಮುಂದುವರಿಸುವುದಾಗಿ ತಿಳಿಸಿದರು. ಸಂಸದರು ಕಾಂಗ್ರೆಸ್‌ನ ಮೊಹಮ್ಮದ್ ಜಾವೇದ್ ಮತ್ತು ಇಮ್ರಾನ್ ಮಸೂದ್, ಡಿಎಂಕೆಯ ರಾಜಾ ಮತ್ತು ಎಐಎಂಐಎಂನ ಅಸಾದುದ್ದೀನ್ ಓವೈಸಿ ಸಹಿ ಮಾಡಿದ ಜಂಟಿ ಜ್ಞಾಪಕ ಪತ್ರವನ್ನು ಸಲ್ಲಿಸಿದರು.

ಜಾನಪದ ಗಾಯಕಿ, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತೆ ಶಾರದಾ ಸಿನ್ಹಾ ನಿಧನ

ನವದೆಹಲಿ: ಜನಪ್ರಿಯ ಜಾನಪದ ಗಾಯಕಿ ಮತ್ತು ಪದ್ಮಭೂಷಣ ಪ್ರಶಸ್ತಿ ಪುರಸ್ಕೃತೆ ಶಾರದಾ ಸಿನ್ಹಾ ಅವರು ಕ್ಯಾನ್ಸರ್‌ನಿಂದ ನಿಧನರಾಗಿದ್ದಾರೆ. 72 ವಯಸ್ಸಿನ ಖ್ಯಾತ ಗಾಯಕಿ ಶಾರದಾ ಅವನ್ನು ಅನಾರೋಗ್ಯದ ಹಿನ್ನೆಲೆ ದೆಹಲಿಯ ಏಮ್ಸ್‌ಗೆ ದಾಖಲಿಸಲಾಗಿತ್ತು. ಅ.25ರಿಂದ ಆಸ್ಪತ್ರೆಯ ಆಂಕೊಲಾಜಿ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. 2017ರಲ್ಲಿ ಅವರಿಗೆ ಮಲ್ಟಿಪಲ್ ಮೈಲೋಮಾ ರೋಗನಿರ್ಣಯ ದೃಢಪಟ್ಟಿತ್ತು. ಇದು ಮೂಳೆ ಮಜ್ಜೆಯ ಮೇಲೆ ಪರಿಣಾಮ ಬೀರುವ ಒಂದು ರೀತಿಯ ಕ್ಯಾನ್ಸರ್. ಸಿನ್ಹಾ ಅವರನ್ನು ವೆಂಟಿಲೇಟರ್‌ನಲ್ಲಿರಿಸಲಾಗಿತ್ತು.



'ಕಾರ್ತಿಕ್ ಮಾಸ್ ಇಜೋರಿಯಾ', 'ಕೋಯಲ್ ಬಿನ್' ತರಹದ ಜನಪದ ಗೀತೆಗಳು, 'ಗ್ಯಾಂಗ್ಸ್ ಆಫ್ ವಸೇಪುರ್' ಹಿಂದಿ ಸಿನಿಮಾದ 'ತಾರ್ ಬಿಜಿಲಿ', 'ಹಮ್ ಆಪ್ಕೆ ಹೈ ಕೌನ್' ಚಿತ್ರದ 'ಬಾಬುಲ್' ಹಾಡುಗಳ ಗಾಯನದಿಂದ ಶಾರದಾ ಅವರು ಛಾಪು ಮೂಡಿಸಿದ್ದರು. ಶಾರದಾ ಅವರನ್ನು ಅಭಿಮಾನಿಗಳು 'ಬಿಹಾರಿ ಕೋಕಿಲಾ' ಎಂದು ಕರೆಯುತ್ತಿದ್ದರು.

ಶಾರದಾ ಅವರು ಭೋಜಪುರಿ, ಮೈಥಿಲಿ ಭಾಷೆಯ ಜನಪದ ಗೀತೆಗಳನ್ನು ಹಾಡುತ್ತಿದ್ದರು. ಶಾರದಾ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ಕಸ್ಟಡಿಯಿಂದ ಪರಾರಿಯಾಗಿದ್ದ ಆರೋಪಿ ಬಂಧನ

● ರಾಜಸ್ಥಾನದ ಕೋಟಾದಲ್ಲಿ ಅಂಕುರ್ ರಾಣಾ ಮತ್ತೆ ಸೆರೆ ● ಸತತ ಕಾರ್ಯಾಚರಣೆ ನಡೆಸಿದ ಕೊಡಗು ಪೊಲೀಸರು

ಮಡಿಕೇರಿ, ನ.6–ತೆಲಂಗಾಣದ ಉದ್ಯಮಿ ಕೊಲೆ ಪ್ರಕರಣದ ಆರೋಪಿ ಅಂಕುರ್ ರಾಣಾ ತೆಲಂಗಾಣಕ್ಕೆ ಮಹಜರಿಗೆ ಕರೆದೊಯ್ದಿದ್ದ ವೇಳೆ ಪೊಲೀಸ್ ಕಸ್ಟಡಿಯಿಂದಲೇ ಪರಾರಿಯಾಗಿದ್ದ. ಸತತ ಕಾರ್ಯಾಚರಣೆ ನಡೆಸಿದ ಕೊಡಗು ಪೊಲೀಸರು, ಆರೋಪಿಯನ್ನು ಮತ್ತೆ ರಾಜಸ್ಥಾನದ ಕೋಟಾದಲ್ಲಿ ಬಂಧಿಸಿದ್ದಾರೆ.

ಆರೋಪಿ ಅಂಕುರ್ ರಾಣಾ ತೆಲಂಗಾಣಕ್ಕೆ ಮಹಜರಿಗೆ ಕರೆದೊಯ್ದಿದ್ದ ವೇಳೆ ಪೊಲೀಸ್ ಕಸ್ಟಡಿಯಿಂದಲೇ ಪರಾರಿಯಾಗಿದ್ದ. ಈ ವೇಳೆ ಪೊಲೀಸ್ ಸಿಬ್ಬಂದಿ ಮೊಬೈಲ್ ಅನ್ನು ಕೂಡ ಹೊತ್ತೊಯ್ದಿದ್ದ. ಅದೇ ಮೊಬೈಲ್ ಸಹಾಯದಿಂದ ಅಂಕುರ್ ರಾಣಾನನ್ನು ಮತ್ತೊಮ್ಮೆ ಕೊಡಗು ಪೊಲೀಸರು ಖೆಡ್ಡಾಕ್ಕೆ ಕೆಡವಿ ತಮ್ಮ ಸಾಮರ್ಥ್ಯ ಮೆರೆದಿದ್ದಾರೆ.

6 ದಿನ ಕಾರ್ಯಾಚರಣೆ: ಅಂಕುರ್ ರಾಣಾ ಪೊಲೀಸ್ ಕಸ್ಟಡಿಯಿಂದ ಪರಾರಿಯಾಗಿದ್ದ ಹಿನ್ನೆಲೆಯಲ್ಲಿ ಆತನ ಬಂಧನಕ್ಕಾಗಿ ತೀವ್ರ ಶೋಧ ನಡೆಸುತ್ತಿದ್ದ ಕೊಡಗು ಪೊಲೀಸರು ಆತನ ಸುಳಿವು ಪತ್ತೆಗೆ ಮುಂದಾಗಿದ್ದರು. ಅಂಕುರ್ ರಾಣಾ ಕದ್ದ ಮೊಬೈಲ್ ಮೂಲಕ ತನ್ನ ಕೆಲ ಆಪ್ತ ಸಂಖ್ಯೆಗಳನ್ನು ಸಂಪರ್ಕಿಸಿದ್ದ. ಈ 'ಮೊಬೈಲ್ ಟವರ್ ಲೊಕೇಷನ್ ಡಂಪಿಂಗ್' ತಂತ್ರಜ್ಞಾನ ಆಧರಿಸಿ ಸತತ 6 ದಿನಗಳ ನಿರಂತರ ಕಾರ್ಯಾಚರಣೆ ನಡೆಸಿದ ಪೊಲೀಸರು ತೆಲಂಗಾಣ, ಉತ್ತರ ಪ್ರದೇಶ, ದೆಹಲಿ, ಹರಿಯಾಣ, ರಾಜಸ್ಥಾನದಲ್ಲಿ ಪರಾರಿ ಆರೋಪಿಗೆ ಶೋಧ ನಡೆಸಿದ್ದರು. ಕೊನೆಗೂ ಅಂಕುರ್ ರಾಣಾನನ್ನು ನ.5ರಂದು ಮತ್ತೆ ಬಂಧಿಸಲಾಗಿದ್ದು, ಇದೀಗ ಆತನನ್ನು ಬಿಗಿ ಭದ್ರತೆಯಲ್ಲಿ ಕೊಡಗು ಜಿಲ್ಲೆಗೆ ಕರೆ ತರಲಾಗುತ್ತಿದ್ದು, ಬಳಿಕ ನ್ಯಾಯಾಂಗ ವಶಕ್ಕೆ ಒಪ್ಪಿಸಲಿದ್ದಾರೆ.

ಪ್ರಕರಣ ಹಿನ್ನೆಲೆ: ಹೈದರಾಬಾದ್ ಮೂಲದ ರಮೇಶ್ ಕುಮಾರ್‌ನನ್ನು ಕೊಲೆ ಮಾಡಿ ಆತನ ಮೃತದೇಹವನ್ನು ಸುಂಟಿಕೊಪ್ಪದ ಪನ್ಯ ಮಾರಿಗುಡಿ ಎಸ್ಟೇಟ್‌ನಲ್ಲಿ ಸುಟ್ಟು ಹಾಕಲಾಗಿತ್ತು. ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹರಿಯಾಣದ ಕಾರ್ನಲ್ ನಿವಾಸಿ ಅಂಕುರ್ ರಾಣಾ ಸಹಿತ ಮೃತ ರಮೇಶ್ ಕುಮಾರ್ 2ನೇ ಪತ್ನಿ ಪಂತುಲ್ ನಿಹಾರಿಕಾ, ಪಶು ವೈದ್ಯ ನಿಖಿಲ್ ಮೈರೆಡ್ಡಿ ಅವರನ್ನು ಬಂಧಿಸಲಾಗಿತ್ತು.

ವಿಚಾರಣೆ ಮುಗಿಸಿ ಓರ್ವ ಆರೋಪಿ ಡಾಕ್ಟರ್ ನಿಖಿಲ್‌ನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಪ್ರಮುಖ ಆರೋಪಿಗಳಾದ ಪಂತುಲ್ ನಿಹಾರಿಕಾ ಹಾಗೂ ಅಂಕುರ್ ರಾಣಾನನ್ನು ಪೊಲೀಸರು ಕಸ್ಟಡಿಗೆ ಪಡೆದುಕೊಂಡು ಅ.30ರಂದು ಕೊಡಗು ಪೊಲೀಸರ ತಂಡ ಬೆಂಗಳೂರಿನ ಹೊರಮಾವುಗೆ ತೆರಳಿ ಅಲ್ಲಿ ಸ್ಥಳ ಮಹಜರ್ ನಡೆಸಿ, ಬಳಿಕ ಅ.31ರಂದು ಕೊಲೆ ನಡೆದ ಸ್ಥಳವಾದ ತೆಲಂಗಾಣದ ಉಪ್ಪಲ್ ಭುವನಗಿರಿಯ ರಾಜ್ಯ ಹೆದ್ದಾರಿ ಸಮೀಪ ಮಹಜರು ನಡೆಸಿದ್ದರು. ಅದೇ ದಿನ ರಾತ್ರಿ ಹೈದರಾಬಾದ್‌ನಿಂದ 30 ಕಿ.ಮೀ. ದೂರದ ಉಪ್ಪಲ್ ಸಮೀಪ ಹೋಟೆಲ್‌ವೊಂದರ ವಸತಿ ಗೃಹದಲ್ಲಿ ಆರೋಪಿ ಸಹಿತ ಎಲ್ಲಾ ಪೊಲೀಸರು ತಂಗಿದ್ದು, ನ.1ರ ನಸುಕಿನ ಜಾವ 3 ಗಂಟೆಯಲ್ಲಿ ಎಲ್ಲರೂ ನಿದ್ರೆಗೆ ಜಾರಿದ್ದ ಸಂದರ್ಭ ಆರೋಪಿ ಅಂಕುರ್ ರಾಣಾ ಪೊಲೀಸ್ ಕಸ್ಟಡಿಯಿಂದ ಪರಾರಿಯಾಗಿದ್ದ. ಈ ಕುರಿತು ಕೊಡಗು ಪೊಲೀಸರು ಸ್ಥಳೀಯ ಕಂಚರಾಮ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ನ್ಯಾಯಾಲಯ ವಶದಲ್ಲಿದ್ದ ಇಬ್ಬರು ಆರೋಪಿಗಳನ್ನು ಕೊಡಗು ಪೊಲೀಸರು ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದು, ನ್ಯಾಯಾಲಯ ಅನುಮತಿಯಂತೆ ನ.4ರಂದು ಮತ್ತೆ ನ್ಯಾಯಾಂಗ ವಶಕ್ಕೆ ಆರೋಪಿಯನ್ನು ನೀಡಬೇಕಿತ್ತು. ಈ ಹಿನ್ನೆಲೆಯಲ್ಲಿ ಕಸ್ಟಡಿಗೆ ಪಡೆದಿದ್ದ ಮಹಿಳಾ ಆರೋಪಿ ಪಂತುಲ್ ನಿಹಾರಿಕಾಳನ್ನು ನ್ಯಾಯಾಲಯ ವಶಕ್ಕೆ ಒಪ್ಪಿಸಿದ್ದ ಪೊಲೀಸರು, ಮತ್ತೋರ್ವ ಆರೋಪಿ ಅಂಕುರ್ ರಾಣಾ ಪೊಲೀಸ್ ಕಸ್ಟಡಿಯಿಂದ ಪರಾರಿಯಾಗಿರುವ ಕುರಿತು ತೆಲಂಗಾಣದ ಕಂಚರಾಮ್ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿದ್ದ ಎಫ್‌ಐಆರ್ ವರದಿಯನ್ನು ನ್ಯಾಯಾಲಯಕ್ಕೆ ನೀಡಿದ್ದರು. ಈ ವೇಳೆ ನ್ಯಾಯಾಲಯ ಪ್ರಕರಣದ ತನಿಖಾಧಿಕಾರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಿತ್ತು.



ಅಂಕುರ್ ರಾಣಾ

ಕಾನೂನು ಕ್ರಮ ತಪ್ಪಿದ್ದಲ್ಲ

ತೆಲಂಗಾಣದ ಉದ್ಯಮಿ ರಮೇಶ್ ಕುಮಾರ್ ಕೊಲೆ ಪ್ರಕರಣವನ್ನು ಕಾರ್ಯದಕ್ಷತೆಯಿಂದ ಭೇದಿಸಿದ್ದ ಪೊಲೀಸರ ಕ್ರಮ ಸಾರ್ವಜನಿಕ ವಲಯದಲ್ಲಿ ಅತೀವ ಮೆಚ್ಚುಗೆಗೆ ಪಾತ್ರವಾಗಿತ್ತು. ಈ ಹಿನ್ನೆಲೆಯಲ್ಲಿ ವಿವಿಧ ಸಂಘ–ಸಂಸ್ಥೆಗಳು ಸುಂಟಿಕೊಪ್ಪ ಪೊಲೀಸರನ್ನು ಅಭಿನಂದಿಸಿ ಗೌರವಿಸಿದ್ದವು. ಆದರೆ, ಮಹಜರಿಗೆ ಕರೆದೊಯ್ದ ವೇಳೆ ಆರೋಪಿ ಅಂಕುರ್ ರಾಣಾ ಪೊಲೀಸ್ ಕಸ್ಟಡಿಯಿಂದ ಪರಾರಿಯಾಗಿದ್ದ. ಇದರಿಂದ ಮುಜುಗರ ಸಹಿತ ಪೊಲೀಸರ ಕರ್ತವ್ಯಕ್ಕೆ ಕಂಟಕವಾಗಿತ್ತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರ ಸ್ಪಷ್ಟ ಸೂಚನೆ ಮೇರೆಗೆ ಮತ್ತೆ ಬಿರುಸಿನ ಕಾರ್ಯಾಚರಣೆಗೆ ಇಳಿದ ಪೊಲೀಸರು, ಕೊನೆಗೂ ಆರೋಪಿಯನ್ನು ರಾಜಸ್ಥಾನದ ಕೋಟಾ ಎಂಬ ಸ್ಥಳದಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಪೊಲೀಸ್ ಕಸ್ಟಡಿಯಿಂದ ಆರೋಪಿ ಪರಾರಿಯಾದ ಪ್ರಕರಣದ ಕುರಿತು ಇಲಾಖೆಯ ಕಾನೂನು ಕ್ರಮಕ್ಕೆ ತನಿಖಾ ತಂಡ ಒಳಪಡಬೇಕಿದೆ.

ಬಾಳುಗೋಡುವಿನಲ್ಲಿ ನ.28ರಿಂದ ಕೊಡವ ನಮ್ಮೆ



ಸುದ್ದಿಗೋಷ್ಠಿಯಲ್ಲಿ ಕೊಡವ ಸಮಾಜ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಮಾತನಾಡಿದರು.

ವಿರಾಜಪೇಟೆ, ನ.6– ಕೊಡವ ಸಮಾಜಗಳ ಒಕ್ಕೂಟದ ವತಿಯಿಂದ ಸಮೀಪದ ಬಾಳುಗೋಡುವಿನಲ್ಲಿ ನ.28ರಿಂದ ಡಿ.1ರವರೆಗೆ 11ನೇ ಕೊಡವ ನಮ್ಮೆ ಆಚರಿಸಲಾಗುವುದು ಎಂದು ಕೊಡವ ಸಮಾಜ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ತಿಳಿಸಿದರು.

ಬಾಳುಗೋಡುವಿನ ಕೊಡವ ಸಮಾಜಗಳ ಒಕ್ಕೂಟದ ಕ್ರೀಡಾ ಹಾಗೂ ಸಾಂಸ್ಕೃತಿಕ ಸಮುಚ್ಚಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡವ ಜನಾಂಗದ ಆಚಾರ, ವಿಚಾರ, ಪದ್ಧತಿ, ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರತಿವರ್ಷ ಕೊಡವ ನಮ್ಮೆ ಆಚರಿಸಲಾಗುತ್ತದೆ. ಈ ನಮ್ಮೆ ಕೊಡವ ಜನಾಂಗಕ್ಕೆ ಮಾತ್ರ ಸೀಮಿತವಾಗಿದೆ ಎಂದರು.

ನಮ್ಮೆಯಲ್ಲಿ ಕ್ರೀಡಾ, ಸಾಂಸ್ಕೃತಿಕ, ಊಟೋಪಾಚಾರ ಸಮಿತಿಗಳನ್ನು ರಚಿಸಲಾಗಿದ್ದು, ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಗೆ ಮಾತ್ರ ಪ್ರವೇಶ ಶುಲ್ಕ ನಿಗದಿ ಪಡಿಸಲಾಗಿದೆ. ಒಂದು ಕೊಡವ ಕುಟುಂಬದಿಂದ ಒಂದು ತಂಡಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ನಾಲ್ಕು ದಿನ ನಡೆಯುವ ನಮ್ಮೆಯಲ್ಲಿ ಮಧ್ಯಾಹ್ನ ಭೋಜನ ವ್ಯವಸ್ಥೆ ಮಾಡಲಾಗಿದೆ. ನ.28ರಂದು ಬೆಳಗ್ಗೆ 10 ಗಂಟೆಗೆ ಅಂತರ ಕೊಡವ ಸಮಾಜಗಳ ನಡುವೆ ನಡೆಯುವ ನಾಕೌಟ್ ಹಾಕಿ ಪಂದ್ಯಾಟಕ್ಕೆ ಚಾಲನೆ ನೀಡಲಾಗುವುದು. 29ರಂದು ಬೆಳಗ್ಗೆ 9.30ಕ್ಕೆ ತೆಂಗಿಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ನಡೆಯಲಿದ್ದು, 10 ಗಂಟೆಯಿಂದ ಹಾಕಿ ಪಂದ್ಯಾಟ ನಡೆಯಲಿದೆ. 30ರಂದು ಬೆಳಗ್ಗೆ 9 ಗಂಟೆಗೆ ಹಾಕಿ ಸೆಮಿಫೈನಲ್ಸ್ ನಡೆಯಲಿದೆ. ಮತ್ತೊಂದು ಮೈದಾನದಲ್ಲಿ ಮಹಿಳೆಯರು ಮತ್ತು ಪುರುಷರ ಹಗ್ಗಜಗ್ಗಾಟ ಸ್ಪರ್ಧೆ ನಡೆಯಲಿದೆ. 11 ಗಂಟೆಗೆ ಯುದ್ಧ ಸ್ಮಾರಕಕ್ಕೆ ಪುಷ್ಪಾರ್ಚನೆ ಮಾಡಲಾಗುವುದು. ಮಧ್ಯಾಹ್ನ 2 ಗಂಟೆಗೆ ಹಾಕಿ 2ನೇ ಸೆಮಿಫೈನಲ್ಸ್ ನಡೆಯಲಿದೆ 3 ಗಂಟೆಗೆ ಪುರುಷರು ಮತ್ತು ಮಹಿಳೆಯರ ಗುಂಡು ಎಸೆತ ಫೈನಲ್ಸ್ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಡಿ.1ರಂದು ಬೆಳಗ್ಗೆ 9 ಗಂಟೆಗೆ ಮಂದ್‌ಮರಿಯುವೊ, 9.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಸ್ಪರ್ಧೆ ನಡೆಯಲಿದೆ. ಮಧ್ಯಾಹ್ನ 2 ಗಂಟೆಗೆ ಹಾಕಿ ಫೈನಲ್ಸ್ ಹಾಗೂ ಸಭಾ ಕಾರ್ಯಕ್ರಮ ನಡೆಯಲಿದೆ. ವಿಜೇತರಿಗೆ ರೋಲಿಂಗ್ ಟ್ರೋಫಿ ವಿತರಿಸಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಗೌರವ ಕಾರ್ಯದರ್ಶಿ ವಾಟೇರಿರ ಶಂಕರಿ ಪೂವಯ್ಯ, ಕ್ರೀಡಾ ಸಮಿತಿ ಅಧ್ಯಕ್ಷ ತಂಬುಕುತ್ತಿರ ಮಧು ಮಂದಣ್ಣ, ಸಂಚಾಲಕ ಕಂಬೀರಂಡ ಕಿಟ್ಟು ಕಾಳಪ್ಪ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕಾಳಿಮಾಡ ಮೋಟಯ್ಯ, ಹಂಚೇಟಿರ ಮನು, ಸಂಚಾಲಕ ಬೊಳ್ಳಿಯಂಗಡ ದಾದು ಪೂವಯ್ಯ, ಊಟೋಪಾಚಾರ ಸಮಿತಿ ಅಧ್ಯಕ್ಷ ಕುಂಬೇರ ಮನುಕುಮಾರ್, ವಿವಿಧ ಸಮಿತಿ ಸದಸ್ಯರಾದ ಪುಲಿಯಂಡ ಪೊನ್ನಣ್ಣ, ಕುಪ್ಪಂಡ ರಾಜೀವ್ ಕಾರ್ಯಪ್ಪ, ಕುಂಜಿಲಂಡ ದೊರೆ ಪೂಣಚ್ಚ, ಕೋಟೇರ ರಘು, ಬಾಚಿರ ಜಗದೀಶ್, ತಾತಂಡ ಕಬೀರ್ ಉಪಸ್ಥಿತರಿದ್ದರು.

ದಸಂಸ ಕಾರ್ಯಕರ್ತರ ಅರೆಬೆತ್ತಲೆ ಪ್ರತಿಭಟನೆ



ರಾಜ್ಯ ಸರ್ಕಾರ ಅಸ್ಥಿರಗೊಳಿಸಲು ಬಿಜೆಪಿ ಮುಂದಾಗಿದೆ ಎಂದು ಆರೋಪಿಸಿ ದಸಂಸ ಕಾರ್ಯಕರ್ತರು ಮಡಿಕೇರಿಯಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಮಡಿಕೇರಿ, ನ.6–ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ ಹವಣಿಸುತ್ತಿದೆ ಎಂದು ಆರೋಪಿಸಿ ದಲಿತ ಸಂಘರ್ಷ ಸಮಿತಿ ಕೊಡಗು ಜಿಲ್ಲಾ ಘಟಕ ನಗರದಲ್ಲಿ ಬುಧವಾರ ಅರೆಬೆತ್ತಲೆ ಪ್ರತಿಭಟನೆ ನಡೆಸಿತು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ದಸಂಸ ಮುಖಂಡರು ಮತ್ತು ಕಾರ್ಯಕರ್ತರು, ಬಿಜೆಪಿ ವಿರುದ್ಧ ಘೋಷಣೆ ಕೂಗಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿದರು. ಬಿಜೆಪಿ ವಿರುದ್ಧ ಘೋಷಣೆ ಕೂಗಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಬೆಂಬಲ ಸೂಚಿಸಿದರು. ದಲಿತರು, ಹಿಂದುಳಿದ ವರ್ಗ, ಕಡು ಬಡವರು, ದುರ್ಬಲರು ಹಾಗೂ ಅಲ್ಪಸಂಖ್ಯಾತರ ಏಳಿಗೆಗಾಗಿ ಶ್ರಮಿಸುತ್ತಿರುವ ಸಿದ್ದರಾಮಯ್ಯ ದಕ್ಷ ಆಡಳಿತವನ್ನು ಸಹಿಸದೆ ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು.

ದಸಂಸ ಜಿಲ್ಲಾ ಸಂಚಾಲಕ ಎಂ.ಎನ್.ರಾಜಪ್ಪ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ವಿರೋಧ ಪಕ್ಷಗಳು ಹಗಲು ಕನಸು ಕಾಣುತ್ತಿವೆ. ಕಾಂಗ್ರೆಸ್ ಸರ್ಕಾರವನ್ನು ಪತನಗೊಳಿಸಬೇಕೆನ್ನುವ ಏಕೈಕ ಉದ್ದೇಶದಿಂದ ಆಧಾರ ರಹಿತ ಮುಡಾ ಹಗರಣಗಳನ್ನು ಬೀದಿಗೆ ತರುತ್ತಿದ್ದು, ಕೇಂದ್ರ ಸರ್ಕಾರ ಹಾಗೂ ರಾಜ್ಯ ಬಿಜೆಪಿ ನಾಯಕರು ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನ ವಿರೋಧಿಯಾಗಿ ನಡೆದುಕೊಳ್ಳುತ್ತಿದ್ದಾರೆ. ಆ ಮೂಲಕ ಜನರ ಹಾದಿ ತಪ್ಪಿಸುವ ಷಡ್ಯಂತ್ರ ನಡೆಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ದಸಂಸ ಜಿಲ್ಲಾ ಸಂಘಟನಾ ಸಂಚಾಲಕರಾದ ಎನ್.ಆರ್.ದೇವರಾಜ್, ಎಸ್.ಜೆ.ರಾಜಪ್ಪ, ಪ್ರಮುಖರಾದ ಶಿವಕುಮಾರ್, ದಯಾಕರ, ವೀರಭದ್ರ, ಗಿರೀಶ್, ಚಂದ್ರಶೇಖರ್, ರಂಗಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು.

ನಾಲ್ವರು ಗ್ರಾಪಂ ಸದಸ್ಯರ ಶಿಸ್ತುಕ್ರಮಕ್ಕೆ ಶಿಫಾರಸು

ಮಡಿಕೇರಿ, ನ.6–ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಆಯ್ಕೆ ಚುನಾವಣೆ ಸಂದರ್ಭ ಅಡ್ಡ ಮತದಾನ ಮಾಡಿದ ದೂರಿನ ಹಿನ್ನೆಲೆ ಬಿಜೆಪಿ ಬೆಂಬಲಿತ ನಾಲ್ವರು ಸದಸ್ಯರ ವಿರುದ್ಧ ಶಿಸ್ತು ಕ್ರಮಕ್ಕಾಗಿ ಪಕ್ಷದ ರಾಜ್ಯ ಸಮಿತಿಗೆ ಶಿಫಾರಸು ಮಾಡಲಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ತಿಳಿಸಿದ್ದಾರೆ.

ಜ.30ರಂದು ನಡೆದ ಚುನಾವಣೆಯಲ್ಲಿ ಪೊನ್ನಂಪೇಟೆ ಗ್ರಾಪಂ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತರಾಗಿ ಅಡ್ಡಂಡ ನಿಲನ್ ಮಂದಣ್ಣ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ವಿ.ಎಂ.ವಿಜಯ ಸ್ಪರ್ಧಿಸಿದ್ದರು. ಪಕ್ಷದ ಬೆಂಬಲಿತ ಸದಸ್ಯರಾದ ಎಂ.ಬಿ.ವಿಮಲಾ, ಎ.ಆರತಿ ಸುರೇಶ್ ಹಾಗೂ ಪಿ.ಟಿ.ರಮೇಶ್ ಅವರು ಅಡ್ಡ ಮತದಾನ ಮಾಡಿದ್ದಾರೆ

ಆ.28ರಂದು ನಡೆದ ಸೋಮವಾರಪೇಟೆ ತಾಲೂಕಿನ ದೊಡ್ಡಮಳೆ ಗ್ರಾಪಂ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಅನುಕುಮಾರ್ ಸ್ಪರ್ಧಿಸಿದ್ದರು. ಪಕ್ಷದ ಸದಸ್ಯೆ ಪ್ರಮಿಳಾ ಯೋಗೇಶ್ ಅಡ್ಡ ಮತದಾನ ಮಾಡಿದ್ದಾರೆ. ಈ ನಾಲ್ವರ ಶಿಸ್ತು ಕ್ರಮಕ್ಕಾಗಿ ಪಕ್ಷದ ರಾಜ್ಯ ಸಮಿತಿಗೆ ಶಿಫಾರಸು ಮಾಡಲಾಗಿದೆ ಎಂದು ರವಿ ಕಾಳಪ್ಪ ತಿಳಿಸಿದ್ದಾರೆ.

ಮಹೇಶ್ ತಿಮ್ಮಯ್ಯ ಅಧ್ಯಕ್ಷರಾಗಿ ಆಯ್ಕೆ...



ಸೋಮವಾರಪೇಟೆ ವಿವಿಧೋದ್ದೇಶ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎನ್.ಟಿ.ಮಹೇಶ್ ತಿಮ್ಮಯ್ಯ ಹಾಗೂ ಉಪಾಧ್ಯಕ್ಷರಾಗಿ ಬಿ.ಶಿವಪ್ಪ ಆಯ್ಕೆಯಾದರು. ನಿರ್ದೇಶಕರಾದ ಹುಲ್ಲೂರಿ ಕೊಪ್ಪ ಮಾದಪ್ಪ, ರಾಘವ, ಶ್ರೀಕಾಂತ್, ಕೆ.ಬಿ.ಸುರೇಶ್, ವೆಂಕಪ್ಪ, ದರ್ಶನ್, ಶೋಭಿತ, ರೂಪಾ ಮತ್ತಿತರರಿದ್ದರು.

ಬಿಜೆಪಿ, ಜೆಡಿಎಸ್ ವಿರುದ್ಧ ದಸಂಸ ಪ್ರತಿಭಟನೆ



ಬಿಜೆಪಿ ಹಾಗೂ ಜೆಡಿಎಸ್ ವಿರುದ್ಧ ದಸಂಸ ಕಾರ್ಯಕರ್ತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ನ.6–ರಾಜ್ಯ ಸರ್ಕಾರದ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಬಿಜೆಪಿ ಹಾಗೂ ಜೆಡಿಎಸ್ ಮಾಡುತ್ತಿದೆ ಎಂದು ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ನಗರದಲ್ಲಿ ಬುಧವಾರ ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು, ಬಿಜೆಪಿ, ಜೆಡಿಎಸ್ ವಿರುದ್ಧ ಘೋಷಣೆ ಕೂಗಿದರು. ಡಿಎಸ್‌ಎಸ್ ಜಿಲ್ಲಾ ಸಮಿತಿ ಸಂಚಾಲಕ ಸಿ.ಎಂ.ಶಿವಣ್ಣ ಮಾತನಾಡಿ, ಲೋಕಾಯುಕ್ತ ಪೊಲೀಸರು, ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕೆಂದು ಬಿಜೆಪಿ ನಾಯಕರು ಹೋರಾಟ ಪ್ರಾರಂಭಿಸಿದ್ದಾರೆ. ಈ ಹೋರಾಟದ ತಾರ್ಕಿಕ ಅಂತ್ಯ ಯಾರ ಮನೆ ಬಾಗಿಲು ತಟ್ಟಬಹುದೆಂಬ ಕನಿಷ್ಠ ಸಾಮಾನ್ಯ ಜ್ಞಾನವಾದರೂ ಈ ನಾಯಕರಿಗಿದಿಯೇ? ಎಂದು ಪ್ರಶ್ನಿಸಿದರು.

ಕೇಂದ್ರ ಬಿಜೆಪಿ ಸರ್ಕಾರ ಸಾಂವಿಧಾನಿಕ ಸಂಸ್ಥೆಗಳ ದುರ್ಬಳಕೆ ಮಾಡಿಕೊಂಡು ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಪತನಗೊಳಿಸಲು ಷಡ್ಯಂತ್ರ ನಡೆಸುತ್ತಿದೆ. ರಾಜೀನಾಮೆ ಮಾನದಂಡ ನಿಗದಿ ಪಡಿಸಿದರೆ ಸಿದ್ದರಾಮಯ್ಯ ಮಾತ್ರವಲ್ಲ ಕೇಂದ್ರ ಸರ್ಕಾರದ ಕನಿಷ್ಠ 23 ರಿಂದ 24 ಸಚಿವರು ರಾಜೀನಾಮೆ ನೀಡಬೇಕಾಗುತ್ತದೆ ಎಂದರು.

ಅಸಹಾಯಕರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರಿಗೆ ಶಕ್ತಿ ತುಂಬುವ 5 ಗ್ಯಾರಂಟಿ ಯೋಜನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೈತಿಕತೆ ಪ್ರಶ್ನಿಸುವುದು ವಿಪರ್ಯಾಸವಾಗಿದೆ. ಹೀಗಾಗಿ ಸಿದ್ದರಾಮಯ್ಯ ರಾಜೀನಾಮೆ ನೀಡಿ ಎಂದು ಕೇಳುವುದು ಬಿಜೆಪಿ, ಜೆಡಿಎಸ್‌ನವರಿಗೆ ಯಾವುದೇ ನೈತಿಕ ಹಕ್ಕಿಲ್ಲ. ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ರಾಜೀನಾಮೆ ನೀಡಬಾರದು ಎಂದರು.

ಪ್ರತಿಭಟನೆಯಲ್ಲಿ ಮುಖಂಡರಾದ ಉಮೇಶ್, ಮಂಜೇಶ್, ಶಿವಸ್ವಾಮಿ, ನಾರಾಯಣ್, ರವಿಕುಮಾರ್ ಇತರರು ಭಾಗವಹಿಸಿದ್ದರು.

50ಕ್ಕೂ ಹೆಚ್ಚು ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿ ಬಂಧನ

ಚಾಮರಾಜನಗರ: 50ಕ್ಕೂ ಹೆಚ್ಚು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಅಂತರ ಜಿಲ್ಲಾ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.




ಬೆಂಗಳೂರಿನ ಜಿಗಣಿ ತಾಲೂಕಿನ ಆನಂದ(33) ಬಂಧಿತ ಆರೋಪಿ. ಈತ ಚಾಮರಾಜನಗರ, ಮಳವಳ್ಳಿ, ಮಂಡ್ಯ, ಶಿವಮೊಗ್ಗ, ತುಮಕೂರು, ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸುಮಾರು 50ಕ್ಕೂ ಹೆಚ್ಚು ಅಪರಾಧ ಪ್ರಕರಣದಲ್ಲಿ ಪಾಲ್ಗೊಂಡು ಪೊಲೀಸರ ಕಣ್ತಪ್ಪಿಸಿಕೊಂಡು ಓಡಾಡುತ್ತಿದ್ದ.

ಇತ್ತೀಚೆಗೆ ಮನೆಗಳ್ಳತನ ಆರೋಪದ ಮೇಲೆ ಈತನನ್ನು ಬೆಂಗಳೂರಿನ ಆರ್‌ಆರ್ ನಗರದ ಪೊಲೀಸರು ಬಂಧಿಸಿ, ಜೈಲಿಗೆ ಕಳುಹಿಸಿದ್ದರು. ಈ ವಿಚಾರ ಅರಿತ ಚಾಮರಾಜನಗರ ಕ್ರೈಂ ವಿಭಾಗದ ಪೊಲೀಸರು ಬಾಡಿ ವಾರೆಂಟ್‌ನಡಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಈತ ಇತ್ತೀಚೆಗೆ ಚಾಮರಾಜನಗರದ ಭುವನೇಶ್ವರಿ ವೃತ್ತದಲ್ಲಿನ ಸ್ವಾಗತ್ ಟ್ರೇಡರ್ಸ್, ಪ್ರಭು ಎಲೆಕ್ಟ್ರಾನಿಕ್ ಸೇರಿದಂತೆ ಹಲವೆಡೆ ಕಳವು ಮಾಡಿರುವುದಾಗಿ ತಿಳಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಈತ ಹಿಂದೆಯೂ ಅಪರಾಧ ಪ್ರಕರಣದಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸಿದ್ದ. ಜೈಲಿನಿಂದ ಬಿಡುಗಡೆಯಾಗಿ ಹೊರ ಬಂದ ಬಳಿಕ ಮತ್ತೆ ತನ್ನ ಚಾಳಿ ಮುಂದುವರಿಸಿದ್ದಾನೆ ಎನ್ನಲಾಗಿದೆ.

ನಾಳೆ ಎಂಡೋಸ್ಪೈನ್ ನೇರ ಪ್ರಾತ್ಯಕ್ಷಿಕೆ ಶಸ್ತ್ರಚಿಕಿತ್ಸೆ



ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಆಸ್ಪತ್ರೆ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ.ಕೃಷ್ಣಪ್ರಸಾದ್ ಮಾತನಾಡಿದರು.

ಚಾಮರಾಜನಗರ: ನಗರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆಯಲ್ಲಿ ನ.8ರಂದು ಬೆನ್ನಿನ ಮೂಳೆ ಸಮಸ್ಯೆ ಇರುವ ಮೂವರಿಗೆ ಮೊದಲ ಬಾರಿಗೆ ಎಂಡೋಸ್ಕೋಪಿಕ್ ಸ್ಪೈನ್ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದ್ದು, ಇದರಿಂದ ರೋಗಿ 24 ಗಂಟೆ ಒಳಗಾಗಿ ಹಾಸಿಗೆಯಿಂದ ಮೇಲೇಳಲು ಸಾಧ್ಯವಾಗಲಿದೆ ಎಂದು ಜಿಲ್ಲಾ ಆಸ್ಪತ್ರೆಯ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ.ಕೃಷ್ಣಪ್ರಸಾದ್ ತಿಳಿಸಿದರು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರ ಕೊಠಡಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರ ಹೊರವಲಯದ ಯಡಬೆಟ್ಟದಲ್ಲಿರುವ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆಯಲ್ಲಿ ಬೆನ್ನುಮೂಳೆ ಸಂಬಂಧಿತ ಕಾಯಿಲೆಗೆ ಮೊದಲ ಬಾರಿಗೆ ಟ್ರಾನ್ಸ್‌ಫಾರ್ಮಿನಲ್ ಅಂಡ್ ಇಂಟರ್‌ಲ್ಯಾಮಿನರ್ ಎಂಡೋಸ್ಪೈನ್–ಎ ಸರ್ಜಿಕಲ್ ಸಿಎಂಇ ವಿತ್ ಲೈವ್ ಡೆಮೋ (ನೇರ ಪ್ರಾತ್ಯಕ್ಷಿಕೆ ಶಸ್ತ್ರಚಿಕಿತ್ಸೆ) ಕುರಿತ ಕೀ–ಹೋಲ್ ಶಸ್ತ್ರಚಿಕಿತ್ಸೆ ಏರ್ಪಡಿಸಲಾಗಿದೆ ಎಂದು ಹೇಳಿದರು.

ಶಸ್ತ್ರಚಿಕಿತ್ಸೆಗೂ ಮೊದಲು ನೆರೆ ರಾಜ್ಯದ ತಜ್ಞ ವೈದ್ಯರಿಂದ ವೈದ್ಯಕೀಯ ವಿಜ್ಞಾನ ಸಂಸ್ಥೆಯ ವೈದ್ಯರು, ಕೀಲು ಮತ್ತು ಮೂಳೆ ವಿಭಾಗದ ವಿದ್ಯಾರ್ಥಿಗಳಿಗೆ ಎಂಡೋಸ್ಕೋಪಿಕ್ ಸ್ಪೈನ್ ಶಸ್ತ್ರಚಿಕಿತ್ಸೆ ಕುರಿತು ಕಾರ್ಯಾಗಾರ ನಡೆಸಲಾಗುವುದು. ವಿವಿಧ ರಾಜ್ಯಗಳ ಕೀಲು ಮತ್ತು ಮೂಳೆ ತಜ್ಞರು ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಾಗಾರದ ಬಳಿಕ ಬೆನ್ನು ಮೂಳೆ ಸಮಸ್ಯೆ ಕಂಡುಬಂದಿರುವ ಮೂವರಿಗೆ ನೇರ ಪ್ರಾತ್ಯಕ್ಷಿಕೆ ಶಸ್ತ್ರಚಿಕಿತ್ಸೆ ನಡೆಸಲಾಗುವುದು ಎಂದರು.

ಇದೇ ವೇಳೆ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆ ವತಿಯಿಂದ ನಗರದ ಪರಿಸರ ಪ್ರೇಮಿ ಸಿ.ಎಂ.ವೆಂಕಟೇಶ್ ಹಾಗೂ ಅಂಗವಿಕಲ ಸಂಸ್ಥೆಯ ರಾಜಣ್ಣ ಅವರನ್ನು ಸನ್ಮಾನಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆಯ ಕೀಲು ಮತ್ತು ಮೂಳೆ ವಿಭಾಗದ ಮುಖ್ಯಸ್ಥ ಡಾ.ಮಾರುತಿ, ಪ್ರಾಧ್ಯಾಪಕ ಡಾ.ರಾಘವೇಂದ್ರ ಇದ್ದರು.

ಸಕಾಲದಲ್ಲಿ ಜನನ–ಮರಣ ಮಾಹಿತಿ ನೋಂದಾಯಿಸಿ

ಸಮನ್ವಯ ಸಮಿತಿ ಸಭೆಯಲ್ಲಿ ಅಧಿಕಾರಿಗಳಿಗೆ ಡಿಸಿ ಶಿಲ್ಪಾನಾಗ್ ಸೂಚನೆ



ಚಾ.ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜನನ–ಮರಣ ಸಮನ್ವಯ ಸಮಿತಿ ಸಭೆಯಲ್ಲಿ ಡಿಸಿ ಶಿಲ್ಪನಾಗ್ ಮಾತನಾಡಿದರು.

> **ಪ್ರತಿ ತಿಂಗಳು ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಜಿಲ್ಲಾ ಮಟ್ಟದಲ್ಲಿ ನಡೆಯುವ ತ್ರೈಮಾಸಿಕ ಸಭೆಗೆ ವರದಿ ಸಲ್ಲಿಸಬೇಕು. ಸಂಬಂಧಪಟ್ಟ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಬೇಕು. ಜನನ–ಮರಣ ನೋಂದಣಿ ಕುರಿತು ಒಂದು ತಿಂಗಳೊಳಗೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಭೆ ನಡೆಸಿ, ಸವಿವರ ಮಾಹಿತಿ ಪಡೆದು ಜಿಲ್ಲಾಡಳಿತಕ್ಕೆ ವರದಿ ನೀಡಬೇಕು.**
>
> **–ಶಿಲ್ಪನಾಗ್, ಜಿಲ್ಲಾಧಿಕಾರಿ**

ಚಾಮರಾಜನಗರ, ನ.6–ಜಿಲ್ಲೆಯ ಪ್ರತಿಯೊಂದು ಜನನ–ಮರಣ ಘಟನೆಗಳ ಮಾಹಿತಿಯನ್ನು ಯಾವುದೇ ವಿಳಂಬಕ್ಕೆ ಅವಕಾಶವಾಗದಂತೆ ಸಕಾಲದಲ್ಲಿ ನೋಂದಣಿ ಮಾಡಲು ಪರಿಣಾಮಕಾರಿ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ನಾಗರಿಕ ನೋಂದಣಿ ಪದ್ಧತಿಯಡಿ ಜನನ–ಮರಣಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿ ಗ್ರಾಪಂ ಕಾರ್ಯದರ್ಶಿಯವರನ್ನು ಜನನ–ಮರಣ ಉಪ ನೋಂದಣಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಆಯಾ ಗ್ರಾಪಂ ಕಾರ್ಯದರ್ಶಿಗಳು ತಮ್ಮ ಕ್ಷೇತ್ರವ್ಯಾಪ್ತಿಯ ಪ್ರತಿಯೊಂದು ಜನನ–ಮರಣಗಳ ಮಾಹಿತಿಯನ್ನು 21 ದಿನದೊಳಗೆ ನೋಂದಾಯಿಸುವ ಜವಾಬ್ದಾರಿಯನ್ನು ನಿಗದಿತ ಕಾಲಮಿತಿಯಲ್ಲಿ ನಿರ್ವಹಿಸಬೇಕು. ಯಾವುದೇ ವಿಳಂಬಕ್ಕೆ ಆಸ್ಪದವಾಗದಂತೆ ನೋಡಿಕೊಳ್ಳಬೇಕು ಎಂದು ಆದೇಶಿಸಿದರು.

ಪ್ರಸ್ತುತ ನಗರ ಪ್ರದೇಶ ವ್ಯಾಪ್ತಿಯಲ್ಲಿ ಜಿಲ್ಲಾ ಆಸ್ಪತ್ರೆ, ಸಾರ್ವಜನಿಕ ಆಸ್ಪತ್ರೆ, ನಗರಸಭೆ, ಪುರಸಭೆ ಪಟ್ಟಣ ಪಂಚಾಯಿತಿಗಳು, ಗ್ರಾಮೀಣ ಪ್ರದೇಶಗಳ ವ್ಯಾಪ್ತಿಯಲ್ಲಿ ಗ್ರಾಮಾಡಳಿತ ವೃತ್ತಗಳು, ಗ್ರಾಮ ಪಂಚಾಯಿತಿ, ಪ್ರಾಥಮಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳು ನಾಗರಿಕ ನೋಂದಣಿ ಘಟಕಗಳಾಗಿ ಕಾರ್ಯನಿರ್ವಹಿಸುತ್ತಿವೆ ಈ ಎಲ್ಲಾ ಘಟಕಗಳ ಉಪ ನೋಂದಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಪ್ರತಿಯೊಂದು ಜನನ–ಮರಣ ನೋಂದಣಿಯಲ್ಲಿ ಯಾವುದೇ ವ್ಯತ್ಯಾಸಗಳಾಗದಂತೆ ನಿಗಾ ವಹಿಸುವಂತೆ ಕಟ್ಟುನಿಟ್ಟಿನ ಎಚ್ಚರಿಕೆ ವಹಿಸಬೇಕು ಎಂದರು.

ಮಗು ಜನಿಸಿದ ತಕ್ಷಣ ಉಚಿತ ಜನನ ನೋಂದಣಿ ಪ್ರಮಾಣ ಪತ್ರದೊಂದಿಗೆ ಮಗುವನ್ನು ತಾಯಿಯೊಂದಿಗೆ ಮನೆಗೆ ಕಳುಹಿಸುವ ಸದುದ್ದೇಶದ ಚಿಂತನೆ ನಡೆಸಿ ಸರ್ಕಾರ ಜನನ–ಮರಣ ನೋಂದಣಿಗಾಗಿ ಈ–ಜನ್ಮ ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ. ತಂತ್ರಾಂಶದಲ್ಲಿ ನೋಂದಣಿಗೆ ಸಂಬಂಧಿಸಿದ ರಾಜ್ಯ, ಜಿಲ್ಲಾ, ತಾಲೂಕು, ಹೋಬಳಿ ಹಾಗೂ ಗ್ರಾಮಮಟ್ಟದ ಮಾಹಿತಿಗಳನ್ನು ಆನ್‌ಲೈನ್‌ನಲ್ಲೇ ಪಡೆಯಲು ಸಾಧ್ಯವಾಗಲಿದೆ. ಇದರ ಸದ್ಬಳಕೆ ಪರಿಣಾಮಕಾರಿಯಾಗಿ ಆಗಬೇಕು ಎಂದು ತಿಳಿಸಿದರು.

ಜಿಲ್ಲೆಯ ಕಾಡಂಚಿನ ಪ್ರದೇಶ ಹಾಗೂ ಹಾಡಿ–ಪೋಡುಗಳು ಸಾಕಷ್ಟು ಸಂಖ್ಯೆಯಲ್ಲಿದ್ದು, ಜನನ–ಮರಣ ನೋಂದಣಿ ಬಗ್ಗೆ ಆದಿವಾಸಿಗಳಿಗೆ ಹೆಚ್ಚಿನ ಅರಿವು ಮೂಡಿಸಬೇಕು. ಈ ಕುರಿತ ನಾಗರಿಕ ನೋಂದಣಿ ಪದ್ಧತಿಯನ್ನು ಉತ್ತಮಪಡಿಸಲು ಎಲ್ಲಾ ಹಂತದಲ್ಲಿ ಅಧಿಕಾರಿಗಳಿಗೆ ತರಬೇತಿ ನೀಡಬೇಕು. ನೋಂದಣಿ ಪ್ರಗತಿಗಾಗಿ ಗ್ರಾಪಂ ಮಟ್ಟದಲ್ಲಿ ತರಬೇತಿ ಹಾಗೂ ಕಾರ್ಯಾಗಾರ ಆಯೋಜಿಸಬೇಕು. ಈ ಕುರಿತ ಮಾರ್ಗಸೂಚಿಗಳನ್ನು ಮುದ್ರಿಸಿ, ಕಿರು ಕೈಪಿಡಿ ತಯಾರಿಸಿ ಎಲ್ಲಾ 130 ಗ್ರಾಪಂ, ನಗರ, ಸ್ಥಳೀಯ ಸಂಸ್ಥೆಗಳಿಗೆ ವಿತರಿಸುವಂತೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಮಹೇಶ್, ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಪ್ರಮೋದ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಮಂಜುನಾಥ್, ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕಿ ಸುಧಾ, ತಹಸೀಲ್ದಾರ್ ಗಿರಿಜ, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಅದ್ಧೂರಿ ಕನಕ ಜಯಂತಿ ಆಚರಣೆಗೆ ನಿರ್ಧಾರ



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಕನಕ ಜಯಂತಿ ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ ಮಾತನಾಡಿದರು.

ಚಾಮರಾಜನಗರ, ನ.6–ಜಿಲ್ಲಾ ಕೇಂದ್ರದಲ್ಲಿ ನ.18ರಂದು ಭಕ್ತ ಶ್ರೇಷ್ಠ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಅದ್ಧೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಕನಕ ಜಯಂತಿ ಆಚರಣೆ ಸಂಬಂಧ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು. ಜಯಂತಿ ಅಂಗವಾಗಿ ನಗರದ ಜಿಲ್ಲಾಡಳಿತ ಭವನ ಆವರಣದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಕಾರ್ಯಕ್ರಮ ನಡೆಯಲಿದೆ. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಪ್ರವಾಸಿ ಮಂದಿರದಿಂದ ಹೊರಡುವ ಮೆರವಣಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಜಿಲ್ಲಾಡಳಿತ ಭವನ ತಲುಪಲಿದೆ. ಅಲಂಕೃತ ಬೆಳ್ಳಿ ರಥದಲ್ಲಿರಿಸಿದ ಕನಕದಾಸರ ಭಾವಚಿತ್ರ ಮೆರವಣಿಗೆಯಲ್ಲಿ ವಿವಿಧ ಕಲಾತಂಡಗಳು ಭಾಗವಹಿಸಲಿವೆ ಎಂದು ಅಪರ ಜಿಲ್ಲಾಧಿಕಾರಿ ತಿಳಿಸಿದರು.

ಆಹ್ವಾನ ಪತ್ರಿಕೆಯನ್ನು ಶಿಷ್ಟಾಚಾರವೇ ಮುದ್ರಿಸಿ ಎಲ್ಲಾ ಜನಪ್ರತಿನಿಧಿಗಳನ್ನು ಕಾರ್ಯಕ್ರಮಕ್ಕೆ ಆಮಂತ್ರಿಸಬೇಕು. ಕನಕದಾಸರ ಮಾಹಿತಿಯುಳ್ಳ ಕರಪತ್ರಗಳನ್ನು ಸಾರ್ವಜನಿಕರಿಗೆ ವಿತರಿಸಬೇಕು. ರಂಗಮಂದಿರದ ಹೊರ ಹಾಗೂ ಒಳಾವರಣ ಸ್ವಚ್ಛತೆಯಿಂದ ಕೂಡಿರುವಂತೆ ನೋಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯ್‌ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ, ನಗರಸಭೆ ಹಿರಿಯ ಆರೋಗ್ಯ ನಿರೀಕ್ಷಕಿ ಸುಷ್ಮಾ, ಸಮಾಜದ ತಾಲೂಕು ಅಧ್ಯಕ್ಷ ಆರ್.ಉಮೇಶ್, ಪ್ರಧಾನ ಕಾರ್ಯದರ್ಶಿ ಬಿ.ಶಿವಲಿಂಗೇಗೌಡ, ಮುಖಂಡರಾದ ಮಹೇಶ್, ಸೂರ್ಯಕುಮಾರ್, ಮರಿಸ್ವಾಮಿ, ಹೊನ್ನಳ್ಳಿ ಬಸವಣ್ಣ, ನವೀನ್ ಹೊಂಗನೂರು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ
ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು ವಯೋಮಿತಿ 18–30 ವಿದ್ಯಾರ್ಹತೆ : ಪಿಯುಸಿ, ಯಾವುದೇ ಡಿಗ್ರಿ ಸೆರಾಕೇರ ಮೈಸೂರು ಹೆಲ್ತ್ ಸೆಂಟರ್ ನ್ಯೂ ಕಾಂತರಾಜು ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು
9980623130

ನಿವೇಶನ ಮಾರಾಟಕ್ಕಿದೆ
30x40 ಉತ್ತರ ದಿಕ್ಕು
ಆರ್.ಕೆ.ಜಿ. ಬಡಾವಣೆ ರಾಘವೇಂದ್ರ ಮಠದ ಹತ್ತಿರ, ಮೊಸಂಬಾಯನಹಳ್ಳಿ ರಸ್ತೆ, ಚಿಕ್ಕಳ್ಳಿ, ಮೈಸೂರು
ಮುಡಾ ಅನುಮೋದಿತ ಬಡಾವಣೆ.
95917 19591

"ಶೋಭಾ ಡೆವಲಪರ್ಸ್"
ಸೈಟುಗಳು ಮಾರಾಟಕ್ಕಿವೆ
@
"ಶೋಭ ರಿಟ್ರೀಟ್" ಲೇಔಟ್, ಬೋಗಾದಿ ರಸ್ತೆ, ಮೈಸೂರು.
Mob: 9886048471

MUDA SITE FOR SALE
ಇನ್ಫೋಸಿಸ್ ಪಕ್ಕದ "K.B.L. ಸಿಲಿಕಾನ್ ಸಿಟಿ" ಲೇಔಟ್ನಲ್ಲಿ ಸೈಟುಗಳು ಲಭ್ಯ.
Mob: 9886048471

ಬೇಕಾಗಿದ್ದಾರೆ
ಅಕೌಂಟೆಂಟ್ ಬೇಕಾಗಿದ್ದಾರೆ (ಪುರುಷ/ಮಹಿಳೆ)
15000+ವೇತನ
9844163411

ತಕ್ಷಣ ಬೇಕಾಗಿದ್ದಾರೆ
Office ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ
9880151303

ಟೈಲರ್‌ಗಳು ಬೇಕಾಗಿದ್ದಾರೆ
ಬನ್ನಿಮಂಟಪದಲ್ಲಿರುವ ಕಾರ್ಖಾನೆಗೆ ನುರಿತ ಟೈಲರ್‌ಗಳು ಹಾಗೂ ಸಹಾಯಕರು ಬೇಕಾಗಿದ್ದಾರೆ.
ಸಂಬಳ: 12000/–
88841-79981

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50–50. ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ
9901080314

MUDA Approved Site For Sale
30X40, North Facing T.Narasipura Road, Behind Police Layout, Mysuru.
Price-45Lakhs (Slifhtly Negotiable)
9620614970

Document Lost
I, Shiva Prasad, No. 245, Teachers Layout, Vivekananda Block, Mysore-570 019, have lost BDA Allotment Letter, Khata Patra, No objection certificate (Document No. / Identification: 4569, BDA / RO (W) 2587 / NPKL / I/2/ 17-18, BDA/DS-2/NPKL/B2-SI-2587 / 2016-17. Finders please contact:
Mob: 9980557880

SITES for SALE
JP Nagar Ring Road
30x40,34Lakhs
Near Gurur Bus Stop, Ramabainagar,Mysore.
DTCP approved (Corporation limits)
1.5 Kms From JP Nagar Ring Road
8660105902

ತಿಂಡಿ ಪದರ್ಥಗಳನ್ನು ತಯಾರಿಸುವ ಅಂಗಡಿಯೊಂದಕ್ಕೆ
* ಹೆಲ್ಪರ್ (ಮಹಿಳೆಯರು)
* ಪಾತ್ರೆ ತೊಳೆಯಲು * ಕ್ಯಾಶಿಯರ್
* ಕೌಂಟರ್ ಸೇಲ್ * ಡ್ರೈವರ್
* ಸ್ಟೋರ್ ಕೀಪರ್
* ಚಾಟ್ಸ್ ಮಾಸ್ಟರ್ ಬೇಕಾಗಿದ್ದಾರೆ
9606116663/4

ನೇರ ನೇಮಕಾತಿ
10th, PUC, ಮೇಲ್ಪಟ್ಟಿರುವ Age (18-22) Tranee Manager ಗಳಾಗಿ (9600/–ರಿಂದ 18500/–)PM EARN, *NO FEE*
ಪರಸ್ಥಳದವರಿಗೆ ಮಾತ್ರ ವಸತಿ ಖಿದ್ಧಾಗಿ
ಸಂಪರ್ಕಿಸಿ: (9am to 5.30pm)
ಕಾಲ್: 9342827788

ಶ್ರೀ ಗೌರೀಶಂಕರ ಟ್ರಾವೆಲ್ಸ್
12-12-24 (9 ದಿನ): ಅಹಮದಾಬಾದ್, ಮಾತೃಗಯಾ, ನಾಗೇಶ್ವರ, ಸೋಮನಾಥ್, ದ್ವಾರಕ, SVP ಸ್ಟ್ಯಾಚ್ಯು, ವಡೋದರ, ಉಜ್ಜಯಿನಿ, ಓಂಕಾರೇಶ್ವರ ಇತ್ಯಾದಿ.
18-1-25 (4 ದಿನ): ಶಿರಡಿ, ಭೀಮಶಂಕರ, ಘೃಷ್ಣೇಶ್ವರ, ಎಲ್ಲೋರ, ತ್ರ್ಯಂಬಕೇಶ್ವರ, ನಾಸಿಕ್ ಇತ್ಯಾದಿ.
(ವಿಮಾನ, ಬಸ್, ಊಟ, ರೂಂ)
Mob: 9620002114

ತಕ್ಷಣ ಬೇಕಾಗಿದ್ದಾರೆ
ಟಿ.ನರಸೀಪುರ ರಸ್ತೆ, ಆಲನಹಳ್ಳಿ ಚಿಕ್ಕಳ್ಳಿ, ಮೇಟಗಳ್ಳಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಆಫೀಸರ್ ಸೆಕ್ಯೂರಿಟಿ ಸೂಪರ್ ವೈಸರ್ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
8971367078
8660309477

SITE FOR SALE
30X50 S/F
BRAHMANANDA SAGARA PHASE-1
8050821108

ಬಾಡಿಗೆಗೆ ದೊರೆಯುತ್ತದೆ
ಮೈಸೂರು ಸಿಟಿ, ಗೋಕುಲಂ, ಕಾಂಟೂರ್ ರಸ್ತೆ ಮನೆ ನಂಬರ್ 805, (ಆದಿತ್ಯ ಆಸ್ಪತ್ರೆ ಎದುರು) ಆಫೀಸ್ ಕಟ್ಟಡ ಬಾಡಿಗೆಗೆ ದೊರೆಯುತ್ತದೆ ಸಂಪರ್ಕಿಸಿ:
9448160633

ಬೇಕಾಗಿದ್ದಾರೆ
ಲೇಡಿ ಆಫೀಸ್ ಅಸಿಸ್ಟೆಂಟ್
ಪಿಯುಸಿ / ಯಾವುದೇ ಪದವಿ
ಬೇಸಿಕ್ ಕಂಪ್ಯೂಟರ್ ಜ್ಞಾನ ತಿಳಿದಿರಬೇಕು
ಶಕ್ತಿನಗರದ ಸುತ್ತಮುತ್ತಲಿನವರಿಗೆ ಆದ್ಯತೆ
ಶಕ್ತಿನಗರ, ಮೈಸೂರು
98806 86345

HOUSE SALE
Kuvempunagar
MUDA,GF 2 BHK,FF 2 Rooms,Residential Old House,35x55,N/F, Park Opposite,
Price -2.10 Cr
Near Vijaya Bank Circle, Contact Owner,Brokers Excuse
9035412545

REQUIRED IMMEDIATELY
DRIVERS SALESMEN
MYSORE & BANGALORE
9141835175
6366610175
careersmysuru@gmail.com

ಮನೆ ಭೋಗ್ಯಕ್ಕಿದೆ
30x40, 2 BHK, 100% Vaastu with solar, granite flooring Aravind Nagar (Kuvempunagar), Mysore. 20 Lakhs (Negotiable).
Mob: 9844756558

ಜಮೀನು ಮಾರಾಟಕ್ಕಿದೆ
5 ಎಕರೆ
ಸಾಲಿಗ್ರಾಮ ಕೆ.ಆರ್.ನಗರ
9916666037

SITE FOR SALE
20X30, 30X40 (Bank Loan Available)
Sri Rampura Ring Road, Mysuru
8050345574

ಸಂಪು
ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

ಮನೆ ಮಾರಾಟಕ್ಕಿದೆ
ಮೈಸೂರಿನಲ್ಲಿ 30X40 1ಮನೆ 20X30 5ಮನೆ ಇರುವಂತ 30X40 ಮೂರು ಅಂತಸ್ತಿನ 50–60 ಸಾವಿರ ಬಾಡಿಗೆ ಬರುವಂತ ಕಟ್ಟಡ ಮಾರಾಟಕ್ಕಿದೆ
ಬ್ರೋಕರ್‌ಗಳಿಗೆ ಅವಕಾಶವಿಲ್ಲ
9880952365

ಬೇಕಾಗಿದ್ದಾರೆ
ಮೈಸೂರಿನ ಟ್ರಾವೆಲ್ಸ್ ಕಂಪನಿಗೆ
ಕ್ಯಾಬ್ ಡ್ರೈವರ್ಸ್ ಬೇಕಾಗಿದ್ದಾರೆ
ಸಂಪರ್ಕಿಸಿ:
98806 86345

ಸಂಪು
ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ನಿವೇಶನಗಳು ಮಾರಾಟಕ್ಕಿವೆ
ಬನ್ನೂರು ರಸ್ತೆಯಲ್ಲಿ ಭುಗತಗಳ್ಳಿ ಚೆಕ್ ಪೋಸ್ಟ್ ಹಾಗೂ ವಾಜಮಂಗಲ ಗೇಟ್ ಹತ್ತಿರ
30x40, 40x40, 40x60
ನಿವೇಶನಗಳ ಮಾಹಿತಿಗಾಗಿ ಸಂಪರ್ಕಿಸಿ
ಮೈಸೂರು ಈಸ್ಟ್ ಪ್ರಾಪರ್ಟೀಸ್
9535830530

SITE AVAILABLE FOR RENT
35X50 Site Suitable for Garage, Small Nursery Etc Near Lokanayakanagara, Hebbal, Mysore
9980878771

WANTED DRIVERS
For 6 Wheel Container Length 24 Feet
7090399319
7204959799

COMMERCIAL SHOP FOR RENT
North facing, 12 x 32 ft, on busy New Kanthraja urs Main Road, Near Shardadevinagar Circle, Mysuru
Call: 9880581377

SBIT TRAVELS PVT LTD
Group Tour
5 NIGHTS – 6 DAYS
SHIMLA - MANALI CHANDIGARH
@ 38,600/-
Fixed Group Departure November: 22nd
9901524127 | 9902524127
(Saraswathipuram, Mysuru)

Sudarshan Saur
SOLAR WATER HEATER
ಸಮಸ್ತ ಜನತೆಗೆ ದಸರಾ ಹಬ್ಬದ ಶುಭಾಶಯಗಳು

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
ಸನ್‌ಜೋನ್ ಸೋಲಾರ್ ಸಿಸ್ಟಂ
ವಿಶ್ವಮಾನವ ಜೋಡಿ ರಸ್ತೆ, ಕುವೆಂಪುನಗರ, ಮೈಸೂರು
9845175443

MUDA APPROVED SITE
30x40 S/E Corner @ Rs. 27 Lac
40x40 S/E Corner @ Rs 42 Lac
Bank Loan Available
Next to LBS Nagara Behind Chamundi Hill
95385 83377

WANTED
SKILL TRAINER FOR INSTITUTE
PUC/ANY DEGREE
MALE/FEMALE
9611366786

ಮನೆ ಬಾಡಿಗೆಗೆ/ಭೋಗ್ಯಕ್ಕೆ ಇದೆ
ಶ್ರೀರಾಂಪುರ ರಿಂಗ್ ರಸ್ತೆ ಯುನಿವರ್ಸಿಟಿ ಲೇಔಟ್ ಎದುರು ಗಾಯಿತ್ರಿ ಬಡಾವಣೆಯಲ್ಲಿ
1ನೇ ಮಹಡಿ 2BHK
2ನೇ ಮಹಡಿ 1BHK
ಮನೆ ಲಭ್ಯವಿದೆ.
9481041871
9448092818

ಸುವರ್ಣಾವಕಾಶ
ಪ್ರಸಿದ್ಧ ಬ್ಯಾಂಕ್ ಸಮೂಹದಿಂದ ಎಲ್ಲಾ Insurance Agents ಗಳಿಗೆ ಸುವರ್ಣಾವಕಾಶ
(Direct Partner)
Life / Health/ General
Salary - PF - ESI ಸೌಲಭ್ಯವಿದೆ
Aged above 30 Year's
9008799156

ಸಂಪು
ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
7411565140, 7892046990

ಸಂಪು
ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ: 10,000
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ,
Field Executive ಬೇಕಾಗಿದ್ದಾರೆ
Collection Field ಸಂಬಳ–15000),
Team Manager ಬೇಕಾಗಿದ್ದಾರೆ. (ಸಂಬಳ–20000)
8150005111

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ, ಮೈಸೂರು.
9916908454

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಏರಿಯಾ 8 ಗಂಟೆ ಜನರಲ್ ಶಿಫ್ಟ್ 45 ವರ್ಷ ಒಳಗಿನ ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ಅನುಭವ ಕಂಪ್ಯೂಟರ್ ನಾಲೆಡ್ಜ್ ಇರುವವರಿಗೆ ಆದ್ಯತೆ ಹಾಗೂ 12 ಗಂಟೆ ಹಗಲು ಮತ್ತು ರಾತ್ರಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
9482350308
9731976148

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೆ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ
9731891409

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನೀಡುತ್ತೇವೆ.
ಒಂದು ಗ್ರಾ ಚಿನ್ನಕ್ಕೆ ರೂ. 7600 (24 CT).
Mob: 9108146123

HOUSE FOR SALE
NORTH EAST CONSTRUCTIONS "Turn your Dream into Address"
20x30 - 3 BHK, Brand New House
Pay Just 20 lakhs Down Payment & Remaining Easy EMI
Call: 98800 65122, 76193 99919

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Pharma Assistant	PUC / Degree

0821-2499188, 9880186386

ಮನೆಯಲ್ಲಿ ತಯಾರು ಮಾಡಿರುವ ಕ್ಯಾರಿಯರ್ ಊಟ ದೊರೆಯುತ್ತದೆ.
ಸಂಪರ್ಕಿಸಿ:
Mob: 9945618151

ಶೋಭಾ ಪ್ರಾಪರ್ಟೀಸ್
ಪೂರ್ಣ ಅಭಿವೃದ್ಧಿಹೊಂದಿದ ಸೈಟ್‌ಗಳು ಮಾರಾಟಕ್ಕಿವೆ Govt. ಹೈಸ್ಕೂಲ್ ಮತ್ತು ಕಾಲೇಜು ಹತ್ತಿರ ಇಲವಾಲ ನಂತರ
9880774395

BUILT TO SUIT
3500 Square Feet Near BSNL Office Opp. to Jyothi Hospital, Rajkumar Road, Mysuru
9448294483
9663062222

ವೆರಿಕೋಸ್ ವೇನ್ಸ್ ಸಮಸ್ಯೆಯೇ ?
ವೆರಿಕೋಸ್ ವೇನ್ಸ್ ಅಲ್ಸರ್ ತೊಂದರೆಯೇ?
ಯಾವುದೇ ಔಷಧಿ ಸೇವನೆ ಮತ್ತು ಆಪರೇಷನ್ ಇಲ್ಲದೆ ತಜ್ಞರಿಂದ ಸಂಶೋಧಿಸಿದ ಔಷಧಿ / ಮುಲಾಮು / ತೈಲವನ್ನು ಮೇಲೆ ಮಸಾಜ್ ಮಾಡುವ ಮೂಲಕ ಪರಿಣಾಮಕಾರಿ ಚಿಕಿತ್ಸೆಯನ್ನು ನೀಡಲಾಗುವುದು.
ಡಾ॥ ಸಹನಾ, BAMS, PGDAN PGDAC ಮೈಸೂರು
Mob: 8861137033

FOR SALE
1. Properties at Kuvempu Nagar Starting @ 35L
2. 20x30 Site @Vijaya Nagar 4th stg
3. 14x100 Old Hs @ Ramavilas Rd
4. Old Hs @ Krishnamurthy Puram
5. Properties For Sale at Vidyaranyapuram
6. 20x30 Site Near SBM Lyt, Bogadhi
7. Ready to Move Apartments @ Hebbal
8. Commercial Properties @ Saraswathi Puram, Kuvempu Ngr & Hunsur Rd
PRAKRUTHI PROPERTIES
95386 90359, 90359 90359

ಬೇಕಾಗಿದ್ದಾರೆ
ಹೌಸ್‌ಕೀಪಿಂಗ್ ಹುಡುಗರು ಹೌಸ್‌ಕೀಪಿಂಗ್ ಮಹಿಳೆಯರು ಹೋಟೆಲ್ ಉದ್ಯಮದಲ್ಲಿ ಅನುಭವವಿರುವ, ಮೈಸೂರಿನ ಸಂತ ಫಿಲೋಮಿನಾ ಚರ್ಚ್ ಹತ್ತಿರ, ಅಶೋಕ ರಸ್ತೆಯಲ್ಲಿರುವ ಪ್ರತಿಷ್ಠಿತ ಹೋಟೆಲ್ (ಲಾಡ್ಜ್), 30 ರೂಮುಗಳು ಹೊಂದಿದೆ. ಸಂಪರ್ಕಿಸಿ:
6363477213, 9538651845

30x50 SITE FOR SALE
Treasury Layout, Opp. Park East (Near Dattagalli)
Call: 9880273834

WANTED
Exp. Cooks & Supervisors for reputed company in Mysuru.
Best salary + EPF & ESI.
Call / Whatsapp
8951189182, 9880656245

ಬೇಕಾಗಿದ್ದಾರೆ
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಪಾಸ್ / ಫೇಲ್
ಸಂಬಳ: 10000/– ದಿಂದ 15000/–ದವರೆಗೆ
8050181446

SITE FOR SALE
20X30 South Facing Site Vijayanagar 4th Stage, 2nd Phase Near Hinkal Bus Depot
7349409838
9731000761

WANTED
Office Executives, M/F. Education: 10th / PUC. Computer knowledge must (MS office). Salary depends on experience. Location: Near Devegowda Circle, Mysore.
For more details contact us / Whatsapp your bio-data to below No.
8197999126, 8105824999

ಫ್ಲಾಟ್ ಭೋಗ್ಯಕ್ಕಿದೆ
2 ಬಿಹೆಚ್‌ಕೆ, ವಿಜಯನಗರ, 1ನೇ ಹಂತ, ಮೈಸೂರು.
ರೂ. 14 ಲಕ್ಷಗಳು. ಸಂಪರ್ಕಿಸಿ:
8762705887, 9986664688

ಮನೆ ಭೋಗ್ಯಕ್ಕಿದೆ
30x45, 3 ಬಿಹೆಚ್‌ಕೆ, ಉತ್ತರ ದಿಕ್ಕು, ಕಾರ್ನರ್ ಹೊಸ ಮನೆ, ಪ್ರಶಾಂತ ನಗರ, 1ನೇ ಘಟ್ಟ, ದಡದಹಳ್ಳಿ, ಮೈಸೂರು (ರೂ. 14 ಲಕ್ಷಗಳು) ಮನೆ ಭೋಗ್ಯಕ್ಕಿದೆ.
8050257887, 8762705887

ವಧು–ವರರಿಗೆ ಸಂಪರ್ಕಿಸಿ

ಒಕ್ಕಲಿಗ, ಕುರುಬ, ನಾಯಕ ಲಿಂಗಾಯತ, ಹಾಗೂ ಎಲ್ಲಾ ಜಾತಿಯ ವಧು–ವರರು, ವಿಚ್ಛೇದಿತರು, ವಿಧುರ– ವಿಧವೆಯರು
9980273659
9731066259

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ವಿದ್ಯಾಭ್ಯಾಸ: SSLC ಮೇಲ್ಪಟ್ಟು, ವಯಸ್ಸು–23 ರಿಂದ 50ರ ಒಳಗಿರಬೇಕು.
ಸಂಬಳ: 19000/– ಸೌಲಭ್ಯ ESI, EPF, Bonus, Gratuity, Free Uniform, Insurance.
Place: Hebbal Industrial Area
9538014456
9538886654

ತಕ್ಷಣ ಬೇಕಾಗಿದ್ದಾರೆ
ಮನೆಯಲ್ಲೇ ಕುಳಿತುಕೊಂಡು Telecalling ಮಾಡಲು ಆಸಕ್ತಿಯುಳ್ಳ 20 ಯುವತಿಯರು ತಕ್ಷಣ ಬೇಕಾಗಿದ್ದಾರೆ,. ವಸತಿಯೊಂದಿಗೆ. SSLC/PUC/ITI/ Any Degree. :ಅನು:
9008357980
7338070133

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು
6364748485

WANTED TEACHERS/AAYA
LITTLE STAR ABC MONTESSORI
ANY DEGREE, FRESHERS CAN APPLY ENGLISH MANDATORY, FEMALE, CANDIDATES ONLY, NEAR TO VIJAYANAGAR, MYSORE
8884970282
0821-2955499

ಬೇಕಾಗಿದ್ದಾರೆ ಆಯುರ್ವೇದ ಸೆಂಟರ್‌ನಲ್ಲಿ ಮಸಾಜ್ ಮಾಡಲು ಹುಡುಗರು
ಬೇಕಾಗಿದ್ದಾರೆ
ತರಬೇತಿ ಇರುವವರು/ಇಲ್ಲದವರಿಗೆ ತರಬೇತಿ ನೀಡಲಾಗುವುದು
ಸ್ಥಳ: ಬೋಗಾದಿ 2ನೇ ಹಂತ, ಮೈಸೂರು
8722809551

ಜಮೀನು ಮಾರಾಟಕ್ಕಿದೆ
100x115 N/F
11 ಗುಂಟೆ ದೇವಗಳ್ಳಿ ಮುಖ್ಯರಸ್ತೆ SBM ಲೇಔಟ್, ಶ್ರೀರಾಂಪುರ ರಿಂಗ್ ರಸ್ತೆಯಿಂದ 6 ಕಿ.ಮೀ
ಗುಂಟೆಗೆ 8 ಲಕ್ಷ
7892351210

SITE FOR SALE
20X30
Devanur 2nd Stage Mysore
9945007242

ಕಾರ್ ಡ್ರೈವರ್ ಬೇಕಾಗಿದ್ದಾರೆ
(4 ವರ್ಷ ಅನುಭವ ಮೇಲ್ಪಟ್ಟ)
ಆಕರ್ಷಕ ಸಂಬಳದೊಂದಿಗೆ
ವಿಜಯನಗರ 4ನೇ ಹಂತ, ಮೈಸೂರು
9986014168

ನಿವೃತ್ತ ಅಧಿಕಾರಿಗಳಿಗೆ ಉದ್ಯೋಗ
ವಿದ್ಯಾರ್ಹತೆ: ಯಾವುದೇ ಪದವಿ,
ವೇತನ: ಮಾಸಿಕ ರೂ. 30000/– ಮತ್ತು ಇತರೆ ಭತ್ಯೆಗಳು ಸಂದರ್ಶನಕ್ಕೆ ಹಾಜರುಪಡಿಸಬೇಕಾದ ದಾಖಲಾತಿಗಳು.
1) ವಿದ್ಯಾರ್ಹತೆ ಅಂಕಪಟ್ಟಿ, 2) ಆಧಾರ್ ಕಾರ್ಡ್, 3) ಪಾನ್ ಕಾರ್ಡ್, 4) ಬ್ಯಾಂಕ್ ಪಾಸ್ ಬುಕ್, 5) ಪಾಸ್‌ಪೋರ್ಟ್ ಅಳತೆ ಫೋಟೋ–1
9886647852

2 ಮಳಿಗೆ ಬಾಡಿಗೆಗೆ ಇದೆ ಕಮರ್ಷಿಯಲ್
(330 Sqft & 300 sqft)
5ನೇ ಅಡ್ಡರಸ್ತೆ, (ಮಯೂರ ಸರ್ಕಲ್ ಹತ್ತಿರ) ಹೆಬ್ಬಾಳ್ 2ನೇ ಹಂತ, ಮೈಸೂರು–17 (ಲಕ್ಷ್ಮಿ ಡ್ರೈವಿಂಗ್ ಸ್ಕೂಲ್ ಕಾಂಪ್ಲೆಕ್ಸ್‌ನಲ್ಲಿ)
9986445196

SITE FOR SALE
40x60 Site
60 feet Road
Dollars Layout
University Layout
9740088990

ಬೇಕಾಗಿದ್ದಾರೆ
ಪುರುಷ ಸಸ್ಯಹಾರಿ ಅಡುಗೆ ತಯಾರಕರುESI, PF ಮತ್ತು ವಸತಿ ಸೌಲಭ್ಯವಿರುತ್ತದೆ.
ವಿಕ್ರಂ ಕಾಲೇಜ್ ಆಫ್ ನರ್ಸಿಂಗ್, ಮೈಸೂರು
8310846772
9535096161

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರತಿಷ್ಠಿತ ಆಫೀಸ್ ಶೋರೂಂ ಮತ್ತು ಕಂಪನಿಗಳಿಗೆ 7th, 10th, PUC, ITI, Any Degree, ITI, Diploma, Pass/Fail ಆದ ಯುವಕ / ಯುವತಿಯರು Packing, Helper, Telecalling, Data Entry Receptionist, Line Incharge, Billing ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಷರತ್ತು ಅನ್ವಯ ಸಂಬಳ: 14500/-39000/- (ESI+PF OT) ಸೇರಿ
6366141586
9886488434

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ತಿಂಗಳ ಅಂತ್ಯದಲ್ಲಿ ಧನುಷ್ಕೋಟಿಯಲ್ಲಿ
ಕಾವೇರಿ ಜಲಪಾತೋತ್ಸವ
ಅಗತ್ಯ ಸಿದ್ಧತೆಗಳ ಬಗ್ಗೆ ಅಧಿಕಾರಿಗಳೊಂದಿಗೆ ಶಾಸಕರ ಚರ್ಚೆ



ಚುಂಚನಕಟ್ಟೆ ಗ್ರಾಮದಲ್ಲಿ ಧನುಷ್ಕೋಟಿ ಕಾವೇರಿ ಜಲಪಾತೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಶಾಸಕ ಡಿ.ರವಿಶಂಕರ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಹಾಗೂ ಇನ್ನಿತರ ಇಲಾಖಾಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದರು.

ಚುಂಚನಕಟ್ಟೆ, ನ.6– ಈ ತಿಂಗಳ ಅಂತ್ಯದಲ್ಲಿ ಚುಂಚನಕಟ್ಟೆಯ ಧನುಷ್ಕೋಟಿಯಲ್ಲಿ ಕಾವೇರಿ ಜಲಪಾತೋತ್ಸವ ವೈಭವದಿಂದ ಆಚರಿಸಲು ಜಿಲ್ಲಾ ಹಾಗೂ ತಾಲೂಕು ಆಡಳಿತ ಪೂರ್ವ ತಯಾರಿ ಮಾಡಿಕೊಳ್ಳುವಂತೆ ಶಾಸಕ ಡಿ.ರವಿಶಂಕರ್ ಸೂಚಿಸಿದರು.

ಇತಿಹಾಸ ಪ್ರಸಿದ್ಧ ಪ್ರವಾಸಿ ತಾಣ ಮತ್ತು ಯಾತ್ರಾ ಸ್ಥಳವಾಗಿರುವ ಚುಂಚನಕಟ್ಟೆ ಗ್ರಾಮದಲ್ಲಿ ಧನುಷ್ಕೋಟಿ ಕಾವೇರಿ ಜಲಪಾತೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಭೇಟಿ ನೀಡಿ, ಇಲಾಖಾಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಅಗತ್ಯತೆಗಳ ಪೂರ್ವ ಸಿದ್ಧತೆಗಳ ಬಗ್ಗೆ ಚರ್ಚಿಸಿ ಅವರು ಮಾತನಾಡಿದರು.

ಈಗಾಗಲೇ 5 ಬಾರಿ ಗ್ರಾಮದಲ್ಲಿ ಧನುಷ್ಕೋಟಿ ಕಾವೇರಿ ಜಲಪಾತೋತ್ಸವ ನಡೆದಿದ್ದು, ಎರಡು ಸಲ ಕೊರೊನಾ ಹಾಗೂ ಕಳೆದ ಬಾರಿ ತೀವ್ರಬರಗಾಲದಿಂದಾಗಿ ಕಾರ್ಯಕ್ರಮ ನಡೆಸಲು ಸಾಧ್ಯವಾಗಿರಲಿಲ್ಲ. ಆದರೆ, ಈ ಬಾರಿ ಮಳೆ ಸಮೃದ್ಧಿಯಾಗಿದ್ದು ಕಾವೇರಿ ನದಿಯಲ್ಲಿ ನೀರು ಹರಿಯುತ್ತಿದ್ದು ಜಲಪತೋತ್ಸವಕ್ಕೆ ಅನುಕೂಲಕರವಾಗಿದೆ. ಹಾಗಾಗಿ ಇರುವ ಅನುದಾನದಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಸಮನ್ವಯದಿಂದ ಅಚ್ಚುಕಟ್ಟಾಗಿ ಕಾರ್ಯಕ್ರಮ ನಡೆಸಬೇಕು ಎಂದು ಹೇಳಿದರು. ನಮ್ಮ ಕಾಂಗ್ರೆಸ್ ಸರಕಾರದ ಅವಧಿಯಲ್ಲೇ ಪ್ರಥಮ ಬಾರಿಗೆ ಈ ಕಾರ್ಯಕ್ರಮವನ್ನು ಇಲ್ಲಿ ನಡೆಸಲಾಗಿತ್ತು. ಅದಾದ ಮೇಲೆ ಸಮ್ಮಿಶ್ರ ಸರಕಾರ ಅವಧಿಯಲ್ಲಿಯೂ ನಡೆಸಲಾಗಿತ್ತು. ಪ್ರಸ್ತುತ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಜತೆಗೆ ತಾಲೂಕಿನಲ್ಲಿ ನಾನು ಕಾಂಗ್ರೆಸ್ ಪಕ್ಷದ ಶಾಸಕನಾಗಿ ಈ ಜಲಪಾತೋತ್ಸವ ಕಾರ್ಯಕ್ರಮ ನಡೆಸುತ್ತಿರುವೆ ಎಂದ ಅವರು, ನ.11ರಂದು ಜಿಲ್ಲಾ ಹಾಗೂ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಹಾಗೂ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳ ಪೂರ್ವಭಾವಿ ಸಭೆಯನ್ನು ಕರೆಯಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ, ಹುಣಸೂರು ಉಪವಿಭಾಗಾಧಿಕಾರಿ ವಿಜಯ್ ಕುಮಾರ್, ಸಾಲಿಗ್ರಾಮ ತಹಸೀಲ್ದಾರ್ ಎಸ್.ಎನ್ ನರಗುಂದ, ಆರ್.ಐ ಚಿದಾನಂದ ಬಾಬು, ಗ್ರಾಮಲೆಕ್ಕಿಗ ಮೌನಿಷ್, ಮುಖಂಡರಾದ ಕೃಷ್ಣ, ಭರತ್, ಸಿ.ಕೆ. ಕೃಷ್ಣ, ನವೀನ್‌ಕುಮಾರ್, ಅಶ್ವಥ್, ರಜನಿ, ಪರಮೇಶ್ ನಾಯಕ್, ಆಪ್ತಸಹಾಯಕ ನವೀನ್, ಪುನೀತ್ ಸೇರಿದಂತೆ ಮತ್ತಿತರರು ಇದ್ದರು.

ಕೆರೆ ತುಂಬಿಸುವಂತೆ ಆಗ್ರಹಿಸಿ ರೈತರ ಪ್ರತಿಭಟನೆ



ಕೆರೆಯನ್ನು ತುಂಬಿಸುವಂತೆ ಒತ್ತಾಯಿಸಿ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಂಜನಗೂಡು, ನ.6– ಕಪಿಲಾ ನದಿ ಮೂಲದಿಂದ ತಾಲೂಕಿನ ಹೆಡತಲೆ ಗ್ರಾಮಕ್ಕೆ ಹೊಂದಿಕೊಂಡಂತಿರುವ ಹಳೆಗುಂಡ್ಲ ಚನ್ನಯ್ಯನಕೆರೆಯನ್ನು ತುಂಬಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸಾಮೂಹಿಕ ನಾಯಕತ್ವದ ರೈತ ಸಂಘದ ಕಾರ್ಯಕರ್ತರು ಬೃಹತ್ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿದರು.

ತಾಲೂಕಿನ ಹೆಡತಲೆ ಗ್ರಾಮದಲ್ಲಿ ಸಂಘಟಿತರಾದ ರೈತ ಸಂಘದ ಪದಾಧಿಕಾರಿಗಳು, ಹೆಡತಲೆ, ಹೆಮ್ಮರಗಾಲ, ಕುಂಬ್ರಹಳ್ಳಿ ಗ್ರಾಮಗಳಲ್ಲಿ ಬೃಹತ್ ಪ್ರತಿಭಟನಾ ರ‍್ಯಾಲಿ ನಡೆಸಿ ಚೆನ್ನಯ್ಯನಕೆರೆ ಆವರಣದಲ್ಲಿ ಪ್ರತಿಭಟನೆಗೆ ಚಾಲನೆ ನೀಡಿದರು. ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್. ವಿದ್ಯಾಸಾಗರ್ ಮಾತನಾಡಿ, ಕಪಿಲಾ ನದಿ ಮೂಲಕ ಸಾವಿರಾರು ಟಿಎಂಸಿ ನೀರು ತಮಿಳುನಾಡಿಗೆ ಹರಿದು ಹೋಗುತ್ತಿದೆ. ತಮಿಳುನಾಡಿಗೆ ನೀರು ಬಿಡಲು ಮೊದಲು ಕಬಿನಿ ಅಣೆಕಟ್ಟೆಯಿಂದ ನೀರು ಹರಿಸಲಾಗುತ್ತದೆ. ಯಾಕೆಂದರೆ ಈ ಭಾಗದ ರೈತರು ಏನೂ ಕೇಳಲ್ಲ ಎಂಬ ನೀಚ ಕೆಟ್ಟ ಮನಸ್ಥಿತಿ ಸರ್ಕಾರಗಳಲ್ಲಿದೆ. ಕಪಿಲಾ ನದಿಯ ಮೂಲಕ ಹರಿದು ಹೋಗುತ್ತಿರುವ ನೀರಿನ ಪ್ರಮಾಣದಲ್ಲಿ ಕೇವಲ ಶೇ 4 ರಷ್ಟು ತುಂಬಿಸಿದರೆ ಸಾಕು ಎಂದರು.

ಹೆಡತಲೆ, ಹೆಮ್ಮರಗಾಲ ಕುಂಬ್ರಹಳ್ಳಿ ಗ್ರಾಮಗಳ ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆ ನೀಗುವ ಜೊತೆಗ ಅಂತರ್ಜಲ ಪ್ರಮಾಣ ಹೆಚ್ಚಿ ಕೃಷಿ ಚಟುವಟಿಕೆ ಗರಿಗೆದರಲಿದೆ, ತಾಲೂಕಿನ ಎಲ್ಲಾ ಕೆರೆಗಳಿಗೂ ನೀರು ತುಂಬಿಸಿದಲ್ಲಿ ಹಳ್ಳಿಗಳು ಸಮೃದ್ಧಿಯಾಗಲಿವೆ. ಕೆರೆ ನೀರು ತುಂಬಿಸಲು ಯಾವ ಕಾವೇರಿ ನಿರ್ವಹಣಾ ಪ್ರಾಧಿಕಾರದ ಅನುಮತಿ ಬೇಕಿಲ್ಲ, ಕೆರೆ ತುಂಬಿಸಲು ನಿರ್ವಹಣಾ ಪ್ರಾಧಿಕಾರ ಆಕ್ಷೇಪವನ್ನು ಮಾಡುವುದಿಲ್ಲ, ಅಧಿಕಾರಿಗಳ ನಿರ್ಲಕ್ಷ್ಯತನ ಹಾಗೂ ಜನಪ್ರತಿನಿಧಿಗಳ ಇಚ್ಚಾಶಕ್ತಿ ಕೊರತೆಯಿಂದ ಕೆರೆಗಳ ನೀರು ತುಂಬಿಸುವ ಕಾರ್ಯಕ್ಕೆ ಮುಂದಾಗುತ್ತಿಲ್ಲ ಎಂದು ಆರೋಪಿಸಿದರು.

ಸ್ಥಳಕ್ಕೆ ಬಂದ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಇಂಜಿನಿಯರ್ ಮಹೇಶ್, ಸಣ್ಣ ನೀರಾವರಿ ಇಲಾಖೆಯ ಎಇ ಸೋಮಣ್ಣ ನೇತೃತ್ವದ ತಂಡ, ದೇವನೂರು ಏತ ನೀರಾವರಿ ಯೋಜನೆ ಮೂಲಕ ಕೌಲಂದೆ ಭಾಗದ 10 ಕೆರೆಗಳು ಕೂಡ್ಲಾಪುರ ಭಾಗದ 5 ಕೆರೆಗಳು ಸೇರಿದಂತೆ 90 ಕೋಟಿ ವೆಚ್ಚದಲ್ಲಿ 15 ಕೆರೆಗಳನ್ನು ತುಂಬಿಸುವ ಯೋಜನೆಗೆ ಸರ್ಕಾರ ಈಗಾಗಲೇ ಬಜೆಟ್‌ನಲ್ಲಿ ಅನುಮೋದನೆ ನೀಡಿ ಅನುದಾನವನ್ನು ಬಿಡುಗಡೆಗೊಳಿಸಿದೆ. ಈ ಯೋಜನೆಯಲ್ಲಿ ಹೆಡತಲೆ ಗ್ರಾಮದ ಚೆನ್ನಯ್ಯನಕೆರೆಯು ಕೂಡ ಸೇರ್ಪಡೆಗೊಂಡಿದೆ ಎಂದರು. ಅಧಿಕಾರಿಗಳ ಮಾತಿಗೆ ಒಪ್ಪದ ರೈತರು ಹೆಡತಲೆ ಗ್ರಾಮದ ಚೆನ್ನಯ್ಯನಕೆರೆಗೆ ನೀರು ತುಂಬುವವರೆಗೂ ಸಹ ಪ್ರತಿಭಟನೆಯನ್ನು ಮುಂದುವರಿಸುವುದಾಗಿ ತಿಳಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಇಮ್ಮಾವು ರಘು, ತಾಲೂಕು ಅಧ್ಯಕ್ಷ ಸತೀಶ್ ರಾವ್, ಉಪಾಧ್ಯಕ್ಷ ದೊಡ್ಡಯ್ಯ, ಶಿವಣ್ಣ ಮಹಾದೇವಸ್ವಾಮಿ, ಕೆ.ಜಿ.ಶಿವಪ್ರಸಾದ್, ಆಲಗೂಡು ಮಹದೇವ್, ಮುತ್ತಿಗೆರೆಹುಂಡಿ ಜಯಪ್ರಕಾಶ್, ದಸಂಸ ಜಿಲ್ಲಾ ಸಂಚಾಲಕ ಮಲ್ಲಹಳ್ಳಿ ನಾರಾಯಣ, ಮುಖಂಡರಾದ ದೊರೆಸ್ವಾಮಿ ನಾಯಕ, ಮಹದೇವನಾಯಕ ಸೇರಿದಂತೆ ಹೆಡತಲೆ, ಹೆಮ್ಮರಗಾಲ, ಕುಂಬ್ರಹಳ್ಳಿ ಗ್ರಾಮಸ್ಥರು ಮತ್ತು ರೈತರು ಇದ್ದರು.

ಶಾಲೆ ಮಕ್ಕಳಿಗೆ ಪೆನ್ನು, ನೋಟ್‌ಬುಕ್ ವಿತರಣೆ



ಮಲ್ಕುಂಡಿ, ನ.6– ರಾಜ್ಯ ಬಿಜೆಪಿ ಅಧ್ಯಕ್ಷರು ಹಾಗೂ ಶಿಕಾರಿಪುರ ಕ್ಷೇತ್ರದ ಶಾಸಕ ಬಿ.ವೈ.ವಿಜಯೇಂದ್ರ ಅವರ ಜನ್ಮ ದಿನದ ಪ್ರಯುಕ್ತ ಸಮೀಪದ ಯಾಲೇಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಪೆನ್ನು ಮತ್ತು ನೋಟ್‌ಬುಕ್ ವಿತರಣೆ ಮಾಡಲಾಯಿತು.

ಹುರ ಶಕ್ತಿ ಕೇಂದ್ರದ ಅಧ್ಯಕ್ಷ ಹಾಗೂ ಅ.ಭಾ.ವಿ ಯುವ ಘಟಕದ ತಾಲೂಕು ಅಧ್ಯಕ್ಷ ಎಂ.ಜಿ.ಮಹದೇವಸ್ವಾಮಿ ಮಾತನಾಡಿ, ಬಿ.ವೈ.ವಿಜಯೇಂದ್ರ ಅವರಿಗೆ ಸಾಮಾಜಿಕ ಕಳಕಳಿ ಇರುವುದರಿಂದ ರಾಜಕೀಯದಲ್ಲಿ ಮುಂದಿನ ಪೀಳಿಗೆಗೆ ಅನುಕೂಲವಾಗಲಿದೆ. ಮುಂದಿನ ದಿನಗಳಲ್ಲಿ ಬಿ.ವೈ.ವಿಜಯೇಂದ್ರ ಅವರಿಗೆ ಒಳ್ಳೆಯದಾಗಲಿ. ಉತ್ತಮ ರಾಜಕೀಯ ಭವಿಷ್ಯವಿದೆ ಎಂದರು.

ಸಂಘಟನೆ ಕಲೆಗಳನ್ನು ಅರಿತಿರುವ ಅವರಿಗೆ ಇನ್ನೂ ಹೆಚ್ಚಿನ ಅಧಿಕಾರ ಸಿಗಲಿದೆ. ಈ ರಾಜ್ಯ ದಲ್ಲಿ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎನ್ನುವ ಸಾಮಾಜಿಕ ಚಿಂತನೆ ಮಾಡಿ ಜನಮನ್ನಣೆ ಗಳಿಸಿ ರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಂತೆ ಬಿ.ವೈ.ವಿಜಯೇಂದ್ರ ಅವರೂ ಕೂಡ ತಂದೆ ಹಾದಿಯಲ್ಲಿ ಸಾಗಿ, ಜನರ ಕಷ್ಟ–ಸುಖಗಳಿಗೆ ಸ್ಪಂದಿಸಿ ರಾಜ್ಯದಲ್ಲಿ ಸಂಘಟನೆಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ ಎಂದು ತಿಳಿಸಿದರು. ಈ ವೇಳೆ ಹುಲ್ಲಹಳ್ಳಿ ಶಕ್ತಿ ಕೇಂದ್ರದ ಅಧ್ಯಕ್ಷ ಯಾಲೇಹಳ್ಳಿ ಗುರುಪ್ರಸಾದ್, ನಂದೀಶ್, ಮಹದೇವಸ್ವಾಮಿ ಸೇರಿದಂತೆ ಪ್ರಮುಖರು ಹಾಜರಿದ್ದರು.

ಅರಣ್ಯ ಸಂರಕ್ಷಿಸಿದ ಗಿರಿಜನರಿಗೆ ಅರಣ್ಯ ಪ್ರವೇಶಿಸಲು ಹಕ್ಕು ನೀಡುವಂತೆ ಮನವಿ

ಹುಣಸೂರು, ನ.6– ಆದಿವಾಸಿ ಕುಟುಂಬಗಳಿಗೆ ಸತ್ಯಶೋಧನಾ ಸಮಿತಿ ಶಿಫಾರಸ್ಸಿನಂತೆ ಅರಣ್ಯ ಹಕ್ಕು ಕಾಯ್ದೆ ಜಾರಿಗೊಳಿಸಿ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿ ಆದಿವಾಸಿ ಅರಣ್ಯ ಹಕ್ಕು, ಬುಡಕಟ್ಟು ಕೃಷಿಕರ ಸಂಘ ಮತ್ತು ಗಿರಿಜನ ಸುರಕ್ಷಾ ವೇದಿಕೆ ಮುಖಂಡರು ಹುಣಸೂರು ಉಪವಿಭಾಗಾಧಿಕಾರಿ ವಿಜಯ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲೆಯಲ್ಲಿ ಒಟ್ಟು 12 ಸಾವಿರ ಗಿರಿಜನ ಕುಟುಂಬ ವಿವಿಧ ಹಾಡಿಯಲ್ಲಿ ವಾಸಿಸುತ್ತಿದ್ದು, ಜಮ್ಮಾಗಳಿಗೆ ಭೇಟಿ ನೀಡುವ ಹಕ್ಕು ಒಳಗೊಂಡಂತೆ ಅರಣ್ಯ ಹಕ್ಕು ಕಾಯ್ದೆ ಜಾರಿಗೊಳಿಸಬೇಕು. ಗಿರಿಜನರು ಸಂರಕ್ಷಿಸಿದ ಅರಣ್ಯಕ್ಕೆ ಪ್ರವೇಶಿಸಲು ಹಕ್ಕು ನೀಡಬೇಕೆಂದು ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಜಯಪ್ಪ ಒತ್ತಾಯಿಸಿದರು.

ಆದಿವಾಸಿ ಬದುಕು ಬವಣೆ ಕುರಿತಂತೆ ಈಗಾಗಲೇ ಸತ್ಯಶೋಧನಾ ಸಮಿತಿ ವರದಿ ಸಿದ್ಧಪಡಿಸಿ ಹಲವು ಅಂಶಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಅದರನ್ವಯ ಹಾಗೂ ರಾಜ್ಯ ಹೈಕೋರ್ಟ್ ಸೂಚನೆ ಮೇರೆಗೆ ಪ್ರೊ. ಮುಝಾಫರ್ ಅಸ್ಸಾದಿ ವರದಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ನಾಗರಹೊಳೆಯಿಂದ ಹೊರಹಾಕಿದ 3418 ಗಿರಿಜನ ಕುಟುಂಬಕ್ಕೆ ಪುನರ್ವಸತಿ ನೀಡಬೇಕು ಎಂದರು.

ಆದಿವಾಸಿ ಪಾರ್ಲಿಮೆಂಟ್ ಸಮಿತಿ ಅಧ್ಯಕ್ಷ ಹರ್ಷ ಮಾತನಾಡಿ, ಆದಿವಾಸಿ ಪಾರ್ಲಿಮೆಂಟ್ ತನ್ನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದ 18 ಅಂಶಗಳನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಈ ಅಂಶವನ್ನು ಗಂಭೀರವಾಗಿ ಪರಿಗಣಿಸಿ ಆದಿವಾಸಿ ಸಮುದಾಯಕ್ಕೆ ಸರ್ಕಾರ ಯೋಜನೆ ರೂಪಿಸಿ ಸವಲತ್ತು ಕಲ್ಪಿಸಬೇಕು ಎಂದು ಒತ್ತಾಯಿಸಿದರು. ವಿಠಲ್ ನಾಣಚ್ಚಿ, ಕೆ. ರಾಜು, ಮಾದಯ್ಯನ ಕಟ್ಟೆ ಹಾಡಿ ರಾಜು, ಮಣಿಕಂಠ, ನಿರೋಜ್, ಜೆ.ಕೆ. ರಾಜು ಹಾಗೂ ಗಣೇಶ್ ಇದ್ದರು.

ಬಿ.ವೈ.ವಿಜಯೇಂದ್ರಗೆ ಅಭಿನಂದನೆ



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ವರುಣ ವೀರಶೈವ ಸಮಾಜದ ಯುವ ಮುಖಂಡ, ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ ಅಭಿನಂದಿಸಿದರು. ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜ್, ಶಿವರಾಜು ಇದ್ದರು.

ವಿವೇಕಾನಂದ ಸ್ಮಾರಕ ಆಸ್ಪತ್ರೆ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಣೆ



ಸರಗೂರು ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಆವರಣದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸರಗೂರು ತಾಲೂಕು 'ಮೈಸೂರು ಮಿತ್ರ' ಪ್ರತಿನಿಧಿ ನಾಗೇಶ್ ವಾಸುಕಿ ಅವರನ್ನು ಸನ್ಮಾನಿಸಲಾಯಿತು.

ಸರಗೂರು, ನ.6– ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸರಗೂರು ಕೆನರಾ ಬ್ಯಾಂಕ್ ವ್ಯವಸ್ಥಾಪಕ ಆನಂದ್, ಕರ್ನಾಟಕ ರಾಜ್ಯ ಏಕೀಕರಣವಾಗಲು ಅದಕ್ಕೆ ಶ್ರಮಿಸಿದ ಕನ್ನಡದ ಕವಿಗಳು, ಸ್ವಾತಂತ್ರ್ಯ ಹೋರಾಟಗಾರರು, ಶಿಕ್ಷಕರು ಹಾಗೂ ಇನ್ನಿತರ ಕನ್ನಡ ಪರ ಹೋರಾಟಗಾರರಿಂದ 1956 ನವೆಂಬರ್ 1 ರಂದು ಮೈಸೂರು ರಾಜ್ಯ ಹೊಸ ಭೂಪಟದೊಂದಿಗೆ ಉಗಮವಾಯಿತು ಎಂದರು.

ಡಿ.ಬಿ.ಕುಪ್ಪೆ ಗಿರಿಜನ ಆಶ್ರಮ ಶಾಲೆಯ ಶಿಕ್ಷಕಿ ಪುಟ್ಟಮ್ಮ ಮಾತನಾಡಿ, ಕನ್ನಡ ರಾಜ್ಯೋತ್ಸವವನ್ನು ಸಂಭ್ರಮ–ಸಡಗರದಿಂದ ಆಚರಿಸುತ್ತಿದ್ದೇವೆ. ದಕ್ಷಿಣ ಭಾರತದ ಅರ್ಧ ಭಾಗ ಕನ್ನಡಿಗರಿಂದ ಕೂಡಿತ್ತು ಎಂದು ಕನ್ನಡದ ಇತಿಹಾಸ ಹಾಗೂ ರಾಜಮನೆತನಗಳ ಬಗ್ಗೆ ನೆನಪಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಹಿರಿಯ ಲೆಕ್ಕಿಗರಾದ ಸಂತೋಷ್ ಬಿ.ಎಸ್. ಮಾತನಾಡಿದರು. ಕಾರ್ಯಕ್ರಮದಲ್ಲಿ ಸರಗೂರು ತಾಲೂಕು 'ಮೈಸೂರು ಮಿತ್ರ' ಪ್ರತಿನಿಧಿ ನಾಗೇಶ್ ವಾಸುಕಿ ಅವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

ನಿವೃತ್ತ ಐಪಿಎಸ್ ಅಧಿಕಾರಿಗಳು ಹಾಗೂ ಸಂಸ್ಥೆಯ ಹಿತೈಷಿ ಚಮನ್‌ಲಾಲ್, ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ. ಪ್ರಶಾಂತ್ ಎಸ್.ಬಿ., ಡಾ. ನಾಗೇಶ್, ಡಾ. ಶಂಕರ್, ಡಾ. ಮನೋಹರ್ ಪ್ರಸಾದ್, ಸಂಧ್ಯಾ, ನವೀನ, ಅಭಿನಂದನ್, ಮನು, ವೆಂಕಟಸ್ವಾಮಿ, ಬಂಗಾರ ಶೆಟ್ಟಿ, ರಮೇಶ ಎಂ.ಪಿ, ಗೋಪಾಲಕೃಷ್ಣ, ನಾಗರತ್ನ, ಕೃಷ್ಣಕುಮಾರ್ ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗ ಮತ್ತು ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಶಿಕ್ಷಣದ ಮೂಲಕ ಒಳ್ಳೆಯ ಉಪನ್ಯಾಸ, ಸಂಸ್ಕಾರ, ಮಾನವೀಯ ಮೌಲ್ಯಗಳನ್ನು ಕಲಿಯಿರಿ



ತಿ. ನರಸೀಪುರ ಪಟ್ಟಣದ ಬೈರಾಪುರ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಕ್ರೀಡೆ, ಎನ್‌ಎಸ್‌ಎಸ್ ಯುವ ರೆಡ್ ಕ್ರಾಸ್ ಹಾಗೂ ರೇಂಜರ್ಸ್ ಘಟಕಗಳನ್ನು ನಿವೃತ್ತ ಇತಿಹಾಸ ಪ್ರಾಧ್ಯಾಪಕಿ ಡಾ. ಬಿ. ವಿ. ಸುಧಾಮಣಿ ಉದ್ಘಾಟಿಸಿದರು.

ತಿ.ನರಸೀಪುರ, ನ.6– ಶಿಕ್ಷಣದ ಮೂಲಕ ನಿಮಗೆ ದೊರಕುವ ಒಳ್ಳೆಯ ಉಪನ್ಯಾಸ, ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳನ್ನು ಹೊತ್ತು ಪದವಿ ಮುಗಿಸಿ ಹೊರಹೋಗುವಂತೆ ನಿವೃತ್ತ ಇತಿಹಾಸ ಪ್ರಾಧ್ಯಾಪಕಿ ಡಾ. ಬಿ. ವಿ. ಸುಧಾಮಣಿ ವಿದ್ಯಾರ್ಥಿನಿಯರಿಗೆ ಸಲಹೆ ನೀಡಿದರು.

ಪಟ್ಟಣದ ಬೈರಾಪುರ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ನಡೆದ ಸಾಂಸ್ಕೃತಿಕ ಕ್ರೀಡೆ, ಎನ್‌ಎಸ್‌ಎಸ್, ಯುವ ರೆಡ್ ಕ್ರಾಸ್ ಹಾಗೂ ರೇಂಜರ್ಸ್ ಘಟಕಗಳ ಉದ್ಘಾಟನೆ ಸಮಾರಂಭದಲ್ಲಿ ಅವರು ಮಾತನಾಡಿದರು

ಉನ್ನತ ಶಿಕ್ಷಣ ನಿಮ್ಮ ಬದುಕಿನಲ್ಲಿ ಸಮಗ್ರ ಹಾಗೂ ಸರ್ವಾಂಗೀಣ ಪ್ರಗತಿಗೆ ಪೂರಕವಾಗಿದೆ. ಶಿಕ್ಷಣ ಪಡೆಯುವ ಜತೆಗೆ ನಮ್ಮ ಐತಿಹಾಸಿಕ ಪರಂಪರೆ ತಿಳಿಯುವುದು ಕೂಡ ಅಗತ್ಯ. ನಿಮ್ಮ ಪ್ರತಿಭೆ, ವ್ಯಕ್ತಿತ್ವ ಬೆಳೆಸುವುದು ಕೂಡ ಮುಖ್ಯ. ನಿಮ್ಮ ಸಮೀಪದಲ್ಲಿ ಉತ್ತಮ ಶಿಕ್ಷಣ ಸಿಗುವ ಕಾಲೇಜಿದೆ. ಅದು ನಿಮ್ಮ ಗುಣಮಟ್ಟದ ಶಿಕ್ಷಣ ಕೊಡಲಿದೆ, ಬಳಸಿಕೊಳ್ಳಿ ಎಂದರು.

ಸ್ಕೌಟ್ಸ್ ಅಂಡ್ ಗೈಡ್ಸ್‌ನ ಮೈಸೂರಿನ ಸ್ಥಾನಿಕ ಆಯುಕ್ತ ಎಂ. ವಿ. ಅಮರ್ ನಾಥ್, ಮೈಸೂರು ಜಿಲ್ಲಾ ವೈದ್ಯಕೀಯ ಕಾಂಗ್ರೆಸ್ ವಿಭಾಗದ ಅಧ್ಯಕ್ಷ ಡಾ.ಬಿ. ಪ್ರದೀಪ್ ಮಾತನಾಡಿದರು.

ಎನ್‌ಎಸ್‌ಎಸ್ ಕಾಲೇಜುಗಳಲ್ಲಿ ಯುವಜನರ ಸ್ವಯಂಪ್ರೇರಿತ ಸಂಘವಾಗಿದೆ, ವಿದ್ಯಾರ್ಥಿಗಳಲ್ಲಿ ಸಮಾಜ ಕಲ್ಯಾಣದ ಕಲ್ಪನೆಯನ್ನು ಹುಟ್ಟು ಹಾಕಲು ಮತ್ತು ಪಕ್ಷಪಾತವಿಲ್ಲದೆ ಸಮಾಜಕ್ಕೆ ಸೇವೆಯನ್ನು ಒದಗಿಸುವುದು ಸಾಮಾಜಿಕ ಮತ್ತು ನಾಗರಿಕ ಜವಾಬ್ದಾರಿಯ ಪ್ರಜ್ಞೆಯನ್ನು ತಮ್ಮಲ್ಲಿ ಬೆಳೆಸಿಕೊಳ್ಳುವುದು ಮತ್ತು ತುರ್ತು ಪರಿಸ್ಥಿತಿಗಳು ಹಾಗೂ ನೈಸರ್ಗಿಕ ವಿಕೋಪಗಳನ್ನು ಎದುರಿಸುವುದು ಗುಂಪು ಜೀವನ ಮತ್ತು ಜವಾಬ್ದಾರಿಗಳ ಹಂಚಿಕೆಗೆ ಅಗತ್ಯವಿರುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಎನ್‌ಎಸ್‌ಎಸ್ ಸಹಕಾರಿಯಾಗಲಿದೆ ಎಂದು ತಿಳಿಸಿದರು

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಪ್ರಾಂಶುಪಾಲೆ ಡಾ.ಬಿ.ಪಿ. ಇಂದಿರಾ ಮಾತನಾಡಿದರು. ನಿರ್ಗಮಿತ ಪ್ರಾಂಶುಪಾಲ ಡಾ. ವಿ. ವಿ. ಜಗದೀಶ್, ಸೇರಿದಂತೆ ಗಣ್ಯರನ್ನು ಸನ್ಮಾನಿಸಲಾಯಿತು. ಐಕ್ಯೂಎಸ್‌ಸಿ ಸಂಚಾಲಕಿ ಡಾ. ಎಂ ನೇತ್ರಾವತಿ, ಸಾಂಸ್ಕೃತಿಕ ಸಮಿತಿ ಸಂಚಾಲಕ ಗುರುಪಾದಸ್ವಾಮಿ, ಕ್ರೀಡೆ ಎನ್‌ಎಸ್‌ಎಸ್ ಹಾಗೂ ರೇಂಜರ್ಸ್ ಘಟಕದ ಸಂಚಾಲಕಿ ಪಿ.ಕೆ ಶಶಿರೇಖಾ, ಮಂಜು ಕೆ ಪಿ, ಬಿ. ಎಂ. ರಾಮಮೂರ್ತಿ, ವೆಂಕಟೇಶಮೂರ್ತಿ, ನಂಜುಂಡಸ್ವಾಮಿ, ವಿದ್ಯಾರ್ಥಿ ಘಟಕದ ಪ್ರಮುಖರು, ಸಿಡಿಸಿ ಸದಸ್ಯರು, ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು, ಸಹಾಯಕ ಪ್ರಾಧ್ಯಾಪಕರು, ಹಾಜರಿದ್ದರು.

ಎಸ್.ಎಸ್. ಪೂರ್ಣಿಮಾಗೆ ಪಿಎಚ್.ಡಿ



ಮೈಸೂರು: ಡಾ. ಎಂ.ಜಿ. ಹನುಮಂತರಾಜು ಅವರ ಮಾರ್ಗದರ್ಶನದಲ್ಲಿ ಎಸ್.ಎಸ್. ಪೂರ್ಣಿಮಾ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಉದಾರೀಕರಣ, ಖಾಸಗೀಕರಣದಿಂದ ಕನ್ನಡ ಭಾಷೆಗೆ ಕುತ್ತು
ಕನ್ನಡ ರಾಜ್ಯೋತ್ಸವದಲ್ಲಿ ಡಾ. ಜಿ.ಪ್ರಸಾದ್‌ಮೂರ್ತಿ ಕಳವಳ



ಹೆಚ್.ಡಿ.ಕೋಟೆಯ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಮಾಧ್ಯಮ ವಿಭಾಗದ ವತಿಯಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ಕೋಟೆ, ನ.6– ಸುದೀರ್ಘ ಇತಿಹಾಸ ಮತ್ತು ಪ್ರಾಚೀನತೆಯನ್ನು ಹೊಂದಿರುವ ನಮ್ಮ ಕನ್ನಡ ಭಾಷೆಯು ಇಂದಿನ ಆಧುನಿಕ ಯುಗದಲ್ಲಿ ಪೋಷಿಸಿ ಬೆಳೆಸಿ ಎಂದು ಹೇಳುವ ಸ್ಥಿತಿ ಬಂದೊದಗಿದೆ ಎಂದು ಮೈಸೂರಿನ ನಟರಾಜ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಮುಖ್ಯಸ್ಥ ಡಾ.ಜಿ. ಪ್ರಸಾದ್‌ಮೂರ್ತಿ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಮಾಧ್ಯಮ ವಿಭಾಗದ ವತಿಯಿಂದ ಬುಧವಾರ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಯಾವುದೇ ಭಾಷೆಯನ್ನು ಬಳಸಿ, ಆಯಾ ಭಾಷೆಗೆ ಇರುವ ಗೌರವವನ್ನು ಕೊಡಬೇಕು, ಆದರೆ ಬೇರೆ ಭಾಷೆಯ ಗುಂಗಿನಲ್ಲಿ ಕನ್ನಡಕ್ಕೆ ದೊರೆಯುವ ಗೌರವ ದೊರೆಯುತ್ತಿಲ್ಲ. ನವ ಉದಾರೀಕರಣ ಮತ್ತು ಖಾಸಗೀಕರಣದಿಂದಾಗಿಯೂ ಸಹ ಭಾಷೆಗೆ ಕುತ್ತು ಬಂದೊದಗಿದೆ, ಖಾಸಗೀಕರಣದ ನೆಪದಲ್ಲಿ ಐಟಿ ಬಿಟಿ ಕಂಪನಿಗಳು ಸ್ಥಳೀಯ ಭಾಷೆ ಯನ್ನು ತಾತ್ಸಾರ ಮಾಡಿ, ಬೇರೆ ಬೇರೆ ಭಾಷೆಯನ್ನು ಬಳಸುತ್ತಿದ್ದಾರೆ. ಇದನ್ನು ಪ್ರಶ್ನಿಸುವ ಗೋಜಿಗೆ ಯಾರೂ ಹೋಗಿಲ್ಲ ಎಂದರು.

ಕನ್ನಡವನ್ನು ಪುನರ್ ಕಟ್ಟುವ ಯೋಜನೆಯಿಂದಾಗಿ ಹಂಪಿಯಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಯಾದರೂ ಸಹ ಇಂದು ಪ್ರಯೋಗವಿಲ್ಲದೆ, ಹಣದ ತೊಂದರೆಯಿಂದಾಗಿ, ಇಚ್ಛಾಶಕ್ತಿಯ ಕೊರತೆಯಿಂದಾಗಿ, ಅಧ್ಯಯನದ ಕೊರತೆಯಿಂದಾಗಿ ಅದು ಕೇವಲ ಸ್ಥಾವರವಾಗಿ ಉಳಿದಿದೆ ಎಂದರು.


ಪ್ರಕೃತಿ ಬೆಳವಣಿಗೆಯ ಜೊತೆಗೆ ಭಾಷೆಯು ಸಹ ಬೆಳೆಯಬೇಕು ಎಂದರು. ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿ ಸದಸ್ಯ ಜಿ. ವೆಂಕಟಾಚಲ ಮಾತನಾಡಿ, ಕನ್ನಡ ಏಕೀಕರಣ ಎಂದಾಕ್ಷಣ ಹೊಯ್ಸಳರ ಕಾಲದಿಂದಲೇ ಅಂದಿನ ಹೋರಾಟದಿಂದಾಗಿಯೇ ಹುಟ್ಟಿಕೊಂಡಿತ್ತು, ನಂತರದ 1500 ವರ್ಷಗಳ ನಂತರ ಕರ್ನಾಟಕ ಏಕೀಕರಣಗೊಂಡಿದೆ ಎಂದರು.

ಜ್ಞಾನಪೀಠ ಪಡೆದ ಬೇರೆ ಭಾಷೆಗಳ ಕವಿಗಳಿಗೆ ಕನ್ನಡ ಕವಿಗಳಿಗೆ ಹೋಲಿಸಿದರೆ ಕರ್ನಾಟಕ 20 ಕ್ಕೂ ಹೆಚ್ಚಿನ ಕವಿಗಳಿಗೆ ಜ್ಞಾನಪೀಠ ಪ್ರಶಸ್ತಿ ದೊರೆಯಬೇಕಿತ್ತು ಎಂದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್, ಕನ್ನಡ ವಿಭಾಗದ ಮುಖ್ಯಸ್ಥ ಚನ್ನಕೇಶವ ನಾಯಕ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ್, ಮಹಾರಾಜ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಚಂದ್ರೇಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್‌ಗೌಡ, ರಾಮಚಂದ್ರ, ರವೀಶ, ಎ.ಸಿ.ಭೈರಪ್ಪ ರಾಜೇಶ್, ಸಿದ್ದೇಗೌಡ, ಸಿದ್ದರಾಜು, ಮಂಜು, ಮಹೇಶ್, ಅವಿನಾ, ಚಿತ್ರ, ಪ್ರೀತಿ, ಚಂದನಾ, ಚಿಕ್ಕದೇವಿ ಮುಂತಾದವರು ಹಾಜರಿದ್ದರು.

ವಚನ ಕಥಾಲೋಕ, ನುಡಿ ದೀಪ್ತಿ ಕೃತಿಗಳ ಬಿಡುಗಡೆ

ವಚನ ಸಾಹಿತ್ಯ ಸತ್ಯದ ಸಾಕ್ಷಾತ್ಕಾರ

ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ



ಮೈಸೂರಿನ ಹೊಸಮಠದ ಶ್ರೀ ನಟರಾಜ ಸಭಾಭವನದಲ್ಲಿ ಬುಧವಾರ 'ವಚನ ಕಥಾಲೋಕ' ಮತ್ತು 'ನುಡಿ ದೀಪ್ತಿ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರು,ನ.6(ಪಿಎಂ)– ವಚನ ಸಾಹಿತ್ಯ ಸತ್ಯದ ಸಾಕ್ಷಾತ್ಕಾರ. ದಯೆ, ಸತ್ಯ, ನ್ಯಾಯ–ನೀತಿ, ಪ್ರೀತಿ–ಕರುಣೆಯನ್ನು ಬಸವಾದಿ ಶರಣರು ಅಪ್ಪಿಕೊಂಡಿದ್ದರು ಎಂದು ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ ಹೇಳಿದರು. ಮೈಸೂರಿನ ಹೊಸಮಠದ ಶ್ರೀ ನಟರಾಜ ಸಭಾಭವನದಲ್ಲಿ ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಅಕ್ಕ ಎಂ.ಎ. ನೀಲಾಂಬಿಕಾ ಅವರ 'ವಚನ ಕಥಾಲೋಕ' ಮತ್ತು 'ನುಡಿ ದೀಪ್ತಿ (ವಿಜಯಪುರದ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಸೂಕ್ತಿಗಳು)' ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಕೃತಿಗಳ ಕುರಿತು ಅವರು ಮಾತನಾಡಿದರು.


ವಚನ ಸಾಹಿತ್ಯವು ಮೌಲಿಕ ಮತ್ತು ಅಂತರಂಗದ ವಿಚಾರಗಳ ಸಂವೇದನೆಯಾಗಿದೆ. ಬಸವಾದಿ ಶರಣರ ಉದಾತ್ತ ಗುಣಗಳು ಇಂದಿನ ನಮ್ಮ ಸಮಾಜದಲ್ಲಿ ಇಲ್ಲವಾಗುತ್ತಿರುವುದು ದುರಂತ. ಬೇರೆಯಾರಿಗೂ ನೋವುಂಟು ಮಾಡಬಾರದು, ಅನ್ಯರ ಆಸ್ತಿ–ಅಂತಸ್ತಿಗೆ ಆಸೆಪಡಬಾರದು ಎಂಬುದು ಶರಣರ ತತ್ವವಾಗಿದೆ. ಸತ್ಯ, ದಯೆ ಮತ್ತು ಕಾಯಕವೇ ಶರಣರಿಗೆ ಧರ್ಮವಾಗಿತ್ತು. ಆದರೆ ಪ್ರಸ್ತುತ ನಮ್ಮ ದೇಶದಲ್ಲಿ ಧರ್ಮ ದಂಗಲ್ ನಡೆಯುತ್ತಿದ್ದು, ಧರ್ಮ ಧರ್ಮಗಳ ನಡುವೆ ಎತ್ತಿಕಟ್ಟಿ ತಮ್ಮ ಬೇಳೆ ಬೇಯಿಸಿಕೊಳ್ಳುವುದು ಹೆಚ್ಚಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇಂದು ಬಿಡುಗಡೆಗೊಂಡ ಎರಡೂ ಕೃತಿಗಳನ್ನು ಸಂಪಾದಿಸಿರುವ ಅಕ್ಕ ಎಂ.ಎ. ನೀಲಾಂಬಿಕಾ ಅವರು ಎಲೆಮರೆ ಕಾಯಿಯಂತೆ ಕನ್ನಡ ಸಾಹಿತ್ಯಕ್ಕೆ ಮೌಲಿಕ ಕೃತಿಗಳನ್ನು ನೀಡುತ್ತಿದ್ದಾರೆ. ಆದರೆ ಅವರನ್ನು ಯಾರೂ ಗುರುತಿಸುತ್ತಿಲ್ಲ. ಪ್ರೌಢಶಾಲೆಯ ಶಿಕ್ಷಕಿಯಾಗಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಮಾಡುವಂತಹ ಸಾಹಿತ್ಯ ಕೃಷಿಯಲ್ಲಿ ಅವರು ತೊಡಗಿದ್ದಾರೆ. ವೃತ್ತಿ ಮತ್ತು ಪ್ರವೃತ್ತಿ ಎರಡರಲ್ಲೂ ಶ್ರದ್ಧೆ–ನಿಷ್ಠೆ ಹೊಂದಿದ್ದಾರೆ. ಇವರಂತಹವರನ್ನು ಗುರುತಿಸಿ ಗೌರವಿಸದೇ ಇರುವುದು ನಮ್ಮ ವ್ಯವಸ್ಥೆಯ ದುರ್ದೈವ ಎಂದು ಬೇಸರ ವ್ಯಕ್ತಪಡಿಸಿದರು.

ಎಂ.ಎ.ನೀಲಾಂಬಿಕಾ ಅವರು ವಚನ ಕಥಾಲೋಕ ಕೃತಿಯಲ್ಲಿ ಶರಣರ 101 ವಚನಗಳನ್ನು ಬಿಡಿಸಿ ಕಥಾ ರೂಪದಲ್ಲಿ ಹೇಳುವ ಮೂಲಕ ಸರಳವಾಗಿ ಅರ್ಥ ಮಾಡಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ. ವಚನಗಳನ್ನು ತಳಸ್ಪರ್ಶಿಯಾಗಿ ತಿಳಿದುಕೊಳ್ಳಲು ಈ ಕೃತಿ ಸಹಕಾರಿಯಾಗಿದೆ. ಅವರ ಮತ್ತೊಂದು ಕೃತಿ 'ನುಡಿ ದೀಪ್ತಿ'ಯಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ಜನಸಾಮಾನ್ಯರಿಗೆ ನೀಡಿರುವ ಜೀವನ ಸಂದೇಶವನ್ನು ಕಟ್ಟಿಕೊಟ್ಟಿದ್ದಾರೆ. ಸ್ವಾಮೀಜಿಯವರ ಪ್ರವಚನಗಳನ್ನು ಆಲಿಸಿ, ಅದರಲ್ಲಿನ ನೂರಾರು ಜೀವನ ಸಂದೇಶಗಳನ್ನು ನೀಲಾಂಬಿಕಾ ಅವರು ಗ್ರಹಿಸಿ, ಹೆಕ್ಕಿ ತೆಗೆದು ಈ ಕೃತಿ ಮೂಲಕ ನೀಡಿದ್ದಾರೆ. ಈ ಕೃತಿ ನಿಜಕ್ಕೂ ಜ್ಞಾನ ದೀಪ್ತಿಯೇ ಸರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೃತಿಗಳನ್ನು ಬಿಡುಗಡೆ ಮಾಡಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿದರು. ಶ್ರೀ ಹೊಸಮಠದ ಮಠಾಧೀಶ ಶ್ರೀ ಚಿದಾನಂದ ಸ್ವಾಮೀಜಿ, ಶ್ರೀ ನೀಲಕಂಠಸ್ವಾಮಿ ಮಠದ ಶ್ರೀ ವಿದ್ವಾನ್ ಸಿದ್ಧಮಲ್ಲ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕೃತಿಗಳ ಸಂಪಾದಕಿ ಅಕ್ಕ ಎಂ.ಎ.ನೀಲಾಂಬಿಕಾ, ಶರಣು ವಿಶ್ವ ವಚನ ಫೌಂಡೇಷನ್ ಸಂಸ್ಥಾಪಕರಾದ ವಚನ ಕುಮಾರಸ್ವಾಮಿ, ರೂಪ ಕುಮಾರ ಸ್ವಾಮಿ, ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ವಾಜಂತ್ರಿ ಮತ್ತಿತರರು ಹಾಜರಿದ್ದರು.

ನ.11ಕ್ಕೆ ಒನಕೆ ಓಬವ್ವ ಜಯಂತಿ ಅರ್ಥಪೂರ್ಣ ಆಚರಣೆ



ಮೈಸೂರು, ನ.6– ಕರ್ನಾಟಕದ ಕಲಾಮಂದಿರದ ಕಿರುರಂಗಮಂದಿರದಲ್ಲಿ ನ.11ರಂದು ಬೆಳಗ್ಗೆ 11.30 ಗಂಟೆಗೆ 'ಒನಕೆ ಓಬವ್ವ ಜಯಂತಿ'ಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ ಶಿವರಾಜು ತಿಳಿಸಿದರು. ಇಂದು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಒನಕೆ ಓಬವ್ವ ಜಯಂತಿಯ ಆಚರಣೆಯ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಒನಕೆ ಓಬವ್ವ ಇಂದು ಮಹಿಳಾ ಸಮಾಜಕ್ಕೆ ಮಾದರಿಯಾಗಿದ್ದಾರೆ. ದೈಹಿಕವಾಗಿ, ಮಾನಸಿಕವಾಗಿ ತನ್ನನ್ನು ತಾನು ಪುರುಷರಿಗಿಂತ ಯಾವುದೇ ವಿಷಯದಲ್ಲಿ ಕಡಿಮೆ ಇಲ್ಲ ಇಂದು ಸಾಬೀತುಪಡಿಸಿದ ವೀರ ವನಿತೆ. ಅಂತಹ ಸಾಧಕಿಯ ಜಯಂತಿಯನ್ನು ಆಚರಿಸುವುದು ನಮ್ಮ ನಾಡಿಗೆ ಹೆಮ್ಮೆ ತರುತ್ತದೆ ಎಂದರು. ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಈ ಸಂಬಂಧ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮಾಡಲು ಅಗತ್ಯ ಕ್ರಮ ವಹಿಸಿ, ಜಯಂತಿ ನಡೆಯುವ ಸ್ಥಳದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಶಾಮಿಯಾನ ವ್ಯವಸ್ಥೆ ಮಾಡಲು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ ಸುದರ್ಶನ್ ಮಾತನಾಡಿ, ಕಾರ್ಯಕ್ರಮದಲ್ಲಿ ಕಲಾತಂಡಗಳಿಂದ ಗೀತ ಗಾಯನವನ್ನು ಏರ್ಪಡಿಸಲಾಗುವುದು. ಆಹ್ವಾನ ಪತ್ರಿಕೆಯ ಮುದ್ರಣ ಮಾಡಿ ಸರ್ಕಾರದ ಶಿಷ್ಟಾಚಾರದಂತೆ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಈ ಸಂಬಂಧ ಸಮಿತಿಯವರು ಸಹಕರಿಸಬೇಕು ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಒನಕೆ ಓಬವ್ವ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಇಂದು ಮುಡಾ ಸಾಮಾನ್ಯ ಸಭೆ



ಮೈಸೂರು, ನ.6– ಲೋಕಾಯುಕ್ತ ಪೊಲೀಸರು ಮತ್ತು ಜಾರಿ ನಿರ್ದೇಶನಾಲಯ (ಇಡಿ) ವಿವಾದಿತ 50:50 ಅನುಪಾತ ಯೋಜನೆಯಡಿ ಪರಿಹಾರ ನಿವೇಶನ ಹಂಚಿಕೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ತನಿಖೆ ನಡೆಸುತ್ತಿರುವ ಮಧ್ಯೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಸಾಮಾನ್ಯ ಸಭೆ ನಾಳೆ ನಡೆಯಲಿದೆ.

ಮುಡಾ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಮುಡಾ ಸಾಮಾನ್ಯ ಸಭೆ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಮುಡಾ ವ್ಯಾಪ್ತಿಗೆ ಒಳಪಡುವ ಕ್ಷೇತ್ರದ ಎಲ್ಲಾ ಶಾಸಕರು ಮತ್ತು ಎಂಎಲ್‌ಸಿಗಳಿಗೆ ಸಭೆಯ ನೋಟಿಸ್ ನೀಡಲಾಗಿದೆ.

ನಾಳೆ ಬೆಳಗ್ಗೆ 11 ಗಂಟೆಗೆ ಮುಡಾ ಸಾಮಾನ್ಯ ಸಭೆ ಕರೆಯಲಾಗಿದೆ. ಈ ಸಭೆಯಲ್ಲಿ ಯಾವುದೇ ವಿಶೇಷತೆ ಇಲ್ಲ. ಕಳೆದ ಕೆಲ ತಿಂಗಳಿಂದ ಮುಡಾ ಸಭೆ ನಡೆಯದ ಹಿನ್ನೆಲೆಯಲ್ಲಿ ದೈನಂದಿನ ಕೆಲಸಗಳಿಗೆ ಅಡ್ಡಿಯಾಗಿದ್ದು, ಇದರ ನಿವಾರಣೆಗೆ ಸಭೆ ಕರೆಯಲಾಗಿದೆ. ಬಳಿಕ ಮಾಧ್ಯಮಗಳಿಗೆ ಸಭೆಯಲ್ಲಿನ ನಡಾವಳಿ ಹಾಗೂ ತೀರ್ಮಾನಗಳ ಬಗ್ಗೆ ಮಾಹಿತಿ ನೀಡಲಾಗುವುದು.

ಕಳೆದ ವಾರವಷ್ಟೆ, ಮೈಸೂರಿನ 17 ಮುಡಾ ಲೇಔಟ್‌ಗಳು ಮತ್ತು 900 ಖಾಸಗಿ ಲೇಔಟ್‌ಗಳ ಪೈಕಿ ಮೊದಲ ಹಂತದಲ್ಲಿ 200 ಖಾಸಗಿ ಲೇಔಟ್‌ಗಳನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಮುಡಾ ಮತ್ತು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ನಿರ್ದೇಶನ ನೀಡಿದ ಮರುದಿನವೇ ನ.7 ರಂದು ಮುಡಾ ಸಭೆಯ ಘೋಷಣೆಯಾಗಿದೆ. ಖಾಸಗಿ ಲೇಔಟ್‌ಗಳಿಗೆ ಖಾತಾ ನೀಡುವ ಪದ್ಧತಿಯನ್ನು ಸ್ಥಗಿತಗೊಳಿಸಲು ಮುಡಾ ನಿರ್ಧರಿಸಿದೆ ಮತ್ತು ಜವಾಬ್ದಾರಿಯನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಿದೆ. ಅನುಮೋದನೆಗೆ ಕಾಯುತ್ತಿರುವ ಖಾಸಗಿ ಡೆವಲಪರ್‌ಗಳ ಯೋಜನೆಗಳು ಸೇರಿದಂತೆ ಬಾಕಿ ಉಳಿದಿರುವ ಸಮಸ್ಯೆಗಳನ್ನು ಸಾಮಾನ್ಯ ಸಭೆಯು ಕೈಗೆತ್ತಿಕೊಳ್ಳುವ ನಿರೀಕ್ಷೆಯಿದೆ. ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಕ್ರೆಡೈ) ಮೈಸೂರು ವಿಭಾಗ ಪ್ರತಿನಿಧಿಸುವ ಮೈಸೂರಿನ ರಿಯಲ್ ಎಸ್ಟೇಟ್ ಡೆವಲಪರ್‌ಗಳು ಮುಡಾ ಒಂದು ವರ್ಷದಿಂದ ಸಾಮಾನ್ಯ ಸಭೆ ನಡೆಸದ ಕಾರಣ ತಮ್ಮ ಯೋಜನೆಗಳನ್ನು ಸ್ಥಗಿತಗೊಳಿಸಿದ್ದು, ಆರ್ಥಿಕ ನಷ್ಟಕ್ಕೆ ಕಾರಣವಾಯಿತು ಎಂದು ದೂರಿದ್ದಾರೆ.

ನಾಳೆ ಆಡಂಬರವಿಲ್ಲದೆ ಸೇವಾಕಾರ್ಯಗಳೊಂದಿಗೆ ಉದ್ಯಮಿ ಜಿ.ಮಂಜುಗೌಡರ ಹುಟ್ಟುಹಬ್ಬ ಆಚರಣೆ



ಜಿ.ಮಂಜುಗೌಡ

ಮೈಸೂರು,ನ.6(ಪಿಎಂ)– ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿಕಟಪೂರ್ವ ಅಧ್ಯಕ್ಷರೂ ಆದ ಉದ್ಯಮಿ ಜಿ.ಮಂಜುಗೌಡ ಅವರು ತಮ್ಮ 52ನೇ ಹುಟ್ಟುಹಬ್ಬವನ್ನು ನ.8ರಂದು ಯಾವುದೇ ಆಡಂಬರವಿಲ್ಲದೆ ನಗರದ ವಿವಿಧೆಡೆ ಸಾಮಾಜಿಕ ಸೇವಾ ಕಾರ್ಯಗಳನ್ನು ನಡೆಸುವ ಮೂಲಕ ಆಚರಿಸಿಕೊಳ್ಳಲಿದ್ದಾರೆ. ಆಪ್ತ ಗೆಳೆಯನ ಅಗಲಿಕೆಯಿಂದ ಈ ಬಾರಿ ಆಡಂಬರದ ಆಚರಣೆ ಕೈಬಿಡಲಾಗಿದೆ. ಅಂದು ಬೆಳಗ್ಗೆ 8.30ಕ್ಕೆ ಚಾಮುಂಡಿಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಬಳಿಕ ಬೆಳಗ್ಗೆ 9.30ಕ್ಕೆ ಆದಿ ಚುಂಚನಗಿರಿ ಮೈಸೂರು ಶಾಖಾ ಮಠಕ್ಕೆ ಭೇಟಿ ನೀಡಿ, ಸ್ವಾಮೀಜಿಯವರಿಂದ ಆಶೀರ್ವಾದ ಪಡೆಯಲಿದ್ದಾರೆ. ಬೆಳಗ್ಗೆ 10ಕ್ಕೆ ಅಶ್ವಿನಿ ಎಂಟರ್‌ಪ್ರೈಸಸ್ ಅಂಡ್ ಬಿಲ್ಡರ್ಸ್ ಕಚೇರಿ ಮುಂಭಾಗ ಪೌರಕಾರ್ಮಿಕರು ಮತ್ತು ಬಡ ಜನರಿಗೆ ಬಟ್ಟೆ, ಸೀರೆ ಹಾಗೂ ಸಿಹಿ ವಿತರಣೆ ಮಾಡಲಿದ್ದಾರೆ.

ಮಧ್ಯಾಹ್ನ 3ಕ್ಕೆ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಕರ್ತವ್ಯ ನಿರ್ವಹಿಸುವ ಪೌರಕಾರ್ಮಿಕರು, ತೋಟಗಾರಿಕೆ ಕಾರ್ಮಿಕರು ಹಾಗೂ ಭದ್ರತಾ ಸಿಬ್ಬಂದಿಗೆ ಆಜಂ ಬೈ ಸ್ನೇಹ ಬಳಗ ಮತ್ತು ಸ್ಪರ್ಶ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಮತ್ತು ಕಣ್ಣಿನ ತಪಾಸಣೆ ಶಿಬಿರ ಹಮ್ಮಿಕೊಂಡಿದ್ದು, ಇದೇ ವೇಳೆ ಕಾರ್ಮಿಕರಿಗೆ ಸೀರೆ, ಬಟ್ಟೆ ಮತ್ತು ಸಿಹಿ ವಿತರಣೆ ಮಾಡಲಿದ್ದಾರೆ.

ಇದಕ್ಕೂ ಮುನ್ನ ಮಧ್ಯಾಹ್ನ 12ಕ್ಕೆ ಕರಾವಳಿ ಸೀ ಫುಡ್ ರೆಸ್ಟೋರೆಂಟ್ ವತಿಯಿಂದ ಟಿಕೆ ಲೇಔಟ್‌ನಲ್ಲಿರುವ ಪುಟ್ಟೀರಮ್ಮ ವಿಶೇಷ ಮಕ್ಕಳ ಶಾಲೆಯಲ್ಲಿ ಮಕ್ಕಳಿಗೆ ಆಟಿಕೆಗಳು ಹಾಗೂ ಸಿಹಿ ವಿತರಣೆ ಮಾಡಲಿದ್ದಾರೆ. ಮಧ್ಯಾಹ್ನ 1ಕ್ಕೆ ಭಾಗ್ಯಸಾಗರ ಎಜುಕೇಷನಲ್ ಟ್ರಸ್ಟ್ ವತಿಯಿಂದ ಬನ್ನಿಮಂಟಪದಲ್ಲಿರುವ ಸಾಯಿ ರಂಗ ವಿಶೇಷ ಮಕ್ಕಳ ಶಾಲೆಯಲ್ಲಿ ಮಧ್ಯಾಹ್ನದ ಊಟ ವ್ಯವಸ್ಥೆ ಮಾಡಿದ್ದು, ಜೊತೆಗೆ ಸಿಹಿ ಮತ್ತು ಹಣ್ಣುಗಳ ವಿತರಣೆ ಸಹ ಮಾಡಲಿದ್ದಾರೆ.

ಸಂಜೆ 5ಕ್ಕೆ ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಸೀರೆ ಮತ್ತು ಸಿಹಿ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ. ಶುಭ ಕೋರುವವರು ಯಾರೂ ಸಹ ಕೇಕ್ ಮತ್ತು ಹೂವಿನ ಹಾರಗಳನ್ನು ತರಬಾರದೆಂದು ಜಿ.ಮಂಜುಗೌಡ ಅವರು ವಿಶೇಷ ಮನವಿ ಮಾಡಿದ್ದಾರೆ ಎಂದು ಭಾಗ್ಯಸಾಗರ ಎಜುಕೇಷನಲ್ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಸಾಗರ ಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಝೋನ್ ಸ್ಪೋರ್ಟ್ ಡಾನ್ಸ್ ಚಾಂಪಿಯನ್‌ಶಿಪ್



ಮೈಸೂರು, ನ.6–ನಗರದ ಕರ್ನಾಟಕ ಸ್ಪೋರ್ಟ್ ಡಾನ್ಸ್ ಅಸೋಸಿಯೇಷನ್ ವತಿಯಿಂದ ಮೈಸೂರು ಝೋನ್ ಸ್ಪೋರ್ಟ್ ಚಾಂಪಿಯನ್‌ಶಿಪ್ ಕಾರ್ಯಕ್ರಮ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ನಡೆಯಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಯೂತ್ ಹಾಸ್ಟೆಲ್‌ನ ಉಪಾಧ್ಯಕ್ಷ ರವಿಕುಮಾರ್ ಹೆಚ್. ಜ್ಯೋತಿ ಬೆಳಗಿಸಿ, ಮಾತನಾಡಿ, ಕಲೆಗಳಿಗೆ ಪ್ರೋತ್ಸಾಹ ನೀಡುವುದು ನಮ್ಮೆಲ್ಲರ ಕರ್ತವ್ಯ. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಕಲೆ ಅಡಗಿರುತ್ತದೆ. ಅದನ್ನು ಹೊರತೆಗೆಯಲು ವೇದಿಕೆಗಳು ತುಂಬಾ ಅವಶ್ಯಕ. ಸ್ಪೋರ್ಟ್‌ಡಾನ್ಸ್ ಕ್ರೀಡೆಯಾಗಿರುವುದು ಮೆಚ್ಚುಗೆಯ ವಿಚಾರ. ಇದನ್ನು ಬೆಳೆಸುವುದು ಇಂದಿನ ಯುವಕರ, ಪೋಷಕರ ಕರ್ತವ್ಯವಾಗಿದೆ ಎಂದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಸ್ಪೋರ್ಟ್‌ಡಾನ್ಸ್ ಫೆಡರೇಷನ್ ಆಫ್ ಇಂಡಿಯಾದ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ರವಿ ಸಿ., ಇಂದು ಮೈಸೂರು ಮೈಸೂರು ಝೋನ್ ಸ್ಪೋರ್ಟ್‌ಡಾನ್ಸ್ ಚಾಂಪಿಯನ್‌ಶಿಪ್‌ನಲ್ಲಿ 45 ನೃತ್ಯ ಶಾಲೆಗಳು ಭಾಗವಹಿಸಿರುವುದು ಅತ್ಯಂತ ಸಂತೋಷದ ಸಂಗತಿ. ಭಾರತೀಯ ಕಲೆಗಳಲ್ಲಿ ನೃತ್ಯ ಬಹಳ ಆಕರ್ಷಕವಾದುದು. ಈ ಕ್ರೀಡಾ ನೃತ್ಯವನ್ನು ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಕಲಿತು ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಬೇಕು. ಕಲೆಯನ್ನು ಪ್ರೋತ್ಸಾಹಿಸುವಲ್ಲಿ ಪೋಷಕರು, ನೃತ್ಯ ಶಿಕ್ಷಕರು ಉತ್ತೇಜಿಸಬೇಕೆಂದು ತಿಳಿಸಿದರು. ವೇದಿಕೆಯಲ್ಲಿ ಗ್ರೀನ್ ಕಿಡ್ಸ್ ನೃತ್ಯಶಾಲೆಯ ಗೌರವ ಅಧ್ಯಕ್ಷರಾದ ಗಿರೀಶ್ ಹಾಗೂ ಮೈಸೂರು ನಗರ ಮತ್ತು ಜಿಲ್ಲೆಯ ವಿವಿಧ ಶಾಲಾ ಕಾಲೇಜಿನ ನೃತ್ಯ ಶಿಕ್ಷಕರು, ನೃತ್ಯ ಪಟುಗಳು, ಪೋಷಕರು ಹಾಜರಿದ್ದರು.

ವಸ್ತುಪ್ರದರ್ಶನದಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆ

ಮೈಸೂರು, ನ.6– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ 2024ರ ದಸರಾ ವಸ್ತುಪ್ರದರ್ಶನದಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ನ.9ರಿಂದ ಡಿ.28ರವರೆಗೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಪಿ.ಕಾಳಿಂಗ ರಾವ್ ಗಾನಮಂಟಪದಲ್ಲಿ ಏರ್ಪಡಿಸಲಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ

ಆಸಕ್ತರು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಕಚೇರಿ ಅಥವಾ https://forms.gle/qB9Wbj8D4KLFbod6A ಆನ್‌ಲೈನ್ ಮೂಲಕ ಅರ್ಜಿ ಪಡೆಯಬಹುದಾಗಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ನ.7 ರೊಳಗೆ ಕಚೇರಿಗೆ ಸಲ್ಲಿಸಬಹುದು. ಪ್ರತಿ ತಂಡಕ್ಕೆ ಪ್ರವೇಶ ಶುಲ್ಕ 1000 ರೂ.ಗಳಿದ್ದು, ಪ್ರಾಧಿಕಾರದ ವತಿಯಿಂದ ಉಪಾಹಾರದ ವ್ಯವಸ್ಥೆ ಇರುತ್ತದೆ. ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವಾಗಿ ರೂ. 30,000, ದ್ವಿತೀಯ ಬಹುಮಾನ ರೂ.20.000, ತೃತೀಯ ಬಹುಮಾನ 15000 ರೂ ಮತ್ತು ಎರಡು ತಂಡಗಳಿಗೆ ರೂ 5000 ಗಳ ಸಮಾಧಾನಕರ ಬಹುಮಾನ ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲಾ ಸ್ಪರ್ಧಾರ್ಥಿಗಳಿಗೆ ಪ್ರಮಾಣ ಪತ್ರ ಮತ್ತು ಪದಕಗಳನ್ನು ನೀಡಲಾಗುವುದು.

ನ.9ರಂದು 14 ವರ್ಷ ಮೇಲ್ಪಟ್ಟವರಿಂದ ಸಮೂಹ ನೃತ್ಯ, ನ.16 ರಂದು 14 ವರ್ಷ ಒಳಪಟ್ಟವರು ಸಮೂಹ ನೃತ್ಯ, ನವೆಂಬರ್ 23ರಂದು ಎಲ್ಲಾ ವಯೋಮಾನದವರ ಜಾನಪದ ಸಮೂಹ ನೃತ್ಯ, ನ.30ರಂದು 8 ವರ್ಷಕ್ಕೆ ಒಳಪಟ್ಟವರ ಸಮೂಹ ನೃತ್ಯ, ಡಿ.7ರಂದು 16 ವರ್ಷ ಮೇಲ್ಪಟ್ಟವರ ಶಾಸ್ತ್ರೀಯ ಸಮೂಹ ನೃತ್ಯ, ಡಿ.14ರಂದು 16 ವರ್ಷಗಳ ಪಟ್ಟವರ ಶಾಸ್ತ್ರೀಯ ಸಮೂಹ ನೃತ್ಯ, ಡಿ.21ರಂದು ಎಲ್ಲಾ ವಯೋಮಾನದ ಸಮೂಹ ಗಾಯನ ಸ್ಪರ್ಧೆ, ಡಿ.28ರಂದು ಎಲ್ಲಾ ವಯೋಮಾನದವರ ಅಂತರ ವಿಶ್ವವಿದ್ಯಾನಿಲಯ ಸಮೂಹ ನೃತ್ಯ ಸ್ಪರ್ಧೆಗಳು ಸದರಿ ದಿನಗಳಂದು ಸಂಜೆ 6 ಗಂಟೆಯಿಂದ ನಡೆಯಲಿವೆ.

ಹೆಚ್ಚಿನ ಮಾಹಿತಿಗಾಗಿ ಸಾಂಸ್ಕೃತಿಕ ಉಪಸಮಿತಿಯ ಅಧ್ಯಕ್ಷ ರಘುರಾಜೇ ಅರಸ್– ದೂ.ಸಂ: 9880358761 ಹಾಗೂ ಕಾರ್ಯಾಧ್ಯಕ್ಷ ಕೆ.ವಿ.ಮಲ್ಲೇಶ್– ದೂ.ಸಂ: 9845218453 ಅಥವಾ ಕಾರ್ಯಕ್ರಮದ ಸಂಚಾಲಕರಾದ ನಿಂಗರಾಜು– ದೂ.ಸಂ: 9964374746 ಹಾಗೂ ಮಂಜು ಸುಬೇದಾರ್– ದೂ.ಸಂ: 9620316818, ಆನ್‌ಲೈನ್ ಅರ್ಜಿಗಾಗಿ ಶ್ರೀನಿಧಿ– ದೂ.ಸಂ: 8431517909 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯುಬ್ ಖಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೋಕಾಯುಕ್ತರಿಗೆ ಮುಖ್ಯಮಂತ್ರಿಗಳ ಭಯ ಕಾಡುತ್ತಿದೆ, ಆದಷ್ಟು ಬೇಗ ಕ್ಲೀನ್ ಚಿಟ್ ಕೊಡಲು ಚಿಂತನೆ ನಡೆಸುತ್ತಿದ್ದಾರೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪ



ಹಾವೇರಿ, ನ.6– ಲೋಕಾಯುಕ್ತರಿಗೆ ಮುಖ್ಯಮಂತ್ರಿಗಳ ಭಯ ಕಾಡುತ್ತಿದೆ. ಮುಖ್ಯಮಂತ್ರಿಗಳಿಗೆ ಎಷ್ಟು ಬೇಗ ಕ್ಲೀನ್ ಚಿಟ್ ಕೊಡಬೇಕೋ ಅಷ್ಟೇ ಬೇಗ ಪ್ರಕರಣ ಮುಗಿಸಲು ನೋಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದ್ದಾರೆ.

ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಬಂಕಾಪುರ ಕ್ರಾಸ್‌ನಲ್ಲಿ ಮಾತನಾಡಿದ ಅವರು, ಲೋಕಾಯುಕ್ತ ಒತ್ತಡದಲ್ಲಿ ಕೆಲಸ ಮಾಡುತ್ತಿದೆ. ಮುಡಾ ಹಗರಣದ ಪ್ರಕರಣದಲ್ಲಿ ಲೋಕಾಯುಕ್ತರ ತನಿಖೆ ದಿಕ್ಕು ನೋಡಿದರೆ, ತರಾತುರಿಯಲ್ಲಿ ನೋಟಿಸ್ ನೀಡಿದ್ದಾರೆ ಎಂದು ವಿಜಯೇಂದ್ರ ಆರೋಪಿಸಿದರು. ಲೋಕಾಯುಕ್ತರ ಸಂಸ್ಥೆ ಎಷ್ಟು ಬೇಗ ಕ್ಲೀನ್‌ಚಿಟ್ ಎಂದು ವಿಚಾರ ಮಾಡಿದೆ. ರಾಜ್ಯದ ಮುಖ್ಯಮಂತ್ರಿ ಆರೋಪಿ ಸ್ಥಾನದಲ್ಲಿದ್ದಾರೆ. ನ್ಯಾಯಾಲಯಕ್ಕೆ ಗೌರವಕ್ಕೆ ಕೊಡಬೇಕು. ಅವರು ನ್ಯಾಯವಾದಿ ಸಹ, ಗೌರವ ಕೊಡಬೇಕು. ನ್ಯಾಯಾಲಯದ ತೀರ್ಪಿಗೆ ಗೌರವ ಕೊಡಬೇಕು ಎಂದರು.

ಮೈಸೂರಿನಲ್ಲಿ ಒಂದು ಮನೆ ಇಲ್ಲ ಎನ್ನುವ ಕಾರಣಕ್ಕಾಗಿ ಶ್ರೀಮತಿ ಹೆಸರಿನಲ್ಲಿ 14 ಸೈಟ್ ತೆಗೆದುಕೊಂಡಿದ್ದಾರೆ. ಲೋಕಾಯುಕ್ತರು ತರಾತುರಿಯಲ್ಲಿ ವಿಚಾರ ಮಾಡಿ ಕ್ಲೀನ್ ಚಿಟ್ ಕೊಡಲು ದಿನೇಶ ಎಂಬ ಅಧಿಕಾರಿಯನ್ನು ಬಚ್ಚಿಟ್ಟಿದ್ದಾರೆ. ಸಿದ್ದರಾಮಯ್ಯ ಭಂಡರಿದ್ದಾರೆ. ಅವರಿಗೆ ಆತಂಕ ಕಾಡುತ್ತಿದೆ. ಈಗ ಅವರ ಗೌರವ ಹರಾಜು ಆಗಿದೆ. ಹಾಗಾಗಿ ಮುಖ್ಯಮಂತ್ರಿಗಳು ವಿಚಲಿತರಾಗಿದ್ದಾರೆ ಎಂದು ವಿಜಯೇಂದ್ರ ಆರೋಪಿಸಿದರು. ಸಿಎಂ ಸಿದ್ದರಾಮಯ್ಯ ಪ್ರಾಮಾಣಿಕ ವ್ಯಕ್ತಿಯಾಗಿದ್ದರೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕಿತ್ತು. ಐದು ವರ್ಷ ಅಧಿಕಾರ ಪೂರ್ಣಗೊಳಿಸುತ್ತೇನೆ ಎಂದಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಈಗಾಗಲೇ ತೀರ್ಮಾನ ಮಾಡಿದೆ. ಮುಖ್ಯಮಂತ್ರಿ ಕೆಳಗೆ ಇಳಿಸಲು ದೆಹಲಿಯಲ್ಲಿ ಮುಹೂರ್ತ ಫಿಕ್ಸ್ ಆಗಿದೆ ಎಂದು ವಿಜಯೇಂದ್ರ ಭವಿಷ್ಯ ನುಡಿದರು.

ಕೋವಿಡ್ ಸಮಯದಲ್ಲಿ ಹೆಣಗಳಿಂದಲೂ ಬೊಮ್ಮಾಯಿ ಲಂಚ ತಗೊಂಡಿದ್ದಾರೆ ಎಂಬ ಸಿದ್ದರಾಮಯ್ಯ ಆರೋಪ ವಿಚಾರ ಕುರಿತಂತೆ ಮಾತನಾಡಿದ ಅವರು, ಅವರದೇ ಸರ್ಕಾರ ಇದೆ ಅಲ್ವಾ, ಇಷ್ಟು ದಿನ ಏನು ಮಾಡಿದರು. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಎಷ್ಟು ವರ್ಷ ಆಗಿದೆ. ಕೊರೋನಾ ಲೂಟಿ ಆಗಿದ್ದರೆ ತನಿಖೆ ಮಾಡಬೇಕಿತ್ತು. ಅದು ಬಿಟ್ಟು ಹಿಟ್ ಅಂಡ್ ರನ್ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅಮರನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಘೀರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೂಲ್ ಭುಲಯ್ಯ 3 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬಘೀರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬಘೀರ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಭೂಲ್ ಭುಲಯ್ಯ 3 (ಹಿಂ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇಟೇಯನ್ (ತ)	4 ಪ್ರದರ್ಶನಗಳು
ಪ್ರಭಾ	
ಅಂಜದಗಂಡು (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲಕ್ಕಿ ಭಾಸ್ಕರ್ (ತೆ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಲಕ್ಕಿ ಭಾಸ್ಕರ್ (ಮ): ರಾ.9.55ಕ್ಕೆ
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.10.55ಕ್ಕೆ, ಬ್ಲಡಿ ಬೆಗ್ಗರ್ (ತ): ಮ.1.20ಕ್ಕೆ, ಬ್ರದರ್ (ತ): ಸಂ.4.20ಕ್ಕೆ, ಬಘೀರ (ಕ): ರಾ.7.05ಕ್ಕೆ, ಕ (ತೆ): ರಾ.10.10ಕ್ಕೆ.
ಸ್ಕ್ರೀನ್ 3	ಅಮರನ್ (ತ): ಬೆ.10.05ಕ್ಕೆ, ಮ.1.15ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಅನ್ನ (ಕ): ಸಂ.4.30ಕ್ಕೆ.
ಸ್ಕ್ರೀನ್ 4	ಬಘೀರ (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೊದಲ ವಿಶ್ವಸುಂದರಿ ಕಿಕಿ ಹಕಾನ್ಸನ್ ನಿಧನ



ವಾಷಿಂಗ್ಟನ್:ಜಗತ್ತಿನ ಮೊದಲ ವಿಶ್ವ ಸುಂದರಿ ಕಿಕಿ ಹಕಾನ್ಸನ್ ನ. 4ರಂದು ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ನಿಧನ ಹೊಂದಿದರು. ಅವರಿಗೆ 95 ವರ್ಷ ವಯಸ್ಸಾಗಿತ್ತು. ತಮ್ಮ ಸ್ವಗೃಹದಲ್ಲಿ ಮಲಗಿದ್ದ ಅವರು ಚಿರನಿದ್ರೆಗೆ ಜಾರಿದ್ದಾರೆ ಎಂದು ಕುಟುಂಬ ಮೂಲಗಳು ತಿಳಿಸಿರುವುದಾಗಿ ಮಿಸ್ ವರ್ಲ್ಡ್ ಇನ್‌ಸ್ಟಾಗ್ರಾಮ್ ಪೇಜ್ ಈ ಬಗ್ಗೆ ಅಧಿಕೃತವಾಗಿ ಘೋಷಿಸಿದೆ. ಸ್ವೀಡನ್‌ನಲ್ಲಿ 1929ರಲ್ಲಿ ಜನಿಸಿದ ಕಿಕಿ ಹಕಾನ್ಸನ್ ಅವರು 1951ರಲ್ಲಿ ಇಂಗ್ಲೆಂಡ್‌ನ ಲಂಡನ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ವಿಶ್ವ ಸುಂದರಿ ಕಿರೀಟ ಮುಡಿಗೇರಿಸಿಕೊಳ್ಳುವ ಮೂಲಕ ಇತಿಹಾಸ ನಿರ್ಮಿಸಿದರು. 1951ರ ಜುಲೈ 29ರಂದು ಇಂಗ್ಲೆಂಡ್‌ನ ಲೈಸಿಯಮ್ ಬಾಲ್ರೂಮ್‌ನಲ್ಲಿ ವಿಶ್ವ ಸುಂದರಿ ಪ್ರಶಸ್ತಿಯನ್ನು ಗೆದ್ದಾಗ ಅವರಿಗೆ 23 ವರ್ಷ ವಯಸ್ಸಾಗಿತ್ತು. ಈ ಸ್ಪರ್ಧೆಯನ್ನು ಆರಂಭದಲ್ಲಿ ಫೆಸ್ಟಿವಲ್ ಆಫ್ ಬ್ರಿಟನ್ ಎಂದು ಗುರುತಿಸಲಾಗಿತ್ತು. ಆದಾಗ್ಯೂ ಈ ಸ್ಪರ್ಧೆ ಜಗತ್ತಿನ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ಕಿಕಿ ಅವರ ಗೆಲುವು ವಿಶ್ವ ಸುಂದರಿ ಪರಂಪರೆಗೆ ನಾಂದಿ ಹಾಡಿತು. ವಿಶೇಷ ಎಂದರೆ ಅವರು ಬಿಕಿನಿ ಧರಿಸಿ ಈ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದರು. ಬಿಕಿನಿಯನ್ನು ಧರಿಸಿ ಕಿರೀಟ ಅಲಂಕರಿಸಿದ ಏಕೈಕ ಸ್ಪರ್ಧಿ ಇವರು ಎನಿಸಿಕೊಂಡಿದ್ದಾರೆ.

ಒಂದನೇ ಪುಟದಿಂದ

ಟ್ರಂಪ್‌ಗೆ ಐತಿಹಾಸಿಕ ಗೆಲುವು

ಮತ್ತು ಮಕ್ಕಳೊಂದಿಗೆ ವೇದಿಕೆಗೆ ಆಗಮಿಸಿದ ಟ್ರಂಪ್ ಅವರನ್ನು ಬೆಂಬಲಿಗರು ಜೈಕಾರ ಹಾಕಿ ಸ್ವಾಗತಿಸಿದರು. 'ಯುಎಸ್‌ಎ' ಎಂದು ಘೋಷಣೆ ಕೂಗಿ ಬರಮಾಡಿಕೊಂಡರು. ಈ ವೇಳೆ ಮಾತನಾಡಿದ ಟ್ರಂಪ್, ನಾವು ನಮ್ಮ ದೇಶ (ಅಮೆರಿಕಾ) ಸರಿಪಡಿಸಲು ಸಹಾಯ ಮಾಡಲಿದ್ದೇವೆ. ಇದು ನಮ್ಮ ದೇಶ ಹಿಂದೆಂದೂ ಕಂಡಿರದ ರಾಜಕೀಯ ಗೆಲುವು ಎಂದು ಹೇಳಿದರು. ದೇವರು ಒಂದು ಕಾರಣಕ್ಕಾಗಿ ನನ್ನ ಜೀವವನ್ನು ಉಳಿಸಿದ್ದ, ಅದೇನೆಂದರೆ, ನಮ್ಮ ದೇಶವನ್ನು ಉಳಿಸುವುದು ಮತ್ತು ಅಮೆರಿಕದ ಶ್ರೇಷ್ಠತೆಯನ್ನು ಮರುಸ್ಥಾಪಿಸುವುದಾಗಿತ್ತು. ಅದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ನಿಮಗೆಲ್ಲಾ ನಾನು ಆಭಾರಿ ಎಂದು ಹೇಳಿದ್ದಾರೆ. ಅದಲ್ಲದೇ ನಮ್ಮ ಮುಂದಿನ ಕೆಲಸ ಸುಲಭ ಇಲ್ಲ, ನೀವು ಕೊಟ್ಟ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತೇನೆ ಎಂದರು.

ಪ್ರಮಾಣ ವಚನ: ಡಿಸೆಂಬರ್‌ನಲ್ಲಿ ಡೊನಾಲ್ಡ್ ಟ್ರಂಪ್ ಅವರ ಆಯ್ಕೆಗೆ ಅಧಿಕೃತ ಮೊಹರು ಬೀಳಲಿದ್ದು, ಜ.20ರಂದು ಅಮೆರಿಕದ 47ನೇ ಅಧ್ಯಕ್ಷರಾಗಿ ಅಧಿಕಾರವನ್ನು ಟ್ರಂಪ್ ವಹಿಸಿಕೊಳ್ಳಲಿದ್ದಾರೆ.

ಮೋದಿ ಅಭಿನಂದನೆ: ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಐತಿಹಾಸಿಕ ಗೆಲುವು ಸಾಧಿಸುವ ಮೂಲಕ ಎರಡನೇ ಬಾರಿ ಅಧ್ಯಕ್ಷ ಪಟ್ಟಕ್ಕೇರುತ್ತಿರುವ ಡೊನಾಲ್ಡ್ ಟ್ರಂಪ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಅಭಿನಂದಿಸಿದ್ದಾರೆ. ತಮ್ಮ ಎಕ್ಸ್ ಖಾತೆಯಲ್ಲಿ ಡೊನಾಲ್ಡ್ ಟ್ರಂಪ್ ಜತೆಗಿರುವ ಫೋಟೊವನ್ನು ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಐತಿಹಾಸಿಕ ಗೆಲುವು ಸಾಧಿಸಿದ ನನ್ನ ಸ್ನೇಹಿತನಿಗೆ ಹೃತ್ಪೂರ್ವಕ ಅಭಿನಂದನೆಗಳು. ನಮ್ಮ ಜನರ ಯೋಗಕ್ಷೇಮಕ್ಕಾಗಿ ಮತ್ತು ಜಾಗತಿಕ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಯನ್ನು ಉತ್ತೇಜಿಸಲು ನಾವು ಒಟ್ಟಾಗಿ ಕೆಲಸ ಮಾಡೋಣ ಎಂದಿದ್ದಾರೆ.

ನಿಮ್ಮ ಹಿಂದಿನ ಅವಧಿಯ ಯಶಸ್ಸಿನಂತೆಯೇ ಭಾರತ–ಅಮೆರಿಕ ಸಮಗ್ರ ಜಾಗತಿಕ ಮತ್ತು ಕಾರ್ಯತಂತ್ರದ ಪಾಲುದಾರಿಕೆಯನ್ನು ಇನ್ನಷ್ಟು ಬಲಪಡಿಸಲು ನಿಮ್ಮ ಸಹಕಾರವನ್ನು ಎದುರು ನೋಡುತ್ತಿದ್ದೇವೆ ಎಂದು ಮೋದಿ ಪೋಸ್ಟ್ ಮಾಡಿದ್ದಾರೆ.

ನಿಖಿಲ್ ಪರ ಯಡಿಯೂರಪ್ಪ, ಕುಮಾರಸ್ವಾಮಿ ಜಂಟಿ ಪ್ರಚಾರ



ಚನ್ನಪಟ್ಟಣ, ನ.6– ಚನ್ನಪಟ್ಟಣ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರ ಇಂದು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಮತ್ತು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಜಂಟಿ ಪ್ರಚಾರ ನಡೆಸಿದರು.

ತಾಲೂಕು ಅಕ್ಕೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಅಂಬಾಡಹಳ್ಳಿ ಗ್ರಾಮದಲ್ಲಿ ಪುತ್ರನ ಪರ ಯಡಿಯೂರಪ್ಪ ಜತೆ ಸೇರಿ ಪ್ರಚಾರ ಕೈಗೊಂಡ ವೇಳೆ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಪ್ರಧಾನಮಂತ್ರಿ ಅವರು ಕಿಸಾನ್ ಸಮ್ಮಾನ್ ಯೋಜನೆ ಮೂಲಕ ರೈತರ ನೆರವಿಗೆ ನಿಂತಿದ್ದಾರೆ. ಆದರೆ, ರಾಜ್ಯ ಸರಕಾರ ರೈತರ ಹಿತಕಾಯುವಲ್ಲಿ ಸಂಪೂರ್ಣ ವಿಫಲವಾಗಿದೆ. ರೈತರ ಕಷ್ಟ ಕೇಳ್ತಿಲ್ಲ. ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಇದಕ್ಕೆ ಅಬಕಾರಿ ಇಲಾಖೆಯ ಭ್ರಷ್ಟಾಚಾರವೇ ಸಾಕ್ಷಿ ಎಂದು ಸರಕಾರದ ವಿರುದ್ಧ ಹರಿಹಾಯ್ದರು. ಕಾಂಗ್ರೆಸ್‌ನವರ ಮಾತಿಗೆ ಯಾವುದೇ ಕಾರಣಕ್ಕೂ ಬಲಿ ಆಗಬೇಡಿ. ಕಾಂಗ್ರೆಸ್‌ನಿಂದ ದೇಶಕ್ಕೆ ಒಳ್ಳೆಯದಾಗಲ್ಲ. ಪ್ರಧಾನಿ ಮೋದಿ ಅವರನ್ನು ಕೆಳಗಿಳಿಸಲು ಕಾಂಗ್ರೆಸ್ ಮುಂದಾಗಿದೆ. ಹಾಗಾಗಿ ಕಾಂಗ್ರೆಸ್‌ನವರ ಅಪಪ್ರಚಾರ ನಂಬಬೇಡಿ. ನಿಖಿಲ್ ಕುಮಾರಸ್ವಾಮಿ ಅವರನ್ನ ಶಾಸಕರನ್ನಾಗಿ ಆಯ್ಕೆ ಮಾಡುವಂತೆ ಜನರಲ್ಲಿ ಮನವಿ ಮಾಡಿಕೊಂಡರು.

ಭ್ರಷ್ಟ ಸರಕಾರ ಕಿತ್ತು ಹಾಕಲು ಹಾಗೂ ಸಿದ್ದರಾಮಯ್ಯ ಸರಕಾರಕ್ಕೆ ಪಾಠ ಕಲಿಸಲು ಕ್ಷೇತ್ರದ ಮತದಾರರು ನಿಖಿಲ್ ಕುಮಾರಸ್ವಾಮಿ ಗೆಲ್ಲಿಸಬೇಕು ಎಂದು ಮಾಜಿ ಸಿಎಂ ಯಡಿಯೂರಪ್ಪ ಕರೆ ನೀಡಿದರು. ನಿಖಿಲ್ ಗೆಲುವು ಕೇವಲ ವ್ಯಕ್ತಿಯ ಗೆಲುವಲ್ಲ. ಇದು ದೇವೇಗೌಡ ಹಾಗೂ ಮೋದಿಯವರ ಗೆಲುವಾಗುತ್ತದೆ. ಸಂಡೂರು, ಶಿಗ್ಗಾಂವಿ, ಚನ್ನಪಟ್ಟಣ ಮೂರು ಕ್ಷೇತ್ರದಲ್ಲಿ ವಾತಾವರಣ ಅನುಕೂಲಕರವಾಗಿದೆ. ಮೂರು ಕ್ಷೇತ್ರಗಳಲ್ಲೂ ನಾವು ಗೆದ್ದರೂ ಕೂಡ ಸರಕಾರದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಆದರೆ ಈ ಕಡು ಭ್ರಷ್ಟ ಸರಕಾರಕ್ಕೆ ಪಾಠ ಕಲಿಸಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸಿಎಂ ಸಿದ್ದರಾಮಯ್ಯ ಲೋಕಾಯುಕ್ತ ತನಿಖೆಗೆ ಹಾಜರಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಬಿಎಸ್‌ವೈ ಈಗಾಗಲೆ ಭ್ರಷ್ಟಾಚಾರದಲ್ಲಿ ಸಿಕ್ಕಿಬಿದ್ದ ಸಿದ್ದರಾಮಯ್ಯ ಲೋಕಾಯುಕ್ತ ತನಿಖೆ ಎದುರಿಸುತ್ತಿದ್ದಾರೆ. ರಾಜೀನಾಮೆ ಕೊಟ್ಟು ತನಿಖೆಗೆ ಹೋಗಬೇಕಿತ್ತು. ಆದರೆ ಅಧಿಕಾರದಲ್ಲಿದ್ದುಕೊಂಡೇ ಲೋಕಾ ತನಿಖೆಗೆ ಹಾಜರಾಗಿದ್ದು ಹೇಗೆಂದು ಪ್ರಶ್ನಿಸಿದರು. ಲೋಕಾಯುಕ್ತ ಅಧಿಕಾರಿಗಳೆಲ್ಲ ರಾಜ್ಯದವರೆ. ಹೀಗಾಗಿ ಸಿಎಂಗೆ ಅನುಕೂಲವಾಗುವ ರೀತಿಯಲ್ಲೆ ಎಲ್ಲವನ್ನೂ ಮಾಡಿಕೊಡುತ್ತಾರೆ. ಆದ್ದರಿಂದ ಸಿಎಂ ಪ್ರಾಮಾಣಿಕರಿದ್ದರೆ ಎಲ್ಲಾ ಹಗರಣವನ್ನು ಸಿಬಿಐಗೆ ನೀಡುವಂತೆ ಒತ್ತಾಯ ಮಾಡುತ್ತೇನೆ. ಸರಕಾರದ ಹಗರಣಗಳು ಬಗ್ಗೆ ಲೋಕಾಯುಕ್ತದಿಂದ ಯಾವ ನ್ಯಾಯ ಸಿಗೋದಿಲ್ಲ ಅಂತ ಸಿಎಂಗೂ ಗೊತ್ತಿದೆ. ಸಿಎಂ ಪರ ಹೇಳಿಕೆ ಕೊಡಿಸಲು ನಡೆದಿರುವ ಷಡ್ಯಂತ್ರ ಇದು. ಇದಕ್ಕಾಗಿ ಲೋಕಾಯುಕ್ತ ಬದಲಿಗೆ ಸಿಬಿಐಗೆ ಪ್ರಕರಣ ನೀಡುವಂತೆ ಆಗ್ರಹಿಸುವುದಾಗಿ ತಿಳಿಸಿದರು.

ತಮ್ಮ ವಿರುದ್ಧದ ಎಫ್‌ಐಆರ್ ರದ್ದುಗೊಳಿಸಲು ಕೋರಿ ಹೈಕೋರ್ಟ್ ಮೊರೆ ಹೋದ ಹೆಚ್.ಡಿ.ಕುಮಾರಸ್ವಾಮಿ

ಬೆಂಗಳೂರು, ನ.6– ಬೆಂಗಳೂರು ಪೊಲೀಸರು ದಾಖಲಿಸಿರುವ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ವಜಾಗೊಳಿಸುವಂತೆ ಕೋರಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಮತ್ತು ಬೆಂಬಲಿಗ ಸುರೇಶ್ ಬಾಬು ಕರ್ನಾಟಕ ಹೈಕೋರ್ಟ್‌ನ ಮೊರೆ ಹೋಗಿದ್ದಾರೆ.

ಕುಮಾರಸ್ವಾಮಿ ಮತ್ತು ಅವರ ಸಂಗಡಿಗರು ಸಲ್ಲಿಸಿರುವ ಅರ್ಜಿಯಲ್ಲಿ ಪೊಲೀಸ್ ಮಹಾನಿರೀಕ್ಷಕ ಎಂ.ಚಂದ್ರಶೇಖರ್ ಅವರ ದೂರು ದುರುಪಯೋಗ ಮತ್ತು ರಾಜಕೀಯ ಉದ್ದೇಶದಿಂದ ನಡೆಸಲ್ಪಟ್ಟಿದೆ ಎಂದು ಪ್ರತಿಪಾದಿಸಿದ್ದಾರೆ.

ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಸರ್ಕಾರಿ ನೌಕರನಿಗೆ ಕರ್ತವ್ಯ ನಿರ್ವಹಿಸದಂತೆ ಬೆದರಿಕೆ ಹಾಕಿದ್ದಾರೆ ಎಂದು ಚಂದ್ರಶೇಖರ್ ದೂರಿನಲ್ಲಿ ಆರೋಪಿಸಿದ್ದಾರೆ. ಕುಮಾರಸ್ವಾಮಿ ಆರೋಪಿಯಾಗಿರುವ ಗಣಿಗಾರಿಕೆ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ ನೇತೃತ್ವವನ್ನು ವಹಿಸಿರುವುದಾಗಿ ದೂರುದಾರರು ತಿಳಿಸಿದ್ದಾರೆ.

ಮುಡಾ ಹಗರಣದಲ್ಲಿ ಇಡಿ ಎಂಟ್ರಿ

ಇಂದು ದೆಹಲಿಯಲ್ಲಿ ಸಿದ್ದರಾಮಯ್ಯ ಪರ ಅಹಿಂದ ಬೃಹತ್ ಪ್ರತಿಭಟನೆ

ಬೆಂಗಳೂರು, ನ.6– ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ಕೇಂದ್ರದ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿ ಇದೀಗ ಅಹಿಂದ ಅಖಾಡಕ್ಕೆ ಇಳಿದಿದೆ. ಇದೀಗ ಸಿದ್ದರಾಮಯ್ಯ ಅವರನ್ನು ಬೆಂಬಲಿಸಿ ರಾಷ್ಟ್ರರಾಜಧಾನಿ ದೆಹಲಿಯಲ್ಲಿ ಗುರುವಾರ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದೆ. ಈ ಪ್ರತಿಭಟನೆಯಲ್ಲಿ ಹಲವು ಸಾಹಿತಿಗಳು, ಪ್ರಗತಿಪರ ಚಿಂತಕರು ಸಾಥ್ ನೀಡಲಿದ್ದಾರೆ.

ಗುರುವಾರ ದೆಹಲಿ ಕರ್ನಾಟಕ ಸಂಘದಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದ್ದು, ಅಹಿಂದ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾವ್ ನೇತೃತ್ವದಲ್ಲಿ ನಡೆಯಲಿರುವ ಪ್ರತಿಭಟನೆಯಲ್ಲಿ ಮಾಜಿ ಸಂಸದ ಎಲ್ ಹನುಮಂತಯ್ಯ, ಪ್ರಗತಿಪರ ಚಿಂತಕರಾದ ಎಸ್‌ಜಿ ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ಬಂಜಗೆರೆ ಜಯಪ್ರಕಾಶ್, ಲೀಲಾ ಸಂಪಿಗೆ ಸೇರಿದಂತೆ ಹಲವರು ಭಾಗಿಯಾಗಲಿದ್ದಾರೆ.

ಸಿಎಂ ಸಿದ್ದರಾಮಯ್ಯ ವಿರುದ್ಧ ಉದ್ದೇಶಪೂರ್ವಕವಾಗಿ ಮುಡಾ ಹಗರಣದ ಆರೋಪವನ್ನು ಹೊರಿಸಿ ಎಫ್‌ಐಆರ್ ದಾಖಲು ಮಾಡಲಾಗಿದೆ. ಅಷ್ಟೇ ಅಲ್ಲದೆ ಕೇಂದ್ರದ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ಅವರನ್ನು ಅಸ್ಥಿರಗೊಳಿಸುವ ಪ್ರಯತ್ನವನ್ನು ನಡೆಸಲಾಗುತ್ತಿದೆ ಎಂಬುವುದು ಪ್ರತಿಭಟನಾಕಾರರ ವಾದವಾಗಿದೆ.

ಸಚಿವ ಜಮೀರ್ ವಿರುದ್ಧ ಕಾಂಗ್ರೆಸ್ ಶಾಸಕರಿಂದ ಹೈಕಮಾಂಡ್‌ಗೆ ಪತ್ರ



ಬೆಂಗಳೂರು, ನ. 6– ವಕ್ಫ್ ವಿವಾದ ಹಾಗೂ ವಿವಾದಾತ್ಮಕ ಹೇಳಿಕೆಗಳ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಕಾಂಗ್ರೆಸ್ ಹೈಕಮಾಂಡ್‌ಗೆ ಕಾಂಗ್ರೆಸ್‌ನ ಕೆಲ ಶಾಸಕರು ಪತ್ರ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಬರೆಯಲಾಗಿದೆ ಎನ್ನಲಾಗಿರುವ ಗೌಪ್ಯ ಪತ್ರದಲ್ಲಿ ಜಮೀರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಲಾಗಿದೆ. ಆದರೆ ಈ ಲೆಟರ್ ಹಿಂದೆ ಕಾಂಗ್ರೆಸ್‌ನಲ್ಲಿರುವ ಬಣ ರಾಜಕಾರಣದ ಕೈವಾಡ ಇದೆ ಎಂಬ ಮಾತುಗಳು ಕೇಳಿಬರುತ್ತಿವೆ. ಸಚಿವ ಜಮೀರ್ ಅಹ್ಮದ್ ಅವರು ಇತ್ತೀಚೆಗೆ ನೀಡುತ್ತಿರುವ ಹೇಳಿಕೆಗಳು ವಿವಾದಕ್ಕೆ ಕಾರಣವಾಗುತ್ತಿದೆ. ಅದರಲ್ಲೂ ವಕ್ಫ್ ವಿಚಾರವಾಗಿ ರೈತರಿಗೆ ನೀಡಿರುವ ನೋಟಿಸ್ ವಿವಾದವನ್ನು ತಕ್ಷಣದಲ್ಲೇ ತಣ್ಣಗಾಗಿಸುವ ಬದಲಾಗಿ ಜಮೀರ್ ಮತ್ತಷ್ಟು ಬಿಗಡಾಯಿಸಿದರು ಎಂಬ ಆರೋಪ ಕೇಳಿಬರುತ್ತಿದೆ.

ರಾಜ್ಯದಲ್ಲಿ ಮೂರು ಕ್ಷೇತ್ರಗಳಲ್ಲಿ ಉಪ ಚುನಾವಣೆ ನಡೆಯುವ ಸಂದರ್ಭದಲ್ಲಿ ಈ ವಿವಾದವನ್ನು ಬಿಜೆಪಿ ಮತ್ತು ಜೆಡಿಎಸ್ ಬಳಸಿಕೊಳ್ಳಲು ಜಮೀರ್ ಅವರೇ ಅವಕಾಶ ಮಾಡಿಕೊಟ್ಟರು ಎಂಬ ಆರೋಪವನ್ನು ಕಾಂಗ್ರೆಸ್‌ನ ಒಂದು ಬಣ ಮಾಡುತ್ತಿದೆ. ಡಿಕೆ ಶಿವಕುಮಾರ್ ಅವರ ಕ್ಯಾಂಪಿನಲ್ಲಿ ಗುರುತಿಸಿಕೊಂಡಿರುವ ಕೆಲವು ಶಾಸಕರು ಹಾಗೂ ಮುಖಂಡರು ಜಮೀರ್ ನಡೆಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಈ ನಡುವೆ ಶಿಗ್ಗಾವಿ ಕ್ಷೇತ್ರದಲ್ಲಿ ಟಿಕೆಟ್ ಹಂಚಿಕೆ ವಿಚಾರವಾಗಿಯೂ ಜಮೀರ್ ಹಠ ಸಮಸ್ಯೆಯನ್ನು ಸೃಷ್ಟಿಸಿದೆ ಎಂಬ ಮಾತೂ ಕೇಳಿ ಬರುತ್ತಿದೆ. ಶಿಗ್ಗಾವಿಯಲ್ಲಿ ಈ ಬಾರಿ ಅಜ್ಜಂಪೀರ್ ಖಾದ್ರಿ ಅವರಿಗೆ ಟಿಕೆಟ್ ಕೊಡಿಸಲು ಡಿಕೆಶಿ ಮುಂದಾಗಿದ್ದರು. ಆದರೆ ಜಮೀರ್ ಇದಕ್ಕೆ ಒಪ್ಪದೆ ಯಾಸೀರ್ ಖಾನ್ ಪಠಾಣ್‌ಗೆ ಟಿಕೆಟ್ ಕೊಡಿಸುವಲ್ಲಿ ಯಶಸ್ವಿಯಾದರು. ಸಿದ್ದರಾಮಯ್ಯ ಮುಂದೆ ಜಮೀರ್ ಹಠ ಹಿಡಿದಿರುವ ಕಾರಣದಿಂದಾಗಿಯೇ ಅಜ್ಜಂಪೀರ್‌ಗೆ ಟಿಕೆಟ್ ಕೈತಪ್ಪಿದೆ ಎಂಬ ಆರೋಪ ಇದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಜಮೀರ್ ವಿರುದ್ಧ ಹೈಕಮಾಂಡ್ ನಾಯಕರಿಗೆ ಪತ್ರವನ್ನು ಬರೆಯಲಾಗಿದೆ. ಪತ್ರದಲ್ಲಿ ಜಮೀರ್ ಈ ಹಿಂದೆ ನೀಡಿರುವ ವಿವಾದಾತ್ಮಕ ಹೇಳಿಕೆಗಳು ಹಾಗೂ ಅದರಿಂದಾಗುತ್ತಿರುವ ಹಾನಿಯ ಬಗ್ಗೆ ಉಲ್ಲೇಖ ಮಾಡಲಾಗಿದೆ. ಪಕ್ಷದಲ್ಲಿರುವ ಕೆಲ ಮುಸ್ಲಿಂ ಸಮುದಾಯದ ಶಾಸಕರಿಗೂ ಜಮೀರ್ ನಡೆಯ ಬಗ್ಗೆ ಅಸಮಾಧಾನ ಇದೆ ಎನ್ನಲಾಗುತ್ತಿದೆ. ಆದರೆ ಹೈಕಮಾಂಡ್‌ಗೆ ಈ ಪತ್ರವನ್ನು ಯಾರು ಬರೆದಿದ್ದಾರೆ ಎಂಬುವುದನ್ನು ಯಾವ ಶಾಸಕರು ಕ್ಲೈಮ್ ಮಾಡಿಕೊಳ್ಳುತ್ತಿಲ್ಲ. ಮುಸ್ಲಿಂ ಸಮುದಾಯದ ಇತರ ಶಾಸಕರು, ಸಿಎಂ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಳ್ಳಲು ಜಮೀರ್ ಕಾರಣದಿಂದಲೇ ಸಾಧ್ಯವಾಗುತ್ತಿಲ್ಲ ಎಂಬ ಮಾತೂ ಪಕ್ಷದ ಆಂತರಿಕ ವಲಯದಲ್ಲಿ ಕೇಳಿ ಬರುತ್ತಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಜಮೀರ್ ವಿರುದ್ಧ ಹೈಕಮಾಂಡ್ ನಾಯಕರಿಗೆ ಪತ್ರವನ್ನು ಬರೆಯಲಾಗಿದೆ ಎಂಬುವುದು ಕಾಂಗ್ರೆಸ್ ವಲಯದಲ್ಲಿ ಕೇಳಿ ಬರುತ್ತಿರುವ ಮಾತು.

ಹೈಕೋರ್ಟ್‌ಗೆ ದರ್ಶನ್ ಆರೋಗ್ಯ ವರದಿ ಸಲ್ಲಿಕೆ



ಬೆಂಗಳೂರು, ನ.6– ಹೈಕೋರ್ಟ್‌ನ ನಿರ್ದೇಶನದ ಅನುಸಾರ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ನಟ ದರ್ಶನ್ ಆರೋಗ್ಯಕ್ಕೆ ಸಂಬಂಧಿಸಿದ ವೈದ್ಯಕೀಯ ವರದಿಯನ್ನು ಅವರ ಪರ ವಕೀಲರು ಹೈಕೋರ್ಟ್‌ಗೆ ಬುಧವಾರ ಸಲ್ಲಿಸಿದ್ದಾರೆ.

ದರ್ಶನ್ ಅವರಿಗೆ ಇತ್ತೀಚೆಗಷ್ಟೇ ಮಧ್ಯಂತರ ಜಾಮೀನು ನೀಡಿದ್ದ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠವು, ಯಾವಾಗ ಶಸ್ತ್ರಚಿಕಿತ್ಸೆ, ಎಷ್ಟು ದಿನ ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ. ತದನಂತರ ಚಿಕಿತ್ಸೆ ಏನಾದರೂ ಇರಲಿದೆಯೇ ಎಂಬ ವಿವರಗಳನ್ನು ಜೈಲಿನಿಂದ ಬಿಡುಗಡೆಯಾದ ಒಂದು ವಾರದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂಬ ಷರತ್ತು ವಿಧಿಸಿತ್ತು.

ಈ ಆದೇಶದ ಅಡಿಯಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯಲು ಆರು ವಾರಗಳ ಷರತ್ತುಬದ್ಧ ಮಧ್ಯಂತರ ಜಾಮೀನು ಪಡೆದು ಜೈಲಿನಿಂದ ಹೊರಬಂದಿರುವ ದರ್ಶನ್, ಸದ್ಯ ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಏತನ್ಮಧ್ಯೆ, ವರದಿಯ ಮುಖ್ಯಾಂಶಗಳ ಬಗ್ಗೆ ವಿವರಿಸಿರುವ ಮೂಲಗಳು, ದರ್ಶನ್ ಆಪರೇಷನ್ ಬಗ್ಗೆ ಇನ್ನೂ ನಿರ್ಧಾರ ಮಾಡಿಲ್ಲ. ಸದ್ಯ ಅವರಿಗೆ ಫಿಸಿಯೋಥೆರಪಿ ನೀಡಲಾಗುತ್ತಿದೆ. ಆದರೆ, ಫಿಸಿಯೋಥೆರಪಿಯೇ ಅಂತಿಮ ಅಲ್ಲ ಎನಿಸುತ್ತಿದೆ. ಆದಾಗ್ಯೂ, ಸದ್ಯದ ನೋವಿನಿಂದ ಅವರು ಚೇತರಿಕೆ ಕಾಣದೇ ಇದ್ದಲ್ಲಿ ಶಸ್ತ್ರಚಿಕಿತ್ಸೆ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ವರದಿಯಲ್ಲಿ ವಿವರಿಸಲಾಗಿದೆ' ಎಂದು ಹೇಳಿವೆ.

ದರ್ಶನ್‌ಗೆ ಶಸ್ತ್ರಚಿಕಿತ್ಸೆ ವಿಧಾನಗಳ ಬಗ್ಗೆ ಈಗಾಗಲೇ ಮಾಹಿತಿ ನೀಡಲಾಗಿದೆ. ಆದರೆ, ಅವರಿನ್ನೂ ಶಸ್ತ್ರಚಿಕಿತ್ಸೆಗೆ ಒಪ್ಪಿಗೆ ಸೂಚಿಸಿಲ್ಲ. ರೋಗಿ ಒಪ್ಪಿದ ನಂತರವೇ ಶಸ್ತ್ರಚಿಕಿತ್ಸೆಯ ದಿನಾಂಕದ ಬಗ್ಗೆ ಅಂತಿಮ ನಿರ್ಧಾರ ಮಾಡಲಾಗುವುದು ಎಂದು ಬಿಜಿಎಸ್ ಆಸ್ಪತ್ರೆಯ ಡಾ.ನವೀನ್ ನೀಡಿರುವ ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ, ಮೈಸೂರು ನಗರ-570011, ಸಿದ್ದಾರ್ಥ ನಗರ, ತ್ಯಾಗ ಮಾರ್ಗ, ಮನೆ ನಂಬರ್: 292, ರ ನಿವಾಸಿಯಾದ ಶ್ರೀಮತಿ. ಕಮಲಮ್ಮ ಕೋಂ: ಲೇ. ದೊಡ್ಡವೆಂಕಟೇಗೌಡ, ಶ್ರೀ. ಹೇಮಂತ್ ಕುಮಾರ್ ಡಿ. ಬಿನ್॥ ಲೇ. ದೊಡ್ಡವೆಂಕಟೇಗೌಡ, ಶ್ರೀ. ಡಿ. ಜಯಪ್ರಕಾಶ್ ಬಿನ್: ಲೇ, ದೊಡ್ಡವೆಂಕಟೇಗೌಡ ಮತ್ತು ಮಂಡ್ಯ ಜಿಲ್ಲೆ-571438, ಶ್ರೀರಂಗಪಟ್ಟಣ, ಜೈನ್ ಬಸದಿ, ಪೋಸ್ಟ್ ಆಫೀಸ್ ರಸ್ತೆಯಲ್ಲಿ ವಾಸವಾಗಿರುವ ಶ್ರೀಮತಿ, ಪರಿಮಳ ಡಿ. ಬಿನ್: ಲೇ. ದೊಡ್ಡವೆಂಕಟೇಗೌಡ ಇವರುಗಳಿಂದ ನನ್ನ ಕಕ್ಷಿದಾರರು ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಆಚಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್: ಮೈಸೂರು ನಗರ, ನಜ್ಜರ್‌ಬಾದ್ ಮೊಹಲ್ಲಾ, ಟಿ. ಎನ್. ಪುರ ರಸ್ತೆ, ಸಿದ್ದಾರ್ಥ ಲೇಔಟ್, ಇಲ್ಲಿರುವ ಪೂರ್ವ ಪಶ್ಚಿಮ: (40+46)/2 ಅಡಿ, ಉತ್ತರ ದಕ್ಷಿಣ : 60.5 ಅಡಿ, ಒಟ್ಟು ವಿಸ್ತೀರ್ಣ: 241.68715450 ಚದರ ಮೀಟರ್ ಅಳತೆಯ ನಿವೇಶನ ಸಂಖ್ಯೆ: 292 ಮತ್ತು ಇದರಲ್ಲಿ ಕಟ್ಟಿರುವ 139.3545 ಚದರ ಮೀಟರ್ ನೆಲ ಅಂತಸ್ತು, 139.3545 ಚದರ ಮೀಟರ್ ಮೊದಲನೇ ಅಂತಸ್ತು, ಆರ್.ಸಿ. ಸಿ ಚಾವಣಿ, ಮೊಸಾಯಿಕ್ ನೆಲಹಾಸಿನ ವಸತಿ ಕಟ್ಟಡ ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ:- ಸ್ವತ್ತಿನ ಸಂಖ್ಯೆ: 291, ಪಶ್ಚಿಮಕ್ಕೆ:- ಸ್ವತ್ತಿನ ಸಂಖ್ಯೆ: 293, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ:- ಸ್ವತ್ತಿನ ಸಂಖ್ಯೆ: 299

Sd/- M.N. Prakash Kalappa
KAR-1996-2000
2-3, First Floor, PRI Complex, 67/7A,
New Sayyajirao Road, Fort Mohalla,
Mysuru-570004, Cell: 93431 12535
E-mail: mnprakashkalappa@gmail.com
ಮೈಸೂರು : 06/11/2024

11ನೇ ವರ್ಷದ ಪುಣ್ಯಸ್ಮರಣೆ



ಪಿ. ರಾಮಚಂದ್ರ (ವಿಜಿ) (ಕೆ.ಆರ್.ಆಸ್ಪತ್ರೆ)

ದುಃಖತಪ್ತರು: ಪತ್ನಿ ಗಾಯಿತ್ರಿ ರಾಮಚಂದ್ರ ಮಕ್ಕಳು ಮತ್ತು ಮೊಮ್ಮಕ್ಕಳು.

9ನೇ ವರ್ಷದ ಪುಣ್ಯಸ್ಮರಣೆ



ಮೇಸ್ತ್ರಿ ರಮೇಶ್

ಎನ್.ಆರ್.ಮೊಹಲ್ಲಾ, ಮೈಸೂರು.

ಇಂತಿ ದುಃಖತಪ್ತರು : ಪತ್ನಿ, ಮಕ್ಕಳು, ತಮ್ಮಂದಿರು ಹಾಗೂ ಕುಟುಂಬವರ್ಗದವರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಇವರು ದಿನಾಂಕ 26-10-2024ನೇ ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ತತ್ಸಂಬಂಧವಾಗಿ ದಿನಾಂಕ 07-11-2024ನೇ ಗುರುವಾರ ಮಧ್ಯಾಹ್ನ 12-30 ಗಂಟೆಗೆ ಉತ್ತರ ಕ್ರಿಯಾದಿ ಕಾರ್ಯವನ್ನು ಉಡುಪಿ ಕೃಷ್ಣಮಂದಿರ, ನಾರಾಯಣಶಾಸ್ತ್ರಿ ರಸ್ತೆ, ಮೋರ್ ಪಕ್ಕ, ಮೈಸೂರು. ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಶ್ರೀ ಪೃಥ್ವಿರಾಜ್.ಎಂ


ಇಂತಿ ದುಃಖತಪ್ತರು : ಕುಟುಂಬದವರು

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

5ನೇ ವರ್ಷದ ಸವಿನೆನಪು



ನಾಗರಾಜು
(ನಿವೃತ್ತ ಶಿಕ್ಷಕರು)

ಸದಾ ನಿಮ್ಮ ನೆನಪಿನೊಂದಿಗೆ

ಪತ್ನಿ ಸಿದ್ದಮ್ಮ ಕೆ.ಎಸ್, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಮೈಸೂರು

ನಗರಸಭಾ ಕಾರ್ಯಾಲಯ ಚಾಮರಾಜನಗರ

Email : itstaff_ulb_chamarajanagar @yahoo.co.in
website: ww.chamarajanagaracity.gov.in

ಸಂಖ್ಯೆ: ನಸಚಾ/ಆ.ಶಾ/ಉಪಹಾರ/ಪಿ.ಆರ್/02/2023-24 ದಿನಾಂಕ: 06.11.2024

ಇ–ಟೆಂಡರ್ ಪ್ರಕಟಣೆ

ಚಾಮರಾಜನಗರ ನಗರಸಭೆಯ ಆರೋಗ್ಯ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರು ಮತ್ತು ನೇರವೇತನ ಪೌರಕಾರ್ಮಿಕರು ಮತ್ತು ಹೊರ ಗುತ್ತಿಗೆ ಕಾರ್ಮಿಕರುಗಳಿಗೆ ಬೆಳಗಿನ ಉಪಹಾರ ಸರಬರಾಜು ಮಾಡುವ ಸೇವೆಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಏಕಲಕೋಟೆ ಪದ್ಧತಿಯಲ್ಲಿ ಅರ್ಹ ಹೋಟೇಲ್ ಮಾಲೀಕರು/ಕೇಟರರ್ಸ್ ರವರಿಂದ ಕೆ.ಸಿ.ಡಾಕ್ಯುಮೆಂಟ್ ನಿಯಮಗಳಗನುಸಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ.18.01 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.45100/– ಆಗಿರುತ್ತದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆನ್‌ಲೈನ್‌ನಲ್ಲಿ ಸರಬರಾಜುದಾರರು ಭರ್ತಿ ಮಾಡಿದ ಟೆಂಡರ್‌ಅನ್ನು ಸಲ್ಲಿಸಲು ಕೊನೆಯ ದಿನಾಂಕ:– 22.11.2024 ಸಂಜೆ 5.30 ಗಂಟೆಯವರೆಗೆ ಟೆಂಡರನ್ನು ತೆರೆಯುವ ದಿನಾಂಕ:–– 25.11.2024 ಬೆಳಗ್ಗೆ 11.30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಆರೋಗ್ಯ ಶಾಖೆಯನ್ನು ಸಂಪರ್ಕಿಸಲು ಸೂಚಿಸಿದೆ.

ಸಹಿ/– ಶ್ರೀ ರಾಮದಾಸ್.ಎಸ್.ವಿ ಪೌರಾಯುಕ್ತರು ನಗರಸಭೆ ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:384: 2024–25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು

ಅಲ್ಪಾವಧಿ ಐಟಂವಾರು ಟೆಂಡರು ಅಧಿಸೂಚನೆ ಸಂಖ್ಯೆ: 05/2024–25/ 3ನೇ ಕರೆ ದಿನಾಂಕ: 04.11.2024

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು ಇವರಿಂದ ಒಟ್ಟು 01 ಕಾಮಗಾರಿಗೆ ಲೆಕ್ಕ ಶೀರ್ಷಿಕೆ 2059–80–053–4–00–200 ಅಡಿಯಲ್ಲಿ KW-1ರ ನಿಬಂಧನೆ ಮತ್ತು ಷರತ್ತುಗಳನ್ವಯ ಕರ್ನಾಟಕ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಐಟಂವಾರು ಟೆಂಡರ್‌ನ್ನು (http://KPPP.karnataka.gov.in) ಆಹ್ವಾನಿಸಲಾಗಿದ್ದು, ಟೆಂಡರ್ ಕ್ವೋರಿಸ್‌ಗೆ ದಿ: 08.11.2024 ಆಗಿರುತ್ತದೆ. ಟೆಂಡರ್‌ನ್ನು ದಿ: 11.11.2024 ರಂದು ಸಂಜೆ 4.00 ಘಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತ ರೂ.8.39 ಲಕ್ಷಗಳು ಹಾಗೂ ಇ.ಎಂ.ಡಿ.ಯ ಮೊತ್ತ ರೂ.0.10 ಲಕ್ಷಗಳಾಗಿರುತ್ತದೆ. ಲೋಕೋಪಯೋಗಿ 4ನೇ ದರ್ಜೆ ಮತ್ತು ಮೇಲ್ಪಟ್ಟ ಲೋಕೋಪಯೋಗಿ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.
DIPR/DDMYS-753/KSMCA-516/2024-25